ಧಾರ್ಮಿಕ-ಸಾಹಿತ್ಯ (ಕುಸುಮ-೨)

ವೇದಾಂತ ಮಾರ್ಗದರ್ಶಿನಿ

(೩ ಭಾಗಗಳಲ್ಲಿ ಸಂಕ್ಷಿಪ್ತ)

—:ಸಂಗ್ರಾಹಕರು:—

ಟಿ. ಬಿ. ಕೇಶವರಾವ್

ಬಳ್ಳಾರಿ.

ಕ್ರಯ : 2-00

1977

ಶಾಂತಿ ಪಾಠ

ಹರಿಃ ಓಂ

ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣ ಮುದಚ್ಯತೇ ।
ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ ॥

ಅದು (ಪರಬ್ರಹ್ಮವು) ಪೂರ್ಣವು. ಇದು (ವ್ಯಕ್ತವಾದ ಜಗತ್ತು) ಪೂರ್ಣವು; ಪೂರ್ಣದಿಂದ (ಪರಬ್ರಹ್ಮದಿಂದ) ಪೂರ್ಣವು (ಜಗತ್ತು) ಹೊರ ಬಂದಿದೆ; ಪೂರ್ಣದ (ಜಗತ್ತಿನ) ಪೂರ್ಣತ್ವವನ್ನು (ಬ್ರಹ್ಮತ್ವವನ್ನು ತೆಗೆದ ಮೇಲೆ (ಗ್ರಹಿಸಿದ ಮೇಲೆ) ಪೂರ್ಣವೇ (ಪರಬ್ರಹ್ಮವೇ) ಉಳಿಯುತ್ತದೆ.

ಸಹನಾವವತು ಸಹ ನೌ ಭುನಕ್ತು । ಸಹ
ವೀರ್ಯಂ ಕರವಾವಹೈ ತೇಜಸ್ವಿ ನಾವಧೀತ
ಮಸ್ತು । ಮಾ ವಿದ್ವಿಷಾವಹೈ ॥

(ಪರಮೇಶ್ವರನು ಗುರು ಶಿಷ್ಯರಾದ) ನಮ್ಮಿಬ್ಬರನ್ನೂ ಕಾಪಾಡಲಿ; ನಮ್ಮಿಬ್ಬರನ್ನೂ ಜೊತೆಯಲ್ಲಿ ಪೋಷಿಸಲಿ; (ನಾವು) ಜೊತೆಯಲ್ಲಿ ಸಾಮರ್ಥ್ಯವನ್ನು ಉಂಟು ಮಾಡುವಂತಾಗಲಿ; ನಮ್ಮಿಬ್ಬರ ಅಧ್ಯಯನವು ತೇಜಸ್ವಿಯಾಗಲಿ; (ನಾವು ಪರಸ್ಪರ) ದ್ವೇಷ ಮಾಡದೆ ಇರುವಂತಾಗಲಿ

ಓಂ ಶಾಂತಿಃ ಶಾಂತಿಃ ಶಾಂತಿಃ

....ಮುನ್ನುಡಿ....

ಶ್ರೀ ರಾಯರು ಕನ್ನಡ ಭಾಷಾ ಪರಿಚಯವಿರುವ ನನ್ನನ್ನು ಇಲ್ಲಿ ಇಂದು ಭೇಟಿ ಮಾಡಿದುದು ಅಪೂರ್ವ ಸಮಾಗಮ. ಪುಸ್ತಕವು ಪುಟ್ಟದಾದರೂ ವೇದ-ಉಪನಿಷತ್ತುಗಳ ಅಮೂಲ್ಯ ವಿಷಯಗಳನ್ನೊಳಗೊಂಡಿದೆ. ರಾಯರು ಮಾರ್ಗದರ್ಶನಕ್ಕೆಂದು ಹೇಳುವುದಾದರೂ, ಎಲ್ಲರೂ ಮುಖ್ಯವಾಗಿ ಜ್ಞಾನ ಪ್ರಕಾಶದ ಅನುಭವ ಪಡೆಯಲಿಚ್ಛಿಸುವವರು, ಈ ಚಿಕ್ಕ ಹೊತ್ತಿಗೆಯಲ್ಲಿನ ಅಂಶಗಳನ್ನು ಕುರಿತು ಆಳವಾದ ಅಭ್ಯಾಸ ನಡೆಸಲೆಂದಾಶಿಸುತ್ತೇನೆ.

ಇಂತಹ ಪುಸ್ತಕಗಳು ಅಧಿಕ ಸಂಖ್ಯೆಯಲ್ಲಿ ಪ್ರಕಟವಾಗಬೇಕಷ್ಟೇ ಅಲ್ಲದೆ, ಉಚಿತವಾಗಿ ಹಂಚಲ್ಪಡುವ :''ಧರ್ಮದಾನ''ದ ವ್ಯವಸ್ಥೆಯಾದರೊಳಿತು. ರಾಯರು ಈ ದಿಶೆಯಲ್ಲಿ ಹೆಜ್ಜೆ ಇಟ್ಟಿರುವುದು ಅಭಿನಂದನೀಯ.

Camp :
ಸಮರ್ಥ ರಾಮದಾಸ
ಆಶ್ರಮ.
ಸಜ್ಜನಗಢ.
(ಮಹರಾಷ್ಟ್ರ.)
ತಾ॥ 14-12-1976

ಸ್ವಾಮಿ ವಿಶ್ವೇಶ್ವರಾನಂದ
ಕಾಶಿ.
(ಉತ್ತರ ಪ್ರದೇಶ.)

ಪ್ರಕಾಶಕರ ಕೃತಜ್ಞತೆ.

ಕೆಲ ಆತ್ಮೀಯ-ಬಂಧುಗಳು ಈ ಪುಸ್ತಕದ ಶೀಘ್ರ ಪ್ರಕಟನೆಗಾಗಿ ಸಹಾಯ - ಸಹಕಾರಗಳನ್ನೊದಗಿಸಿರುವರು. ಅವರಿಗೆ ನಮ್ಮ ಹಾರ್ದಿಕವಾದ ಕೃತಜ್ಞತಾಪೂರ್ವಕ ವಂದನೆಗಳು.

ಪ್ರಕಾಶಕ - ಅಧ್ಯಾತ್ಮ ಕಾರ್ಯಾಲಯ,
ಬಳ್ಳಾರಿ.

—ಅನುಕ್ರಮಣಿಕೆ—

—ಪ್ರಥಮ ಭಾಗ—

ವೇದಗಳ ಸಮಗ್ರ ವಿವರಣೆ

ವೇದಗಳು - ಅರ್ಥ - ಮೂಲ.

	ಚತುರ್ವೇದಗಳು	ಮಂತ್ರಗಳ ಸಂಖೆ	
1	ಋಗ್ವೇದ	10552	ಮಂತ್ರ
2	ಯಜುರ್ವೇದ	1975	,,
3	ಸಾಮವೇದ	1875	,,
4	ಅಥರ್ವವೇದ	5987	,,
		20,389	ಮಂತ್ರಗಳು

'ವಿದ್' ಧಾತುವಿನಿಂದ 'ವೇದ' ಎಂಬ ಶಬ್ದವು ಹುಟ್ಟಿದೆ. ಇದರ ಅರ್ಥ ತಿಳುವಳಿಕೆ ಅಥವ ಜ್ಞಾನ ಎಂದಾಗುತ್ತೆ. ಅನೇಕ ಸಾವಿರಾರು ವರ್ಷಗಳ ಹಿಂದೆ ಸಿಂಧು, ಗಂಗ ನದಿಗಳ ತೀರದಲ್ಲಿ ಬಂದು ನೆಲೆಸಿದ ಆರ್ಯರೆಂಬುವರು ಬಹುಮಟ್ಟಿಗೆ ತಿಳುವಳಿಕೆಯುಳ್ಳವರಾಗಿದ್ದರು. ಜ್ಞಾನಿಗಳಾದ ಅವರು ತಮ್ಮ ಭಾವನೆ, ತಿಳುವಳಿಕೆಯನ್ನು ಒಟ್ಟುಗೂಡಿಸಿ ಬೋಧಿಸಿದರು. ಗುರುವಿನಿಂದ ಶಿಷ್ಯನಿಗೆ, ಅವರಿಂದ ಮತ್ತೆ ಶಿಷ್ಯ-ಗಣಕ್ಕೆ ಮತ್ತೆ ಅವರಿಂದ ಇತರರಿಗೆ – ಹೀಗೆ ಪರಂಪರಾಗತವಾಗಿ ಇಂದಿನವರೆಗೂ ನಡೆದು ಬಂದ ಈ ಜ್ಞಾನರಾಶಿಗೇ ವೇದವೆಂದು ಹೆಸರಾಯಿತು.

ಶೃತಿ - ನಿಗಮ, ಆಮ್ನಾಯ ಎಂದು ವೇದಕ್ಕೆ ಬೇರೆ ಬೇರೆ ಹೆಸರುಗಳುಂಟು. ಭಾರತೀಯ ಸಂಸ್ಕೃತಿಗೆ ವೇದಗಳೇ ಮುಖ್ಯವಾದ ಆಧಾರ.

—ವೇದಗಳ ಶುದ್ಧತೆಯ ಸಂರಕ್ಷಣೆ—

ಸಾವಿರಾರು ವರ್ಷಗಳಿಂದ ಒಬ್ಬರಿಂದೊಬ್ಬರಿಗೆ ಬಾಯಿ ಪಾಠದ ಮೂಲಕವೇ ವೇದದ ಪ್ರಚಾರವಾಯಿತು. ರಾಗದಿಂದ ಹೇಳುವ ವಿಧಾನ ಪದ, ಅಕ್ಷರ, ಮಾತ್ರೆ, ಸ್ವರ ಇವುಗಳಲ್ಲಿ ಎಳ್ಳಷ್ಟು ವ್ಯತ್ಯಾಸವಾದರೂ, ಘೋರ ನರಕವು ಲಭ್ಯವಾಗುವುದೆಂಬ, ಅಪಸ್ವರದಿಂದ ಹಾಡಿದಲ್ಲಿ ಹಾಡಿದವನ ಪಿತೃಗಳು ದುರ್ಗತಿ ಪಡೆಯುವರೆಂಬ, ತನಗೆ ಅತಿಶಯ ಹಾನಿಯಾಗುವದೆಂಬ, ವೇದವಾಣಿಯ ಭಯವೇ ವೇದಗಳ ಶುದ್ಧತೆಯ ಸಂರಕ್ಷಣೆಗೆ ಹಾದಿಯಾಯಿತು, ಈ ಭಯ ಕಟ್ಟು-ನಿಟ್ಟುಗಳಿಂದ ವೇದದ ಪದಗಳೂ ಸ್ವರಗಳೂ ಇಂದಿಗೂ ಶುದ್ಧವಾಗಿಯೇ ಉಳಿದಿವೆ.

—ವೇದಗಳ ಕಾಲ ನಿರ್ಣಯ—

ವೇದಗಳು ಅನಾದಿಯೆಂದು ಹೇಳುವ ಸಂಪ್ರದಾಯವುಂಟು. ವೇದಗಳಲ್ಲಿ ಋಗ್ವೇದವು ಅತ್ಯಂತ ಪ್ರಾಚೀನವಾದುದೆಂದು ಸಿದ್ಧವಾಗಿದೆ. ವೇದಗಳಕಾಲ ನಿರ್ಣಯ ಮಾಡಿದವರಲ್ಲಿ ಮೊದಲಿಗನಾದ ಮ್ಯಾಕ್ಸಮುಲ್ಲರ್ ಕ್ರಿ. ಪೂ 1200 ಕ್ಕೆ ಋಗ್ವೇದದ ಪ್ರಾರಂಭಿಕ ಮಂತ್ರಗಳ ರಚನೆಯಾಗಿರಬೇಕೆಂದು ಹೇಳಿದ್ದಾನೆ ವೇದ ಮಂತ್ರಗಳ ರಚನೆ ಕ್ರಿ. ಪೂ. 1500 ರಲ್ಲಿ ಆಗಿರಬೇಕೆಂದು ಮೆಕ್ಡಾನೆಲ ಮತ್ತು ಕೀತ್‌ರವರು ಹೇಳಿದ್ದಾರೆ 'ಹೌಗ್' ಎಂಬ ಪಾಶ್ಚಾತ್ಯ ಪಂಡಿತನು ಬ್ರಾಹ್ಮಣಗಳಲ್ಲಿನ ಜೋತಿಷ ವಾಕ್ಯಗಳ ಆಧಾರದ ಮೇಲೆ ಸೂಕ್ತಗಳ ರಚನೆ ಕ್ರಿ. ಪೂ. 2400 ರಿಂದ 2000 ಒಳಗೆ ಆಗಿರಬೇಕೆಂದು ನಿಶ್ಚಯಿಸಿದ್ದಾನೆ. ಹರ್ಮನ್ ಯಾಕೂಬಿ ವೇದ ರುಕ್ಕುಗಳ ಕಾಲ ಕ್ರಿ. ಪೂ. 4500 ಇರಬೇಕೆಂಬ ನಿರ್ಣಯಕ್ಕೆ ಬಂದಿರುವನು.

ಬಾಲ ಗಂಗಾಧರ ತಿಲಕರು ಪೂರ್ಣ ಪರಿಶೋಧನೆ ನಡೆಸಿ ವೇದ ರಚನೆಯು ಕಾಲ ಕ್ರಿ. ಪೂ. **6000** ಕ್ಕೆ ಮುಂಚೆ ಇರಬೇಕೆಂಬ ನಿರ್ಧಾರಕ್ಕೆ ಬಂದಿರುವರು.

ಇವೆಲ್ಲ ಲೆಕ್ಕ ಹಾಕಿದರೆ ವೇದಗಳ ರಚನೆಯು ಕಾಲ ಸುಮಾರು 6000 ವರ್ಷಗಳ ಪೂರ್ವದಲ್ಲಿ ಆಗಿರಲು ಯಾವ ಸಂಶಯವೂ ಇಲ್ಲ.

ವೇದ ಭಾಗಗಳು

ನಾಲ್ಕೂ ವೇದಗಳಲ್ಲಿ ಒಂದೊಂದಕ್ಕೂ ಈ ಕೆಳಗೆ ಕಾಣಿಸಿರುವ ನಾಲ್ಕು ವಿಭಾಗಗಳುಂಟು.

ಸಂಹಿತೆ—ಸ್ತೋತ್ರ ಗೀತೆಗಳಿವೆ.

ಅನುಕ್ರಮಣಿಗಳು—ಆಯಾ ಸಂಹಿತೆಗಳ ವಿವರ, ವಿನಿಯೋಗ ಸ್ಪಷ್ಟಪಡಿಸುವುದು.

ಬ್ರಾಹ್ಮಣ—ಯಜ್ಞ ಸಂಬಂಧೀ ವಿವರಣೆ.

ಆರಣ್ಯಕ—ಯಜ್ಞ ಸ್ವರೂಪ, ಸಾಧನೆ, ಫಲ ಇವುಗಳನ್ನು ಕುರಿತು ಅರಣ್ಯದಲ್ಲಿ ಚಿಂತನೆ.

ಉಪನಿಷತ್ತು—ಸೃಷ್ಟಿ, ಜೀವ, ಪ್ರಾಣ, ಈಶ್ವರ, ಪ್ರಕೃತಿ ಇವುಗಳ ಜ್ಞಾನ ರಾಶಿ, ವೇದ ಭಾಗಗಳಲ್ಲಿ ಇದು ಅಂತ್ಯವಾಗಿ ಬ್ರಹ್ಮಚಿಂತನಕ್ಕೆ ಆಧಾರವಾಗಿರುವ ಕಾರಣ ಇದಕ್ಕೆ 'ವೇದಾಂತ' ಎಂಬ ಹೆಸರೂ ಬಂದಿದೆ.

ಬ್ರಾಹ್ಮಣ-ಅರಣ್ಯಕಗಳಿಂದ ಐತರೇಯ, ತೈತ್ತಿರೀಯ, ಶತಪಥ, ಶಾಂಖಾಯನ, ಬೃಹದಾರಣ್ಯಕ-ತವಲಕಾರ ಎಂಬ ಆರು ವೇದಾಂತ ಭಾಗಗಳು ಉದ್ಭವಿಸಿದವು.

ಆರು ವೇದಾಂಗಗಳು

1 ಶಿಕ್ಷೆ—ವರ್ಣಗಳ ಉತ್ಪತ್ತಿ, ಉಚ್ಚರಿಸುವ ಹ್ರಸ್ವ, ದೀರ್ಘ ಲಕ್ಷಣಗಳನ್ನು ಬೋಧಿಸುವುದು.

2 ವ್ಯಾಕರಣ—ಪದ, ಧಾತು, ಪ್ರಕೃತಿ, ಪ್ರತ್ಯಯಗಳ ಸ್ವರೂಪ ಮತ್ತು ಸಾಧುತ್ವವನ್ನು ಬೋಧಿಸುವುದು.

3 ಛಂದಸ್ಸು—ಗಾಯತ್ರಿ, ಅನುಷ್ಟುಪ್, ತ್ರಿಷ್ಟುಪ್, ಮುಂತಾದ ಗುರು, ಲಘುಗಳ ವಿನ್ಯಾಸದಿಂದ ರಚಿತವಾಗುವ ಪದ್ಯಗಳ ಸ್ವರೂಪವನ್ನು ತಿಳಿಸುವುದು.

4 ನಿರುಕ್ತ—ಪದಗಳ ಅರ್ಥ, ಪದಗಳ ಮೂಲ, ಉತ್ಪನ್ನವಾದುದನ್ನು ಕುರಿತು ವಿವರಿಸುವ ನಿಘಂಟು.

5 ಜ್ಯೋತಿಷ—ಶ್ರೌತ - ಸ್ಮಾರ್ತಾದಿಗಳ ಕರ್ಮಾನುಷ್ಠಾನಕ್ಕೆ ಮುಖ್ಯವಾಗಿ ಯಜ್ಞಗಳಿಗೆ ಅನುಕೂಲವಾದ ಶುಭ, ತಿಥಿ, ವಾರ, ನಕ್ಷತ್ರ, ಗ್ರಹಯೋಗ ಮೊದಲಾದವನ್ನು ತಿಳಿಸಿ ಹೇಳುವದು.

6 ಕಲ್ಪ—ಶ್ರೌತ ಸೂತ್ರಗಳಾದ ಯಜ್ಞಗಳ ವಿವರ, ವಿಧಾನ, ತತ್ಸಂಬಂಧೀ ಹಕ್ಕುಗಳು, ಇವುಗಳ ಬೋಧನೆ, ನಿತ್ಯ

ಜೀವನದಲ್ಲಿ ನಡೆಯುವ ಅಗ್ನಿಹೋತ್ರಾದಿಗಳು, ವಿವಾಹ, ಉಪನಯನ ಮಂತ್ರಗಳು. ಧರ್ಮಸೂತ್ರಗಳ ಪ್ರಕಾರ ನಡೆದು-ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಸನ್ಯಾಸದ ರೀತಿ, ನೀತಿ ಭಿನ್ನ ಭಿನ್ನ ವರ್ಣಗಳವರ ಆಚಾರ, ಶೀಲ ಮತ್ತು ವಿಧಿಗಳ ವರ್ಣನೆ 'ಕಲ್ಪ'ದಲ್ಲುಂಟು.

ಮೇಲೆ ಕಾಣಿಸಿದ 6 ವೇದಾಂಗಗಳಲ್ಲದೆ ಧರ್ಮಶಾಸ್ತ್ರ, ಇತಿಹಾಸ, ಪುರಾಣ ಆದಿ ಸಮಸ್ತ ನೀತಿಯ ಗ್ರಂಥಗಳು ಸ್ಮೃತಿ ಎಂದೆನಿಸುವವು. ಈಗ ಲಭ್ಯವಿರುವ ಸ್ಮೃತಿಗಳು.

1) ಯಾಜ್ಞವಲ್ಕ್ಯ ಸ್ಮೃತಿ
2) ಅತ್ರಿಸ್ಮೃತಿ
3) ವಿಷ್ಣು ಸ್ಮೃತಿ
4) ಆಪಸ್ತಂಬಸ್ಮೃತಿ
5) ಪರಾಶರಸ್ಮೃತಿ
6) ವ್ಯಾಸಸ್ಮೃತಿ
7) ವಶಿಷ್ಟಸ್ಮೃತಿ.

ವೇದದ ವಿಷಯಗಳ ಪ್ರತಿಪಾದನೆ

ಸ್ತೋತ್ರ—ರೂಪವಾದ ಋಗ್ವೇದ.

ಪೂಜಾ— ಪ್ರಧಾನವಾದ ಯಜುರ್ವೇದ.

ಗೀತ-ಹಾಡು—ಪ್ರಧಾನವಾದ ಸಾಮವೇದ.

ಮಂತ್ರ-ತಂತ್ರ—ಪ್ರಧಾನವಾದ ಅಥರ್ವಣವೇದ.

ಈ ವೈಶಿಷ್ಟ್ಯಗಳಿಂದ ಬೋಧಿಸಲ್ಪಡುತ್ತ ಚತುರ್ವೇದಗಳಿಗೆ ಸಂಬಂಧಿಸಿದ ಈ ವಿಷಯಗಳನ್ನೊಳಗೊಂಡು 'ವೈದಿಕ' ಅಥವ 'ಶ್ರೌತ'

ಗ್ರಂಥಗಳು ರಚಿತವಾಗಿ, ಅವುಗಳಲ್ಲಿ ಪ್ರತಿ ಶಾಖ್ಯಗಳು ಮುಖ್ಯವಾದವು ಒಂದೊಂದು ಶಾಖೆಗೂ ಸಂಬಂಧಿಸಿದಂತೆ ಈ ಪ್ರತಿ ಶಾಖ್ಯಗಳು, ಗುರು-ಶಿಷ್ಯ ಪರಂಪರಾಗತವಾಗಿ ಬಂದ ವೇದಗಳ ಪಾಠ ಬೇಧವಾಗಿ ಬೇರೆ ಬೇರೆ ಶಾಖೆಗಳ ಉತ್ಪತ್ತಿಗೆ ಕಾರಣವಾದವು.

ಸ್ಥೂಲವಾಗಿ ವೇದಗಳಲ್ಲಿ ವಿಷಯ ಪ್ರತಿಪಾದನೆಗಾಗಿ ಕರ್ಮ ಕಾಂಡ, ಉಪಾಸನಾ ಕಾಂಡ, ಜ್ಞಾನ ಕಾಂಡ ಎಂದು ಮೂರು ಭಾಗ ಗಳನ್ನಾಗಿ ವಿಂಗಡಿಸಿದ್ದಾರೆ.

ಕರ್ಮಕಾಂಡದಲ್ಲಿ ಯಜ್ಞ-ಕರ್ಮಗಳ ವರ್ಣನೆ,ಯಜ್ಞಕರ್ತನಿಗೆ, ಕರ್ತೃವಿಗೆ (ಮಾಡುವವ, ಮಾಡಿಸುವವ) ಇಹ-ಪರ ಸುಖ ಪ್ರಾಪ್ತಿ ಆಗುವದೆಂಬ ಉಪದೇಶ.

ಗಾತುಂ ಯಜ್ಞಾಯ ಗಾತುಂ ಯಜ್ಞಪತಯೇ
ದೈವೀ ಸ್ವಸ್ತಿರಸ್ತುನಃ ।

ಉಪಾಸನಾಕಾಂಡದಲ್ಲಿ ಪರಮಾತ್ಮನ ಭಜನಾ ವಿಧಾನ. ಇಹ ಪರ ಸುಖ ಪ್ರಾಪ್ತಿಗಾಗಿ ಹಂಬಲ. ಪರಮಾತ್ಮ ಸಿದ್ಧಿಗಾಗಿ ಬೋಧನೆ ಉಂಟು.

ಜ್ಞಾನಕಾಂಡದಲ್ಲಿ ಜೀವಾತ್ಮ-ಪರಮಾತ್ಮ ಇವುಗಳ ತತ್ವ ರಹಸ್ಯ ಇಹ-ಪರ ಸುಖದ ಅನುಭವ ಮತ್ತು ಪರಿಭಾಷೆಯುಂಟು.

ವೇದ ದೇವತೆಗಳು ಮತ್ತು ಪೂಜಾ ವಿಧಾನ.

ವೇದಗಳಲ್ಲಿ ಅನೇಕ ದೇವತೆಗಳ ಸ್ತುತಿ ಮತ್ತು ಪ್ರಾರ್ಥನಾ ಮಂತ್ರಗಳಿದ್ದು ಬೃಹದಾರಣ್ಯಕೋಪನಿಷತ್ತಿನ 33 ದೇವತೆಗಳಲ್ಲದೆ 11 ರುದ್ರರು, 12 ಆದಿತ್ಯರು ಇರುವರು.

ಮುಖ್ಯರಾದ ದೇವತೆಗಳ ಸೂಚಿಯು ಈ ಕೆಳಗಿನಂತಿದೆ.

1 ಅಗ್ನಿ	2 ವಾಯು	3 ಇಂದ್ರ
4 ವರುಣ	5 ಮಿತ್ರ	6 ಅಶ್ವಿನೀಕುಮಾರ
7 ರುತು	8 ಮರುತ್	9 ತ್ವಷ್ಟ್ರ
10 ಸೋಮ	11 ಮಧು	12 ದ್ಯಾವ
13 ಪೃಥಿವೀ	14 ವಿಷ್ಣು	15 ಪೂಷಣ
16 ಸವಿತಾ	17 ಉಷಾ	18 ಆದಿತ್ಯ
19 ಯಮ	20 ರುದ್ರ	21 ಸೂರ್ಯ
22 ವಾಕ್	23 ಕಾಲ	24 ಅನ್ನ
25 ವನಸ್ಪತಿ	26 ಪರ್ವತ	27 ಪರ್ಜನ್ಯ
28 ಧೇನು	29 ಪಿತೃ	30 ಮೃತ್ಯು
31 ಆತ್ಮಾ	32 ಔಷಧಿ	33 ಅರಣ್ಯ
34 ಶ್ರದ್ಧಾ	35 ಶಚಿ	36 ಅದಿತಿ
37 ಹಿರಣ್ಯ ಗರ್ಭ	38 ವಿಶ್ವಕರ್ಮ	39 ಪ್ರಜಾಪತಿ
40 ಪುರುಷ	41 ಅಪಃ	42 ಶ್ರೀ
43 ಸೀತಾ	44 ಸರಸ್ವತಿ.	

ಮುಖ್ಯರಾದ ಕೆಲ ದೇವತೆಗಳ ಗುಣಾವಗುಣಗಳು

ವೇದಗಳಲ್ಲಿ ಅತ್ಯಂತ ಪ್ರಾಚೀನವಾದ ಋಗ್ವೇದದಲ್ಲಿ – ಬಹು ದೇವತಾರಾಧನೆಗಳಿದ್ದು, ಒಬ್ಬೊಬ್ಬರ ಗುಣಾವಗುಣ, ಪ್ರಶಂಸೆ, ಕೀರ್ತಿ ಉಂಟು.

ಮೊದಲನೆಯವನಾದ ಇಂದ್ರ –ಕಾಳಗದಲ್ಲಿ ಜಯ ಕೊಡುವವನ ಶತೃ ಸೇನೆಯು ನಾಶವಾಗಲು ಸಹಾಯಕ, ವೀರದೇವ, ಸಾಹಸ, ವೀರ್ಯ ಅದ್ಭುತಕಾರ್ಯ- ಇವೇ ಇವನ ಮುಖ್ಯ ಗುಣಗಳು. ಭಕ್ತ ಕೇಳಿದರೆ, ಬೇಡಿದುದನ್ನೆಲ್ಲ ಕೊಡುವವನು. ಇವನು ವಿಜಯಾಭಿಮಾನ ದೇವತೆಯಾಗಿ ರುವುದು ಗಮನದಲ್ಲಿಡಬೇಕಾದ ಅಂಶ. ಎಲ್ಲ ದೇವರ ಸ್ತುತಿಗಿಂತ ಇಂದ್ರನ ಸ್ತುತಿ ಋಗ್ವೇದದಲ್ಲಿ ಕಾಲುಭಾಗದಷ್ಟಿದೆ.

ಇಂದ್ರನೊಡನಿರುವವನು "ಬೃಹಸ್ಪತಿ" ಪುರೋಹಿತ ಕರ್ಮದ ದೇವತೆ ಇವನು. ಸ್ತೋತ್ರಗಳಿಗೆಲ್ಲ ಅಧಿ ದೇವತೆ. ಈತನ ಸ್ತೋತ್ರಗಳಿಂದಲೇ ಇಂದ್ರನಿಗೆ ಬಲ ಬಂದು ಶ್ರದ್ಧೆ ಇಲ್ಲದವರನ್ನೂ, ದೇವತೆಗಳನ್ನು ತೆಗಳುವವರನ್ನೂ ಅನಾರ್ಯರನ್ನೂ ನಾಶಗೊಳಿಸುವನು. ಈತನ ಅನುಗ್ರಹವಿದ್ದಲ್ಲಿ ಯುದ್ಧದಲ್ಲಿ ಜಯ, ಶಾಂತಿ, ಲಾಭ, ಶಕ್ತಿ, ಧನ, ಪುತ್ರರು –ಎಲ್ಲವೂ ದೊರೆಯುವವು. ಎಲ್ಲೆಡೆ ವ್ಯಾಪಿಸಿ, ಎಲ್ಲರಿಗೂ ಶುಭವನ್ನು ತಂದುಕೊಡುವ ಪುರೋಹಿತನಿವನು.

ಪ್ರಮುಖ ದೇವತೆಗಳಲ್ಲಿ ಎರಡನೆಯ ದೇವತೆ 'ಅಗ್ನಿ' ಇವನು ಬೆಂಕಿಗೆ ಅಧಿಷ್ಠಾತೃ ದೇವತೆ ಸ್ವರ್ಗದಲ್ಲಿ ಹುಟ್ಟಿ, ಮಿಂಚಿನಲ್ಲಿ ಹುದುಗಿ ಕೊಂಡಿರುವನು. ಅಗ್ನಿಗೆ ಕೆಂಪು ಗಡ್ಡ, ಚಿನ್ನದ ಹಲ್ಲು, ಏಳು ನಾಲಿಗೆ ಮುಖವನ್ನು ಎಲ್ಲೆಡೆ ತಿರುಗಿಸಬಲ್ಲವ. ದೇದೀಪ್ಯಮಾನನಾಗಿರುವನು. ಸೂರ್ಯನಂತೆ, ಉಷಸ್ಸಿನಂತೆ, ಕಾಮನ ಬಿಲ್ಲಿನಂತೆ ತೇಜಸ್ವಿ.

ಮನುಷ್ಯನಿಗೆ ಅಗ್ನಿಗಿಂತ ಸಹಾಯಕ ಮತ್ತು ಸಮೀಪದ ಬಂಧು ಬೇರೊಬ್ಬರಿಲ್ಲ. ಯಜ್ಞ ಸಂಬಂಧೀ ಜ್ಞಾನವಿರುವ ಕಾರಣ 'ಜಾತವೇದ' ಎಂದೂ ಕರೆದಿದ್ದಾರೆ. ಸುಖ, ಸಂತಾನ ಮತ್ತು ಸಮೃದ್ಧಿಯ ವತಗಳನ್ನು ಕರುಣಿಸುವವನು. ಕೆಟ್ಟ ಭೂತ, ಮಾಟ ಮುಂತಾದ್ದನ್ನು ಹೊಡೆದೋಡಿಸುವ ಶಕ್ತಿ ಅಗ್ನಿಗೆ ಇದೆ. ಅಗ್ನಿಯ ಶಕ್ತಿ ಸಾಮರ್ಥ್ಯ ಬಹು ದೊಡ್ಡದು. ಪ್ರಾಚೀನ ಗ್ರೀಕರೂ, ರೋಮನರೂ ಅಗ್ನಿಯಲ್ಲಿ ಹೋಮ ಮಾಡುತ್ತಿದ್ದರು. ಪರ್ಶಿಯಾ (ಇರಾನ್) ದಲ್ಲಿ ಅಗ್ನಿಯಲ್ಲಿ ಹೋಮ ಮಾಡುವುದು ಪರಂಪರಾಗತ ರೂಢಿಯಾಗಿದೆ. ಅಗ್ನಿಯು ಇರಾನಿನಲ್ಲಿ ಬಹು ದೊಡ್ಡ ದೇವರೆಂದು ಪೂಜಿತನಾಗಿದ್ದಾನೆ.

ಋಗ್ವೇದದಲ್ಲಿ ಅತಿ ಉದಾತ್ತನಾದ ದೇವತೆಯೆಂದರೆ 'ವರುಣ' ಧರ್ಮದ ಮೂಲ ವರುಣ, ನಿಯಮದ ಅಧಿಕಾರಿ ವರುಣ, ಇವನಿಂದ ಜಗತ್ತಿನ ಕ್ರಮ ನಿರಂತರವಾಗಿ ಸಾಗಿದೆ. ಇವನ ಗುಣಗಳು ಪ್ರಧಾನವಾಗಿ ಧಾರ್ಮಿಕ, ಮಾನಸಿಕ, ನೈತಿಕ. ಈ ದೇವತೆ, ಸರ್ವಜ್ಞ, ಸರ್ವಶಕ್ತ, ಸತ್ಪುರುಷರ ರಕ್ಷಕ, ದುಷ್ಟ ನಿಗ್ರಹಿ, ಧರ್ಮದೇವತೆ, ಅತ್ಯುದಾತ್ತ, ಪರಮ ದಯಾಮಯ–ಲೋಕದಲ್ಲಿ ಪ್ರತಿಯೊಂದು ವ್ಯಾಪಾರವೂ ಒಂದು ನಿಯಮಕ್ಕೊಳಪಟ್ಟಿದೆ. ಹಗಲು-ರಾತ್ರಿ, ಮಳೆ-ಬೆಳೆ-ಒಳ್ಳೆ ಕೆಲಸದಿಂದ ಒಳ್ಳೆ ಫಲ, ಕೆಟ್ಟ ಕೆಲಸದಿಂದ ಕೆಟ್ಟ ಫಲ–ಇವೆಲ್ಲ ಒಂದು ನಿಯಮ. ಈ ನಿಯಮಗಳನ್ನು ಮೀರಲು ಯಾರಿಗೂ ಸಾಧ್ಯವಿಲ್ಲ. ಈ ನಿಯಮಗಳಿಗೇ 'ಋತ' ಎಂದು ಹೆಸರು. 'ಋತಸ್ಯ ಗೋಪ್ತಾ' ಎಂದು ವರುಣನೇ ಈ ಕಾರ್ಯವು ನಡೆಯುವಂತೆ ಮಾಡಿದನು. ಸುಳ್ಳು, ಮೋಸ, ಹಿಂಸೆ ಯಾವುದೂ ವರುಣನಿಗೆ ಸಹಿಸುವುದಿಲ್ಲ. ಈ ದುಷ್ಕಾರ್ಯಗಳನ್ನು ವರುಣ ಕ್ಷಮಿಸುವುದಿಲ್ಲ. ಸ್ತೋತ್ರ, ಯಜ್ಞ, ಹವಿಸ್ಸುಗಳಿಂದ ವರುಣನ ಅನುಗ್ರಹ ಪಡೆಯಬೇಕು ಪಶ್ಚಾತ್ತಾಪದಿಂದ ಮೊರೆಹೊಕ್ಕರೆ, ವರುಣನು ಮನ್ನಿಸಿ ರಕ್ಷಿಸುವನು.

ಇವನಿಂದ ಶಾಶ್ವತ ಸುಖ, ಅಂದರೆ ಪುನರ್ಜನ್ಮವಿಲ್ಲದ ಅಮೃತತ್ವವು ಲಭ್ಯವಾಗುವುದು.

ವರುಣನೊಡನೆ ಸ್ತುತನಾದ ದೇವತೆಯೆಂದರೆ 'ಮಿತ್ರ'. ಸೂರ್ಯನ ಕೆಲ ಶಕ್ತಿಗಳು ಇವನಿಗುಂಟು. ಜನರನ್ನು ಒಟ್ಟುಗೂಡಿಸುವುದು ಮಿತ್ರನ ವಿಶೇಷ ಧರ್ಮ.

'ಸೂರ್ಯ' ದೇವನು, ದಿನ ದಿನವೂ ಉದಯಿಸುತ್ತ, ಪ್ರಾಣಿಗಳ ಸತ್ಕರ್ಮ, ದುಷ್ಕರ್ಮಗಳನ್ನು ನೋಡುತ್ತ, ಸಜ್ಜನರನ್ನು ಸಂರಕ್ಷಿಸುತ್ತ, ಅವರವರ ಕೆಲಸದಲ್ಲಿ ನಿಯೋಜಿಸುತ್ತ, ಬೆಳಕಿಗೆ ಅಧಿದೇವತೆಯಾಗಿ, ಸಮ ದೃಷ್ಟಿಯಿಂದ ಎಲ್ಲರಿಗೂ ಆರೋಗ್ಯ-ಸಂಪತ್ತು ದಯಪಾಲಿಸುವನು.

'ಪೂಷನ್' ಎಂಬ ದೇವತೆಯು ಮನುಷ್ಯನಿಗೆ ಧನ - ಧಾನ್ಯ ಸಮೃದ್ಧಿ, ಪಶು ಸಂಪತ್ತಿಯನ್ನು ಕೊಡುವನು. ಕೃಪಣ-ಲೋಭಿಗಳಿಂದ ಧನ-ಧಾನ್ಯ ಕಸಿದು ಭಕ್ತರಿಗೆ ಕೊಡಿಸುವನು. ಆಕಳು-ಕುರಿ-ಕುದುರೆಗಳ ಸುಖಕ್ಕೆ, ಏಳಿಗೆಗೆ ಪೂಷನ ಅನುಗ್ರಹಬೇಕು. ಪ್ರಯಾಣದಲ್ಲಿ ಆಕಸ್ಮಿಕ ವಿಪತ್ತು ಕಳ್ಳಕಾಕರ ಹಾವಳಿ ಇಲ್ಲದಂತೆ ಮಾಡುವವನಿವನು.

'ವಿಷ್ಣು' ವು ಮೂರು ಹೆಜ್ಜೆಯಲ್ಲಿ ಭೂಮಿಯನ್ನಳೆದವನು. ಋಗ್ವೇದದಲ್ಲಿ ವಿಷ್ಣುವಿನ ವಿಷಯ ಕೊಂಚ. ಈ ಮೂರು ಪದ ಚಿಹ್ನಗಳು ನಿರಂತರ ಸುಖದ ಉದಯ ಸ್ಥಾನಗಳು. ಮೂರನೆಯ ಹೆಜ್ಜೆ (ಪರಮೋ ವ್ಯೋಮನ್) ಯಿಂದ ಉಕ್ಕಿ ಬರುವ ಅಮೃತವನ್ನು ದೇವತೆಗಳಿಗೆ ಪ್ರೀತಿ ಪಾತ್ರರಾದ ಜನರು ಸವಿಯುತ್ತ, ಸುಖದಿಂದ ಇರುವರು.

'ಸವಿತೃ' ಸೂರ್ಯನ ಅಧಿದೇವತೆಯಾಗಿ ಉತ್ತೇಜಕತ್ವ, ಪ್ರಚೋದಕತ್ವ, ಜೀವ - ದಾತೃತ್ವಗಳಿಗೆ ಕಾರಣವಾಗಿದೆ. ದ್ವಿಪಾದಿ,

ಚತುಷ್ಪಾದಿಗಳ ಪುನರುಜ್ಜೀವನಕ್ಕೆ ಕಾರಣ. ಈ ದೇವತೆಯ ಪ್ರಾರ್ಥನೆಯೇ ಪರಮ ಪವಿತ್ರವಾದ ಗಾಯತ್ರಿ.

'ಅಶ್ವಿನೀ' ದೇವತೆಗಳು ಅವಳೀ ದೇವತೆಗಳು. ಇವರು ಅತಿ ಸುಂದರರು, ಯುವಕರು ಮತ್ತು ಮೇಧಾವಿಗಳು. ಇವರು ದೇವ-ವೈದ್ಯರಾಗಿ, ಇವರು ವಾಸಿಮಾಡಲಾಗದ ರೋಗವಿಲ್ಲ. ಕುರುಡನಿಗೆ ಕಣ್ಣನ್ನೂ, ಕುಂಟನಿಗೆ ಕಾಲನ್ನೂ ಕೊಟ್ಟವರು. ಇವರ ಅದ್ಭುತ ಕಾರ್ಯಗಳು ಅನೇಕ ತೆರನಾಗಿವೆ.

'ವಾಯು' ಗಾಳಿಗಭಿಮಾನ ದೇವತೆ, ಎಲ್ಲೆಡೆ ಚಲಿಸುವನು. ಶಬ್ದ ಕೇಳುವುದು, ರೂಪಮಾತ್ರವಿಲ್ಲ.

'ರುದ್ರ' ಎಲ್ಲವನ್ನು ನಾಶಗೊಳಿಸುವ ಬಿರುಗಾಳಿ. ಬಲಿಷ್ಠರಲ್ಲಿ ಬಲಿಷ್ಠ. ಭೂತ-ಪಿಶಾಚಿಗಳ ಕಾಟವಿಲ್ಲದಂತೆ ಮಾಡಿ ಮುಂದೆ ತ್ರಿಮೂರ್ತಿಗಳಲ್ಲೊಬ್ಬನಾಗುವನು

'ಮರುತ್ತು' ಗಳು ರುದ್ರನೊಡನಾಡಿಗಳು. ಮೋಡ-ಗುಡುಗು, ಮಿಂಚುಗಳಿಂದೊಡಗೂಡಿವೆ. ಭೋರ್ಗರೆವ ಮೋಡಗಳನ್ನು ಕೂಡಿಸಿ, ಮಳೆಯಧಾರೆ ಅವಿಚ್ಛಿನ್ನವಾಗಿರಿಸುವಂತೆ ಮಾಡುವರು.

'ಸೋಮ' ಎಂಬುದು ಅದೇ ಹೆಸರಿನ ಲತೆಯೊಂದರ ರಸ. ಇದು ದೇವತೆಗಳ ಪಾನೀಯ. ಇಂದ್ರನ ಪರಾಕ್ರಮ-ಸಾಹಸಗಳಿಗೆ ಸೋಮದೇವ ತಾನೇ ಕಾರಣ. ದೇವತೆಗಳು ಶಾಸ್ತ್ರ, ವಿಧಿಗಳಿಂದ ಮಾಡಿದ ಈ ಸೋಮರಸ ಕುಡಿದವರಿಗೆ ಕಷ್ಟ, ದುಃಖ, ದಾರಿದ್ರ್ಯ ನೋವು ಸಾವುಗಳಿಲ್ಲ.

'ಯಮ' ಮರ್ತ್ಯರಲ್ಲಿ ಮೊದಲನೆಯವನಾಗಿ ಮರ್ತ್ಯರ ಮಾರ್ಗ ಸಾವನ್ನು-ಕಂಡವನು ಇವನು. ಸತ್ತವರ ಆತ್ಮಗಳಮೇಲೆ ಈತನ ಆಳಿಕೆ.

ಹಿಂದೆ ಕಾಣಿಸಿದ ದೇವತೆಗಳಲ್ಲದೆ ಇತರ ದೇವತೆಗಳ ಗುಂಪು ಗುಂಪೇ ಒಂದು ಸ್ತೋತ್ರದಲ್ಲಿ ಸ್ತುತವಾಗುತ್ತದೆ. ಮಿತ್ರ, ವರುಣ ಮೊದಲಾದವರು ಆದಿತ್ಯರ ಗುಂಪು, ಮರುತ್ತಗಳದೊಂದು ಗುಂಪು. ವಸುಗಳದು ಇನ್ನೊಂದು. ಹೀಗೆ ಗುಂಪುಗಳು ಸಾಮೂಹಿಕವಾಗಿ ಸ್ತುತಿಸಲ್ಪಡುತ್ತವೆ.

ಪುರುಷ ದೇವತೆಗಳಲ್ಲದೆ ಸ್ತ್ರೀ ದೇವತೆಗಳು ವೇದಗಳಲ್ಲಿ ಕಂಡು ಬರುವರು. ಅರುಣೋದಯಕ್ಕೆ ಅಭಿಮಾನ ದೇವತೆಯಾದ ಉಷಾದೇವಿ ಯನ್ನು ಕುರಿತ ಅತಿ ಸುಂದರವಾದ ಮಂತ್ರಗಳುಂಟು. ರಾತ್ರಿ ಉಷಸ್ಸುಗಳು ಅಕ್ಕತಂಗಿಯರು. ಪೃಥ್ವಿ, ವಾಕ್, ಅರಣ್ಯಾನೀ, ಸರಸ್ವತೀನದಿ, ಅಪ್ಸರ ಸ್ತ್ರೀಯಾದ ಊರ್ವಶಿ, ನೇಗಿಲಿನಿಂದಾದ ಗೆರೆ 'ಸೀತಾ' ಸ್ತುತಿ ಸಲ್ಪಟ್ಟವೆ.

ಈ ಅನೇಕ ದೇವತೆಗಳ ಪೂಜೆಯಿಂದ ಏಕದೇವ ಪೂಜೆಯು ಹುಟ್ಟಿತು. ಒಬ್ಬ ದೇವರ ಹಲವು ರೂಪಗಳಿವು ಎಂಬ ಭಾವನೆ ಬೇರೂರಿತು. ಹುಟ್ಟಿದುದೆಲ್ಲರ ಒಡೆಯ ಪ್ರಜಾಪತಿ, ಹಿರಣ್ಯಗರ್ಭ ಇವರ ಭಾವನೆ ಮೊದಲಾಯಿತು.

ಇಂದ್ರಂ ಮಿತ್ರಂ ವರುಣ ಮಗ್ನಿ ಮಾಹು
ರಥೋ ದಿವ್ಯಃ ಸ ಸುಪರ್ಣೋ ಗರುತ್ಮಾನ್ ।
ಏಕಂ ಸದ್ವಿಪ್ರಾ ಬಹುಧಾ ವದನ್ಯಗ್ನಿಂ
ಯಮಂ ಮಾತರಿಶ್ವಾನ ಮಾಹುಃ ॥

ಹೀಗೆ ಒಬ್ಬನೇ ಪರದೇವತೆ ಎಂಬ ಭಾವದಿಂದ ಪ್ರಕೃತಿಯೇ ದೇವರು ವಿಶ್ವವೇ ದೇವರು ಎಂಬ ಭಾವನೆ ಉತ್ಪನ್ನವಾಯಿತು. ಮುಂದೆ ಉಪ ನಿಷತ್ತುಗಳಲ್ಲಿ ಪ್ರತಿಪಾದಿತವಾಗುವ ಪರಬ್ರಹ್ಮದ ಆರಂಭ ಇಲ್ಲಾಗಲೇ ಕಂಡು ಬರುತ್ತದೆ. ಹೀಗೆ ಅನೇಕ ದೇವತಾತತ್ವದಿಂದ, ಏಕ ದೇವತ್ವ ಭಾವ ತಾನಾಗಿಯೇ ಬೆಳೆದು ಕೊನೆಗೆ 'ವಿಶ್ವ ದೇವತ್ವ' ತತ್ವದಲ್ಲಿ ಕೊನೆ ಗೊಳ್ಳುತ್ತದೆ.

ವೇದ ಕಾಲದಲ್ಲಿನ ಪೂಜಾ ವಿಧಾನಕ್ಕೆ ಯಾಗ ಅಥವಾ ಯಜ್ಞ ಎಂಬ ಹೆಸರಿದ್ದು ಹವಿಸ್ಸನ್ನು ಅಥವಾ ನೈವೇದ್ಯವನ್ನು ಸಂಬಂಧಿಸಿದ ದೇವತೆಗೆ ಅರ್ಪಿಸುವಾಗ ಅವನನ್ನು ಆಹ್ವಾನಿಸಿ ಹೊಗಳಬೇಕಾಗಿದ್ದಿತು. ಯಾಗ ಅಥವಾ ಯಜ್ಞಗಳನ್ನು ನೆರವೇರಿಸುವವ, ಅನೇಕರನ್ನು ಸಹಾಯಕ್ಕಾಗಿ ನಿಯಮಿಸಿಕೊಳ್ಳುತ್ತಿದ್ದನು. ಅವರಿಗೆ ಋತ್ವಿಕ್ಕುಗಳೆಂದು ಹೆಸರು. ಈ ಋತ್ವಿಕ್ಕುಗಳಲ್ಲಿ ದೇವತೆಗಳನ್ನು ಹೊಗಳುವವಗೆ ಹೋತೃ ಎಂದು ಹೆಸರು. ಬೆಂಕಿ, ತುಪ್ಪ ಉಪಕರಣ ಇವನ್ನು ಜೋಡಿಸಿಕೊಂಡು ಕ್ರಮವರಿತು ಮಾಡುವ ಋತ್ವಿಕ್ಕುಗಳಲ್ಲಿ ಒಬ್ಬನಿಗೆ ಅಧ್ವರ್ಯು ಎಂದು ಹೆಸರು ದೇವತೆಗೆ ಹವಿಸ್ಸನ್ನರ್ಪಿಸಿದ ನಂತರ ಮನಸ್ಸಂತೋಷಾರ್ಥ ಹಾಡಬೇಕಷ್ಟೆ. ಈ ಹಾಡನ್ನು ಸಾಮವೇದದಿಂದ ಹಾಡುವ ಋತ್ವಿಕ್ಕುಗಳಲ್ಲಿ ಒಬ್ಬನನ್ನು ಉದ್ಗಾತೃವೆಂದು ಕರೆದರು.

ವೇದ - ಧರ್ಮ

ವೇದಗಳಲ್ಲಿ ಬೋಧಿತವಾದ ಧರ್ಮಕ್ಕೆ ಆರು ಆಧಾರಗಳುಂಟು.

ಸತ್ಯಂ ಬೃಹದ್ ಋತಂ ಉಗ್ರಂ
ದೀಕ್ಷಾ ತಪೋ ಬ್ರಹ್ಮ ಯಜ್ಞಃ ಪೃಥಿವೀಂ ಧಾರಯಂತಿ||

ಅಥರ್ವಣ ವೇದದಲ್ಲಿ ಹೇಳಿರುವ ಪ್ರಕಾರಕ್ಕೆ ಪೃಥ್ವಿಯನ್ನು ಧಾರಣೆ ಮಾಡಲು ಆರು ಆಧಾರಗಳುಂಟು.

ಸತ್ಯ—ಸತ್ಯವನ್ನು ನುಡಿಯುವುದು ಧರ್ಮದಲ್ಲಿ ಪ್ರಥಮ ಸ್ಥಾನ ಪಡೆದಿದೆ.

ಋತ—ಪ್ರಪಂಚದಲ್ಲಿ ನಿಯಮ ಪಾಲನೆ ಮುಖ್ಯವಾದುದು. ಋತ ಎಂದರೆ ನಿಯಮ, ನೀಟುಗೆರೆ. ಮನುಷ್ಯನು ನಿಯಮದಿಂದ, ನೀತಿಗೆ ಅನುಸಾರವಾಗಿ ನಡೆಯಬೇಕು. ಈ ಋತದಲ್ಲಿ ನ್ಯಾಯ-ಸದಾಚಾರಗಳೆರಡೂ ಬಂದವು. ಸತ್ಯ ಋತಗಳು ಜ್ಞಾನ-ವಿಜ್ಞಾನಗಳಿದ್ದಂತೆ.

ದೀಕ್ಷೆ—ಯಾವ ಸಾಧನೆಗಾಗಲಿ ಮುಖ್ಯವಾಗಿ ಸತ್ಯಸಾಧನೆಗೆ ದೀಕ್ಷೆ ಎಂದರೆ ಶ್ರದ್ಧೆಯೂ ಆವಶ್ಯಕ.

ತಪ—ಎಂದರೆ ಇಂದ್ರಿಯ ಸಂಯಮ. ಯಾವ ಗುರಿಗಾದರೂ, ತಪಸ್ಸು ಬೇಕು. ಧರ್ಮಸಾಧನೆಗೂ ಇದು ಅಗತ್ಯ.

ಬ್ರಹ್ಮ—ಎಂದರೆ ಪ್ರಾರ್ಥನೆ, ವೇದ ಮಂತ್ರಗಳ ವಿಧಿಪೂರ್ವಕ ಪಾಠ, ಇದರಲ್ಲಿ ಜಪ-ಸ್ತುತಿ ಕೂಡ ಸಮ್ಮಿಲಿತ.

ಯಜ್ಞ—ಎಂದರೆ ಕೈಗೊಂಡ ಧಾರ್ಮಿಕ ಮಹತ್ಕಾರ್ಯ.

ಈ ಆರು ಆಧಾರಗಳಿಂದ ಧರ್ಮಪಾಲನೆಯಾಗಿ, ಸಮಾಜವು ಹದ್ದುಬಸ್ತಿಯಲ್ಲಿರುವುದು. ಆಗಲೇ ಪೃಥ್ವಿಯ ಧಾರಣೆಯಾದೀತು.

ಋತಸ್ಯ ಪಂಥಾಂ ನ ತರನ್ತಿ ದುಷ್ಕೃತಃ

ಪ್ರಾರ್ಥನೆ, ಯಜ್ಞ, ದೀಕ್ಷೆ, ಋತ, ತಪ, ಸತ್ಯ ಈ ಆರು ಭಾಗಗಳಲ್ಲೂ ಸದಾಚಾರಿಗಳಿಗೆ ಮಾತ್ರ ಯಶಸ್ಸು ಲಭಿಸುತ್ತೆ. ದುರಾಚಾರಿಗಳಿಗಲ್ಲ.

ಜಗತ್ತಿನ ಇತರ ಧರ್ಮಗಳಂತೆ ವೇದ ಧರ್ಮಕ್ಕೆ ಸಂಸ್ಥಾಪಕನೊಬ್ಬ ಇಲ್ಲದಿರುವುದು ಅದರ ವೈಶೇಷ್ಯ. ಅದು ಕೇವಲ ಏಕೈಕ ವ್ಯಕ್ತಿಯ ಆಧ್ಯಾತ್ಮಿಕ ಅನುಭವವನ್ನು ಹೊಂದಿಕೊಂಡಿರದೆ ಜ್ಞಾನಿಗಳೂ, ಯೋಗಿಗಳೂ

ಸಂತರೂ, ಮಹಾತ್ಮರೂ ಆದ ಹಲವಾರು ಋಷಿಗಳ ಅತೀಂದ್ರಿಯ ದರ್ಶನ ಮತ್ತು ಆಧ್ಯಾತ್ಮಿಕ ಅನುಭವದಮೇಲೆ ಸುಭದ್ರವಾಗಿ ನೆಲೆನಿಂತಿದೆ. ಈ ಋಷಿಗಳು ವೇದಗಳ ಸನಾತನ-ಧರ್ಮದ ಪ್ರವರ್ತಕರೇ ಹೊರತು ಇತರ ಧರ್ಮಗಳ ಮೂಲ ಪುರುಷರಂತೆ ಸಂಸ್ಥಾಪಕರಲ್ಲ.

ವೇದ ಧರ್ಮದ ತಳಹದಿಯು ಈ ಋಷಿಗಳ ಅನುಭವಗಳು ಒಂದು ವ್ಯವಸ್ಥಿತ ಪರಂಪರೆಯಾಗಿ ಆಚಾರ-ತತ್ವ-ಉಪದೇಶಗಳ ರೂಪದಲ್ಲಿ ಇಳಿದು ಬಂದಿವೆ. ಸಹಸ್ರಾರು ಸಾಧು-ಸಂತ ಮಹಾತ್ಮರು ವೇದ ಧರ್ಮದ ಸತ್ಯತ್ವ ವನ್ನು ತಮ್ಮ ಜೀವನದಲ್ಲಿ ಅಳವಡಿಸಿ ತೋರಿಸಿಕೊಟ್ಟರು. ಶಾಲೆ ಕಾಲೇಜು ಗಳ ಪ್ರಯೋಗ ಶಾಲೆಗಳಲ್ಲಿ ವಿಜ್ಞಾನ-ನಿಯಮಗಳನ್ನು ಪರೀಕ್ಷಿಸಿ ದೃಢ ಪಡಿಸಬಹುದೋ, ಹಾಗೆಯೇ ಈ ಆಧ್ಯಾತ್ಮಿಕ ತತ್ವಗಳನ್ನು ಇಂದೂ ಕೂಡ ನಮ್ಮ ಆತ್ಮನೆಂಬ ಪ್ರಯೋಗ ಶಾಲೆಯಲ್ಲಿ ಪರೀಕ್ಷಿಸಿ ದೃಢಪಡಿಸಿಕೊಳ್ಳ ಬಹುದು.

ವೇದ ಧರ್ಮವು ಅಪೌರುಷೇಯ, ದೈವ ಪ್ರೇರಿತ. ಇದರಿಂದ ಆಧ್ಯಾತ್ಮಿಕ ಸತ್ಯದ ಆವಿಷ್ಕರಣವು ಇಂದಿಗೂ ಆಗುತ್ತಿದೆ. ಮುಂದೆಯೂ ಆಗುವುದು. ಈ ಸತ್ಯವು ಅನಂತ ಮತ್ತು ಬಹುಮುಖ. ಇದೇ ವೇದ ಧರ್ಮದ ಔನ್ನತ್ಯಕ್ಕೆ ಮತ್ತು ಅಗಾಧ ಶಕ್ತಿಗೆ ಕಾರಣ. ಈ ಸತ್ಯವನ್ನು ಯಾರು ಯಾವಾಗ ಬೇಕಾದರೂ ಸಾಕ್ಷಾತ್ಕರಿಸಿಕೊಳ್ಳಬಹುದು.

ವೇದಗಳ ಪ್ರಕಟನೆ.

ಕೃಷ್ಣದ್ವೈಪಾಯನವೇದವ್ಯಾಸರು ತಮ್ಮ ಶಿಷ್ಯರಾದ ಪೈಲನಿಗೆ ಋಗ್ವೇದವನ್ನೂ, ವೈಶಂಪಾಯನಿಗೆ ಯಜುರ್ವೇದವನ್ನೂ, ಜೈಮಿನಿಗೆ ಸಾಮವೇದವನ್ನೂ, ಸುಮಂತುವಿಗೆ ಅಥರ್ವಣವೇದವನ್ನು ಮೊದಲು ಬೋಧಿಸಿದರು.

ವೈಶಂಪಾಯನರು ತಮ್ಮ ಶಿಷ್ಯರಾದ ಯಾಜ್ಞವಲ್ಕ್ಯರಿಗೆ ಮತ್ತಿತರ ಶಿಷ್ಯರಿಗೆ ಯಜುರ್ವೇದವನ್ನು ಉಪದೇಶಿಸಿದರು.

ಯಾವುದೋ ಒಂದು ಪ್ರಸಂಗದಲ್ಲಿ ವೈಶಂಪಾಯನರಿಗೆ ಯಾಜ್ಞವಲ್ಕ್ಯರ ಮೇಲೆ ಅತ್ಯುಗ್ರ ಕೋಪ ಉತ್ಪನ್ನವಾಗಿ ಯಜುರ್ವೇದವನ್ನು ಹಿಂದಕ್ಕೆ ಬೇಡಿದರು. ತಮ್ಮ ತಪೋಬಲದಿಂದ ಯಾಜ್ಞವಲ್ಕ್ಯರು ಯಜುರ್ವೇದ ಸಾರವನ್ನೆಲ್ಲ ವಮನಮಾಡಿದರು. ಆಚಾರ್ಯರ ಶಿಷ್ಯರು ಅವರ ಆಜ್ಞೆಯಂತೆ ತಿತ್ತಿರಿ ಪಕ್ಷಿಗಳ ರೂಪತಾಳಿ ವಮನವನ್ನು ಸ್ವೀಕರಿಸಿದರು. ಆದುದರಿಂದ ಕೃಷ್ಣ ಯಜುರ್ವೇದವು ತೈತ್ತಿರೀಯ ಸಂಹಿತೆಯೆಂದು ಪ್ರಶಿದ್ಧವಾಯಿತು.

ಮಹಾ ತೇಜಸ್ವಿಗಳೂ, ತಪಸ್ವಿಗಳೂ ಆದ ಯಾಜ್ಞವಲ್ಕ್ಯರು ಎದೆಗುಂದದೆ ಯಜುರ್ವೇದವನ್ನು ಪಡೆಯಲು ಸೂರ್ಯನನ್ನು ಉಪಾಶಿಸಿದರು. ಸೂರ್ಯನು, ವಾಜಿ (ಅಶ್ವ) ರೂಪದಿಂದ ಬಂದು ಯಾಜ್ಞವಲ್ಕ್ಯರಿಗೆ ಯಜುರ್ವೇದವನ್ನು ಉಪದೇಶಿಸಿದನು ಸೂರ್ಯನಿಂದ ಉಪದಿಷ್ಟವಾದ ಕಾರಣ ಶುಕ್ಲಯಜುರ್ವೇದವೆಂದೂ, ವಾಜಿಯಿಂದ ಉಪದೇಶಿಸಲ್ಪಟ್ಟ ಕಾರಣ ವಾಜಸನೇಯ ಸಂಹಿತೆಯೆಂದೂ ಪ್ರಶಿದ್ಧವಾಯಿತು.

ಆಧಾರ—1) ಮಹಾ ಭಾರತ (12-39).
2) ವಿಷ್ಣು ಪುರಾಣ (3-5).

ಯಜುರ್ವೇದ
↓
ಶುಕ್ಲ ಯಜುರ್ವೇದ | ಕೃಷ್ಣ ಯಜುರ್ವೇದ
↓ | ↓
ವಾಜಸನೇಯ ಸಂಹಿತೆ | ತೈತ್ತಿರೀಯ ಸಂಹಿತೆ
↓
ಬ್ರಾಹ್ಮಣ | ಅರಣ್ಯಕ
↓
ಶಿಕ್ಷಾವಲ್ಲಿ-ಆನಂದವಲ್ಲಿ | ಭೃಗುವಲ್ಲಿ

ವೇದಗಳ ವೈವಿಧ್ಯತೆ

"ಅನಂತಾ ವೈವೇದಾ" ಎಂಬಂತೆ ವೇದಗಳದು ಒಂದೇ ವಾಣಿಯಲ್ಲ. ಈ ವಾಣಿಯ ಭಿನ್ನತೆಯಿಂದ ಮೂಲ ಸತ್ಯಕ್ಕೆ, ಮೂಲ ತತ್ವಕ್ಕೆ ಬಾಧೆ ಬರುವಂತಿಲ್ಲ. 'ಏಕಂ ಸತ್ ವಿಪ್ರಾ ಬಹುಧಾ ವದಂತಿ' ಇರುವುದೊಂದಾದರೂ, ವಿವೇಕಿಗಳು ಭಿನ್ನ-ಭಿನ್ನವಾಗಿ ಮಾತಾಡಬಹುದು, ಟೀಕಿಸಬಹುದು ತಿಳಿಸುಕೊಳ್ಳುವವರು ಭಿನ್ನ ಭಿನ್ನವಾಗಿ 'ರುಚೀನಾಂ ವೈಚಿತ್ರ್ಯಾತ್' ಎಂಬಂತೆ ತಮ್ಮ ತಮ್ಮ ರುಚಿಗನುಗುಣವಾಗಿ ಅರ್ಥವನ್ನೂ ಮಾಡಿಕೊಳ್ಳಬಹುದು.

ಹೀಗೆ ರುಚಿಗನುಗುಣವಾಗಿ ವೇದಗಳ ಆಡಳಿತ ಮತ್ತು ಸರ್ವಸ್ವಾಮಿತ್ವವನ್ನು ಒಪ್ಪಿಕೊಂಡು-ಷಡ್ದರ್ಶನಗಳೆಂಬ ಆರು ವಿಧವಾದ ವೇದಾಂತ ಸೂತ್ರಗಳ ಉದ್ಭವವಾಯಿತು.

ವೇದಗಳ ಸಂದೇಶ

ಸಂಗಚ್ಛಧ್ವಂ - ಸಂವದಧ್ವಂ।
ಸಂವೋಮನಾಂಸಿ ಜಾನತಾಂ।
ದೇವಾ ಭಾಗಂ - ಯಥಾ ಪೂರ್ವೇ।
ಸಂಜಾನಾನಾ ಉಪಾಸತೇ ॥೧॥

ಸಮಾನೋಮಂತ್ರಃ ಸಮಿತಿಃ ಸಮಾನೀ
ಸಮಾನಂ ಮನಃ ಸಹಚಿತ್ತ ಮೇಷಾಮ್।
ಸಮಾನಂ ಮಂತ್ರಮಭಿಮಂತ್ರಯೇವಃ।
ಸಮಾನೇನವೋ ಹವಿಷಾ ಜುಹೋಮಿ ॥೨॥

ಸಮಾನೀವ ಆಕೂತಿಃ। ಸಮಾನಾ ಹೃದಯಾನಿವಃ।
ಸಮಾನಂ ಅಸ್ತು ವೋ, ಮನೋ ಯಥಾವಾ ಸುಸಹಾಸತಿ ॥೩॥
—ರುಗ್ವೇದ 10, 191, (2,3 & 4)

ಒಂದುಗೂಡಿರಿ, ಪರಸ್ಪರ ಮಾತನಾಡಿರಿ. ಅಂದರೆ ಒಕ್ಕೊರಲಿಂದ ಹೇಳಿರಿ. ನಿಮ್ಮ ಮನಸ್ಸೆಲ್ಲ ಒಂದಾಗಿರಲಿ. ಪ್ರಾಚೀನ ದೇವತೆಗಳು ಐಕ್ಯದಿಂದ-ಲಭ್ಯವಾದ ಫಲ ಸವಿದಂತೆ. ನಿಮ್ಮ ಗುರಿ, ಸಂಘಟನೆ, ಮನಸ್ಸು, ಭಾವನೆಗಳೆಲ್ಲ ಒಂದಾಗಿರಲಿ. ಎಲ್ಲರಿಗೂ ಅವಶ್ಯವಾದ ಒಂದು ಗುರಿ ನಿಮ್ಮ ಮುಂದಿದೆ, ಹೃದಯಗಳಲ್ಲಿ ದುರಾಲೋಚನೆ ಇಲ್ಲದೆ, ಸುಖ ಜೀವನಕ್ಕಾಗಿ ಕಲೆತು ದುಡಿಯಿರಿ

ಯಥೇ ಮಾಂ ವಾಚಂ ಕಲ್ಯಾಣೀಮಾವದಾನೀ ಜನೇಭ್ಯಃ।
ಬ್ರಹ್ಮ ರಾಜನ್ಯಾಭ್ಯಾಗಂ-ಶೂದ್ರಾಯ ಚಾರ್ಯಾಯ-ಚ।
ಸ್ವಾಯಚಾರಣಾಯ। ಪ್ರಿಯೋ ದೇವಾನಾಂ
ದಕ್ಷಿಣಾಯೈ ಧಾತುರಿಹ ಭೂಯಾಸಮಯಂ
ಮೇ ಕಾಮಃ ಸಮೃದ್ಧಃ ತಾಂ ಉಪಮಾದೋ ನಮತು॥
—(ಯಜುರ್ವೇದ ಅ26 ಮಂತ್ರ 2)

ಶ್ರೀ ಸ್ವಾಮಿ ದಯಾನಂದ ಸರಸ್ವತಿಯವರ ಅರ್ಥ ಹೀಗಿದೆ—"ಚತುರ್ವೇದಗಳ ಕಲ್ಯಾಣ ಸಾಧಕ ವಾಣಿಯನ್ನು ಸಕಲ ಮಾನವ ಜನಾಂಗಕ್ಕಾಗಿ ಅವದಾನಿ-ಉಪದೇಶಿಸಿದೆನೋ, ಹಾಗೆಯೇ ತಿಳಿದಿರುವ ನೀವೂ ಸಹ, ಚತುರ್ವರ್ಣದವರಿಗೂ, ಶೂದ್ರಾಯ ಚಾರಣಾಯ ಅತಿ ಶೂದ್ರ, ಅಂದರೆ ಅಂತ್ಯಜರಿಗೂ ಸಹ, ಸ್ವಾಯ ಪುತ್ರಾಯ - ಪ್ರಿಯನಾದ ಭೃತ್ಯನಿಗೂ ಸಮಾನವಾಗಿ ಬೋಧಿಸಿರಿ ಅವರಿಗೆಲ್ಲ ಅಧಿಕಾರವುಂಟು. ನಾನು ಪಕ್ಷ-ಪಾತವಿಲ್ಲದೆ ಎಲ್ಲರಿಗೂ ವೇದ ವಾಣಿಯನ್ನು ಉಪದೇಶಿಸಿ, ಪ್ರಿಯಂ ಭೂಯಾಸಂ - ಎಲ್ಲರಿಗು ಪ್ರಿಯನಾದೆನೋ ಮತ್ತು ನನ್ನ ಇಷ್ಟಾರ್ಥವು

ಸಿದ್ಧಿಸಿತೋ, ಹಾಗೆಯೇ 'ಉಪವಾದೋ ನಮತು' ನಿಮಗೂ ಇಷ್ಟ ಸುಖವು ಲಭಿಸಲಿ.

ಜನಂ ಬಿಭ್ರತಿ ಬಹುಧಾ ನಿವಾಚಸಂ।
ನಾನಾ ಧರ್ಮಾಣಂ ಪೃಥಿವೀ ಯಥೌಕಸಂ
ಸಹಸ್ರಂ ಧಾರಾ ದ್ರವಿಣಸ್ಯ ಮೇದುಹಾಂ ಧೃವೇವ ಧೇನುರನಪ ಸ್ಫುರನ್ತೀ॥

ಅನೇಕ ಧರ್ಮ, ಅನೇಕ ಭಾಷೆಗಳ ಮನುಷ್ಯರನ್ನು ಧಾರಣೆ ಮಾಡುವ ಪೃಥ್ವಿ ನಿಶ್ಚಲ ಗೋವಿನಂತೆ ಸಹಸ್ರ ಧಾರೆಯಾಗಿ ಧನವನ್ನು ಕರೆಯಲಿ.

ಮಿತ್ರಸ್ಯ ಮಾ ಚಕ್ಷುಷಾ ಸರ್ವಾಣಿ ಭೂತಾನಿ ಸಮೀಕ್ಷಂತಾಂ
ಮಿತ್ರಸ್ಯಾಹಂ ಚಕ್ಷುಷಾ ಸರ್ವಾಣಿ ಭೂತಾನಿ ಸಮೀಕ್ಷೆ॥

ಎಲ್ಲ ಪ್ರಾಣಿಗಳೂ ನನ್ನನ್ನು ಮಿತ್ರನಂತೆ ನೋಡಲಿ. ನಾನೂ ಸಹ ಎಲ್ಲ ಪ್ರಾಣಿಗಳನ್ನು ಮಿತ್ರನಂತೆ ಕಾಣಲು ಶಕ್ತಿ ದಯಪಾಲಿಸು.

ವೇದ ಸಂದೇಶಗಳಲ್ಲಿ ಎಲ್ಲ ಕಾಲ, ಎಲ್ಲ ಮಾನವರ-ಎಲ್ಲ ಧರ್ಮಗಳವರಿಗೂ ಸಮನ್ವಯವಾಗುವ, ಕಾರ್ಯರೂಪದಲ್ಲಿ ಯಾರಿಗೂ ಬಾಧೆ ಇಲ್ಲದ ಉಪದೇಶವುಂಟು. ಕೆಲ ಉದಾಹರಣೆಗಳು—

ದೇವರು ಜಗತ್ತಿನ ಅಣು – ರೇಣು – ತೃಣ – ಕಾಷ್ಟಾದಿಗಳಲ್ಲಿ ವ್ಯಾಪಿಸಿರುವನು. ನಾಮರೂಪಗಳಧಿಕ-ಇರುವ ಒಳ ತತ್ವ ಧರ್ಮಪಾಲನೆ, ಮಾತಾ-ಪಿತೃ, ಗುರು, ಅತಿಥಿಗಳಲ್ಲಿ ಶ್ರದ್ಧೆಯು ಸೇವಾಭಾವ ಇರಲಿ.

ನಾವು ಶತಾಯುಗಳಾಗಿ. ಶ್ರಮದಿಂದ ದುಡಿದು ಗಳಿಸಿದುದನ್ನು ಸದ್ವಿನಿಯೋಗ ಮಾಡಬೇಕು – ಕದಿಯಬಾರದು, ಕೂಡಿಹಾಕಬಾರದು, ಹಂಚಿ ತಿನ್ನಬೇಕು, ಸ್ನೇಹ ದಯೆಗಳಿಂದ ವರ್ತಿಸಬೇಕು, ಪಾರಸ್ಪರಿಕ ಸಹಕಾರ ಬೇಕು. ಪ್ರೇಮಮಯ ಆನಂದಮಯ ಜೀವನ ನಡೆಸುತ್ತ-ಘಟ

ಘಟದಲ್ಲೂ ಇರುವ ಪರಮಾತ್ಮನನ್ನರಿಯಬೇಕು. ವೇದ ಸಂದೇಶವು ನಮ್ಮ ರಾಷ್ಟ್ರದ ಮೇಲೆ ಶತ ಶತಮಾನಗಳ ಕಾಲದಿಂದಲೂ ವಿದ್ಯುತ್ ಸ್ಪರ್ಶ ಪ್ರಭಾವವನ್ನು ಬೀರಿ, ಸ್ಫೂರ್ತಿಯನ್ನೂ, ಬೆಳಕನ್ನೂ, ಚೇತನವನ್ನೂ ನೀಡುತ್ತ ಬಂದಿದೆ

ವೇದ ಭಾಗಗಳಾದ ಮನು- ಯಾಜ್ಞವಲ್ಕ್ಯ, ಪರಾಶರ ಸ್ಮೃತಿಗಳು ಶ್ರೀಮದ್ಭಾಗವತವನ್ನೊಳಗೊಂಡ ಪುರಾಣಗಳು ಮತ್ತು ಉಪ ಪುರಾಣಗಳು, ಆಗಮಗಳು, ದರ್ಶನ ಗ್ರಂಥಗಳು ಕಾಲ ಕಾಲಗಳ ವೈಚಿತ್ರ್ಯಕ್ಕೆ ಅನುಗುಣವಾಗಿ ನಿಯಂತ್ರಿಸಿ, ದಾರಿ ತೋರಿ ವೇದ ಮಾರ್ಗದಲ್ಲಿ ಮುನ್ನಡೆಯುವ ಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸುತ್ತಲಿವೆ.

ಮೋಕ್ಷವೇ ಜೀವನದ ಪರಮ ಲಕ್ಷ್ಯ. ಪ್ರತಿ ಮಾನವನು ತನ್ನ ಜೀವನದಲ್ಲಿ ಕ್ರಮವಾಗಿ ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ ಮತ್ತು ಸನ್ಯಾಸ ಎಂಬ ನಾಲ್ಕು ಹಂತಗಳನ್ನು ಅಥವ ಆಶ್ರಮಗಳನ್ನು ಹಾದು ಮೋಕ್ಷವನ್ನು ಪಡೆಯಲೆತ್ನಿಸಬೇಕು.

ನೀರಿನಲ್ಲಿ ಹುಟ್ಟುವ ಗುಳ್ಳೆಯು ಅದರಲ್ಲೇ ಇದ್ದು ಪುನಃ ಅದರಲ್ಲೇ ಲಯವಾಗುವಂತೆ ಈ ಜಗತ್ತು ಯಾವುದರಿಂದ ಹುಟ್ಟಿ ಯಾವುದರಲ್ಲಿ ನೆಲೆಸಿ ಮತ್ತೆ ಯಾವುದಕ್ಕೆ ಹಿಂದಿರುಗುವುದೋ ಅದೇ ಬ್ರಹ್ಮ, ಆದರ ಸ್ವರೂಪ ಸತ್-ಚಿತ್-ಆನಂದ ನಮ್ಮ ನಿಜ ಸ್ವರೂಪವು ದೇಹ, ಮನಸ್ಸು, ಮೊದಲಾದುವನ್ನೆಲ್ಲ ಮೀರಿದ ಆತ್ಮ. ಆತ್ಮ-ವಸ್ತುವಿಗೆ ಜನನ-ಮರಣ-ಮುಪ್ಪು ಗಳಿಲ್ಲ. ಅದು ನಿತ್ಯ ಆನಂದದ ಸ್ವರೂಪ. ಆತ್ಮ ಜ್ಞಾನದಿಂದ, ಬ್ರಹ್ಮದ ಅನುಭವದಿಂದ ಮುಕ್ತಿಯನ್ನು ಪಡೆಯಬಹುದು. ಸಕಲ ಬಂಧನಗಳಿಂದಲೂ ಪಾರಾಗಿ ಶಾಶ್ವತ ಪರಮಾನಂದವನ್ನು ಪಡೆಯುವ ಅವಸ್ಥೆಯೇ ಮುಕ್ತಿ. ಮುಕ್ತ ಪುರುಷನು ಮತ್ತೆ ಜನನ – ಮರಣಗಳ ಪ್ರವಾಹಕ್ಕೆ ಸಿಕ್ಕನು. ಇದು ವೇದ ಸಂದೇಶದ ಸಾರ ಸಂಗ್ರಹ.

೨

ಎರಡನೆಯ ಭಾಗ

ವೇದಾಂತ-ಸಾರ

ದ್ವಿತೀಯ ಭಾಗ.

ವೇದಾಂತ-ಸಾರ

ಉಪನಿಷತ್ತುಗಳು— ಎಂದರೆ ಬ್ರಹ್ಮ ವಿಷಯದ ವಿದ್ಯೆ. ಇದು ವೇದಗಳ ಅಂತ್ಯ-ಯಾ-ಉತ್ತರ ಭಾಗದಲ್ಲಿ ವಿವರಿಸಲ್ಪಟ್ಟಿದೆ. ಮುಖ್ಯ ವೇದಾಂತ ಸೂತ್ರಗಳಾದ ಷಡ್ದರ್ಶನಗಳಿಗೆ ಉಪನಿಷತ್ತುಗಳೇ ಮೂಲ. ಉಪನಿಷತ್ತುಗಳು ಮಾನವನು ಮರ್ತ್ಯಲೋಕದಿಂದ ಅಮೃತತ್ವಕ್ಕೆ ಹೋಗಲು ನಿರ್ಮಿಸಿದ ಏಣಿಯಂತಿವೆ. ತತ್ವಗಳು, ಸಿದ್ಧಾಂತಗಳು ಒಂದಲ್ಲ ಹಲವು ತತ್ವಗಳು, ಹಲವು ಸಿದ್ಧಾಂತಗಳ ಸಮುದಾಯ ಈ ಉಪನಿಷತ್ತುಗಳಿದ್ದು, ಇವುಗಳನ್ನೆಲ್ಲ ಪೋಷಿಸಬಲ್ಲ ಆಗಾರದಂತಿದೆ. ಮಹಾ ಋಷಿಗಳೂ, ಮಹಾ ಮಹಿಮರೂ ಅನೇಕ ಶತಮಾನಗಳ ಕಾಲ ಶ್ರಮಿಸಿ, ಸತ್ಯಾನ್ವೇಷಣೆ ಮಾಡಿ, ಭಿನ್ನ ಭಿನ್ನ ದೃಷ್ಟಿಯಿಂದ ಗೋಚರಿಸಿದ ಏಕ ಸತ್ಯದ ಕೆಲ ಚಿತ್ರಗಳನ್ನು ಇಲ್ಲಿ ಕಾಣಬಹುದು. ಉಪನಿಷತ್ತು ಪ್ರಸ್ಥಾನತ್ರಯಗಳಲ್ಲಿ ಬಹು ಮುಖ್ಯವಾದ ಅಂಗವಾಗಿದೆ. ಬ್ರಹ್ಮಸೂತ್ರ ಮತ್ತು ಭಗವದ್ಗೀತೆಗಳಿಗೆ ಆಧಾರವೇ ಉಪನಿಷತ್ತು ಎನ್ನಲಡ್ಡಿಯಿಲ್ಲ. ಬ್ರಹ್ಮಸೂತ್ರದಲ್ಲಿ, ಉಪನಿಷತ್‌ನಲ್ಲಿ ಹೇಳದ ಹೊಸ ವಿಷಯವೇನೂ ಇಲ್ಲ. ಬ್ರಹ್ಮಸೂತ್ರ, ಉಪನಿಷತ್-ನುಡಿಗಳ ಹಾರವಿದ್ದಂತೆ. ಉಪನಿಷತ್ – ತೋಟದಿಂದ, ಕೊಯ್ದು ತಂದ ಹೂಗಳ ಮಾಲೆಯದು.

ಸರ್ವೋಽಪನಿಷದೋ ಗಾವೋ
ದೋಗ್ಧಾ ಗೋಪಾಲ ನಂದನಃ
ಪಾರ್ಥೋಽ ವತ್ಸಃ ಸುಧೀರ್ಭೋಽಕ್ತಾ
ದುಗ್ಧಂ ಗೀತಾಮೃತಂ ಮಹತ್।

ಎಂಬ ಧ್ಯಾನ ಶ್ಲೋಕದಂತೆ-ಎಲ್ಲ ಉಪನಿಷತ್ತುಗಳು ಗೋವುಗಳು. ಗೋಪಾಲ ನಂದನನು ಹಾಲು ಕರೆಯುವವನು. ಪಾರ್ಥನು ಕರು. ಮಹತ್ ಗೀತಾಮೃತವೇ ಹಾಲು. ಇದನ್ನು ಕುಡಿಯುವವರು ಜ್ಞಾನಿಗಳು. ಈ ಕಾರಣ ಉಪನಿಷತ್ತು, ಭಗವದ್ಗೀತೆಗೆ ಆಧಾರವೆಂದು ಹೇಳಲು ಯಾವ ಅಡ್ಡಿಯೂ ಇಲ್ಲ.

ಎಲ್ಲ ವೇದಗಳಿಗೂ ಬೇರೆ ಬೇರೆ ಉಪನಿಷತ್ತುಗಳಿದ್ದರೂ, ಇವುಗಳ ಸಂಖ್ಯೆಯ ವಿಷಯಕ್ಕೆ ಭಿನ್ನಾಭಿಪ್ರಾಯವುಂಟು. ಮುಕ್ತಿಕೋಪನಿಷತ್ ಪ್ರಕಾರಕ್ಕೆ 108 ಉಪನಿಷತ್ತುಗಳೆಂದು, ನಿಷ್ಠವಾಗಿವೆ. ಅತ್ಯಂತ ಜನ ಪ್ರಿಯವಾಗಿ ಹೆಚ್ಚಿನ ಪ್ರಚಾರದಲ್ಲಿ ಇರುವ ಉಪನಿಷತ್ತುಗಳೆಂದರೆ—

1) ಈಶ 2) ಕೇನ 3) ಕಠ 4) ಪ್ರಶ್ನ 5) ಮುಂಡಕ 6) ಮಾಂಡೂಕ್ಯ 7) ತೈತ್ತಿರೀಯ 8) ಐತರೇಯ 9) ಛಾಂದೋಗ್ಯ 10) ಬೃಹದಾರಣ್ಯಕ 11) ಶ್ವೇತಾಶ್ವತರ.

ಪಾಶ್ಚಾತ್ಯ ಪಂಡಿತರಾದ ಪ್ರೊ॥ ಹೌಗ್‌ರ ಪ್ರಕಾರ 170, ಡಾ॥ ಬರ್ನಲ್‌ರಂತೆ 154 ಮತ್ತು ಮ್ಯಾಕ್ಸ್‌ಮುಲ್ಲರ ಅಭಿಪ್ರಾಯದಂತೆ 149 ಇವೆ. ಅವರು ತಮ್ಮ "ಅ" ಕಾರಾದಿ ಪಟ್ಟಿಗಳಿಂದ ಸಿದ್ಧಪಡಿಸಿರುವರು. ಆದರೂ, ಅವೆಲ್ಲ ಉಪಲಬ್ಧವಿಲ್ಲ. ಕೆಲ ಶತಮಾನಗಳ ಹಿಂದೆ ಮೊಗಲ್ ದರ್ಬಾರಿನ ಕವಿಶ್ರೇಷ್ಠರಲ್ಲೊಬ್ಬರಾದ ದಾರಾಶಿಕೊ ಸಂಸ್ಕೃತವನ್ನು ಚನ್ನಾಗಿ ಅಭ್ಯಸಿಸಿ, ಸಂಸ್ಕೃತವಲ್ಲಿದ್ದ 50 ಉಪನಿಷತ್ತುಗಳನ್ನು ಪರ್ಶಿಯನ್‌ಗೆ ಭಾಷಾಂತರಿಸಿ, ಉಪನಿಷತ್ತುಗಳ ಸಂಖ್ಯೆ ಐವತ್ತೇ ಎಂದು ಸಾರಿದ್ದಾನೆ.

ಸೃಷ್ಟಿ, ಜೀವ, ಪ್ರಾಣ, ಈಶ್ವರ, ಪ್ರಪಂಚ, ಜೀವೇಶ್ವರ ಸಂಬಂಧ ಜೀವ- ಜಗತ್ತುಗಳ ಸಂಬಂಧ ಇವೆಲ್ಲವನ್ನೂ ಒಳಗೊಂಡ ಜ್ಞಾನರಾಶಿಯೇ ಉಪನಿಷತ್ತು. ಈ ಗಹನ ವಿಚಾರಗಳು ಎಲ್ಲರಿಗೂ ತಿಳಿಯಲಾಗದ,

ತಿಳಿಸಲಾಗದ ರಹಸ್ಯವಾದ ಕಾರಣ ಮತ್ತು ಅತಿ ಸಮೀಪದಲ್ಲಿ ಕುಳಿತು ತಿಳಿಯ ಬೇಕಾದುದರಿಂದ ಈ ಹೆಸರು ಬಂದಿತು. ವೇದಾಂತವೆಂದರೆ ಉಪನಿಷತ್ತುಗಳೆ! ಇದು ಬ್ರಹ್ಮ ಚಿಂತನಕ್ಕೆ ಆಧಾರವಾಗಿರುವ ಕಾರಣ ಇದನ್ನು ವೇದಾಂತವೆಂದು ಕರೆಯುವರು, ಉಪನಿಷತ್ತು ಪ್ರಸ್ಥಾನತ್ರಯಗಳಲ್ಲಿ ಬಹು ಮುಖ್ಯವಾದ ಅಂಗ (ಪ್ರಸ್ಥಾನತ್ರಯ-ಉಪನಿಷತ್ತು, ಭಗವದ್ಗೀತೆ, ಬ್ರಹ್ಮಸೂತ್ರಗಳು) ಗೀತೆ ಮತ್ತು ಬ್ರಹ್ಮಸೂತ್ರಗಳಿಗೆ ಆಧಾರವೇ ಉಪನಿಷತ್ತು.

ಭಗವದ್ಗೀತೆಯಲ್ಲಿ ಬರುವ ವಿಷಯಗಳನ್ನು ಶ್ರೀ ಕೃಷ್ಣನು ಉಪನಿಷತ್ತಿನಿಂದಲೇ ತೆಗೆದುಕೊಂಡು ಸುಲಭ ರೀತಿಯಲ್ಲಿ, ಸರಳ ಭಾಷೆಯಲ್ಲಿ ಜನಸಾಮಾನ್ಯರಿಗೆ ಅರ್ಥವಾಗುವಂತೆ ಹೇಳಿರುವನು. ಗೀತೆಗಾಶ್ರಯ ಉಪ-ನಿಷತ್ತೆಂಬುದು ಈ ಹಿಂದಿನ ಧ್ಯಾನ ಶ್ಲೋಕದಿಂದ ಸ್ಪಷ್ಟವಾಗುವುದು. ಭಗವದ್ಗೀತೆ, ಬ್ರಹ್ಮಸೂತ್ರಗಳು, ಉಪನಿಷತ್ತಿನ ಉಪಜೀವಿಗಳೆಂದು ಹೇಳಲಡ್ಡಿಯಿಲ್ಲ. ವೇದಾಂತದ, ಮುಖ್ಯವಾಗಿ ಹಿಂದುಗಳ ತತ್ವ ಸಿದ್ಧಾಂತಕ್ಕೆಲ್ಲ ವಜ್ರ ತಳಹದಿಯಂತಿರುವುದು ಉಪನಿಷತ್ತು.

ಉಪನಿಷತ್ಕಾರರ-ಸತ್ಯ-ನಿಷ್ಠೆ — ಉಪನಿಷತ್ತುಗಳನ್ನು ಓದುವಾಗ ಮೊದಲು ನಮ್ಮನ್ನು ಆಕರ್ಷಿಸುವ ಒಂದು ಭಾವನೆಯೇ ಅದರಲ್ಲಿ ಬರುವ ಸತ್ಯನಿಷ್ಠೆ. ಸತ್ಯಕ್ಕಾಗಿ ಅವರು ಎಂತಹ ಬಲಿದಾನಕ್ಕಾದರೂ ಸಿದ್ಧರಿದ್ದರು. ಋಷಿಗಳು ತಮ್ಮ ಸಿದ್ಧಾಂತವನ್ನು ಪ್ರತಿಪಾದಿಸುವಾಗ ಒಂದು ಉಪನಿಷತ್ತಿನ ನುಡಿಯನ್ನು ಹೊರಡಿಸಿದರೆ ಅದಕ್ಕೆ ಬದಲು ಯಾರೂ ಮಾತನಾಡುವಂತಿರಲಿಲ್ಲ. ಧೀರ ಯಾತ್ರಿಕರು, ಉಪನಿಷತ್ತಿನ ಋಷಿಗಳು ಸತ್ಯದ ಪಥದಲ್ಲಿ, ಸತ್ಯ ಎಲ್ಲಿಗೆ ಒಯ್ದರೆ ಅಲ್ಲಿಗೆ ಹೋಗಲು ಸಿದ್ಧವಿದ್ದರು. ಉಪನಿಷತ್ತಿನಲ್ಲಿ ಅಂಧಾನುಕರಣೆಯೇ ಇಲ್ಲ. ಎಲ್ಲ ಸ್ಪಷ್ಟವಾದ ಸತ್ಯದ ಚಿತ್ರ. ಗುರಿಯನ್ನು ಮುಟ್ಟಲು ಅದು ಕೈಮುರವಿದ್ದಂತೆ. ಅಡ್ಡ-ತಿಡ್ಡ ದಾರಿಗಳಿಲ್ಲ. ಒಂದೇ ನೀಟು ಹಾದಿ.

ಆ ಪರಮಾರ್ಥ ಸತ್ಯವನ್ನು ನೋಡಿದವರು ಅನುಭವಿಸಿದವರು ಉಪನಿಷತ್ತಿನ ಋಷಿಗಳು. ಅದು ಅವರಿಗೇ ಮೀಸಲಾದ ಅನುಭವವೂ ಅಲ್ಲ. ಯಾವ ದೇಶದಲ್ಲೇ ಇರಲಿ, ಯಾವ ಧರ್ಮಕ್ಕೇ ಸೇರಿರಲಿ, ಸಾಧಕನು ಆ ಸತ್ಯದ (ಸಾಧನ-ಚತುಷ್ಟಯ) ಗಡಿಯಲ್ಲಿ ಪಳಗಿ ಮುಂದುವರಿದರೆ ಅವನಿಗೆ ಆ ಅನುಭವದ ಗುರಿ ಮುಟ್ಟುವಲ್ಲಿ ಸಂಶಯವೇ ಇಲ್ಲ. ಉಪನಿಷತ್ತಿನಲ್ಲಿ ಬರುವ ಸತ್ಯ ಅನಾದಿ. ಅದನ್ನು ಸಾಕ್ಷಾತ್ಕಾರ ಮಾಡಿಕೊಂಡವರು ಯಾವ ಜನ್ಮ ತಡೆದು ಸತ್ತಿದ್ದರೂ, ಸತ್ಯವು, ಅವರು ಅದನ್ನು ತಿಳಿದುಕೊಳ್ಳುವ ಮುಂಚೆಯೇ ಇದ್ದಿತು. ಸತ್ಯವನ್ನು ಅರಿಯಲು ಸಮರ್ಥರು ಯಾರೂ ಇಲ್ಲವೇ ಇದ್ದರೂ ಅದು ಇಲ್ಲದೆ ಇರಲಿಲ್ಲ. ಋಷಿಗಳ ಕಾರ್ಯವೆಂದರೆ ಸತ್ಯದ ಸನಾತನತ್ವವನ್ನು ಜಗಕ್ಕೆ ಸಾರುವುದು: ಅವರು ವ್ಯಕ್ತಿಯ ಪ್ರತಿಷ್ಠೆಯ ಕಡೆ ಗಮನ ಎಂದೂ ಕೊಡಲಿಲ್ಲ.

ಸ್ತ್ರೀಯರಿಗೆ ಗೌರವಸ್ಥಾನ—ಉಪನಿಷತ್ತುಗಳಲ್ಲಿ ಸ್ತ್ರೀಯರಿಗೆ ಒಂದು ಗೌರವ ಸ್ಥಾನ ಕೊಟ್ಟಿರುವುದು ಮತ್ತೊಂದು ವೈಶಿಷ್ಟ್ಯ. ಪುರುಷನಂತೆ ಸ್ತ್ರೀಯೂ ಬ್ರಹ್ಮವಾದಿನಿಯಾಗಿದ್ದಳು. ಉಪನಿಷತ್ತುಗಳ ನಂತರ ಬಂದ ಶಾಸ್ತ್ರಗಳು ಸ್ತ್ರೀಯರನ್ನು ಹಳಿದದ್ದುಂಟು ನಿಕೃಷ್ಟ ಸ್ಥಾನವನ್ನು ಕೊಟ್ಟದ್ದುಂಟು. ಆದರೆ ವೇದೋಪನಿಷತ್ತುಗಳಲ್ಲಿ ಸ್ತ್ರೀಯರಿಗೆ ಗಣ್ಯಸ್ಥಾನವಿದೆ ವೇದಗಳಲ್ಲಿ ಬರುವ ಕೆಲ ಸೂತ್ರಗಳನ್ನು ಲೋಪಾಮುದ್ರ, ವಿಶ್ವಾವರಾ, ಸಿಕತಾನಿವಾವರಿ, ಘೋಶಾ ಎಂಬ ನಾಮಧೇಯದ ಸ್ತ್ರೀ ರತ್ನಗಳು ರಚಿಸಿದ್ದರೆಂದರೆ ಆಶ್ಚರ್ಯವಾಗುವುದು. ಅಧ್ಯಾತ್ಮಿಕ ಪ್ರಪಂಚದಲ್ಲಿ ರುಷಿಗಳಿಗೆ ಸಮನಾಗಿ ಸ್ತ್ರೀಯೂ ಏರುತ್ತಿದ್ದಳು.

ಇಂತ ಒಂದೆರಡು ಪ್ರಸಂಗಗಳನ್ನು ಬೃಹದಾರಣ್ಯಕೋಪನಿಷತ್ತಿನಲ್ಲಿ ಕಾಣಬಹುದಾಗಿದೆ.

ಒಂದನೆಯದು—ಮೈತ್ರೇಯಿ, ಕಾತ್ಯಾಯನೀ ಎಂಬಿಬ್ಬರು ಪತ್ನಿಗಳುಳ್ಳ ಬ್ರಹ್ಮಜ್ಞನಾದ ಯಾಜ್ಞವಲ್ಕ್ಯನು ಅತ್ಯಾಶ್ರಮವನ್ನು ಸ್ವೀಕರಿಸಲು ಸಿದ್ಧನಾಗಿ ತನ್ನ ಸ್ವತ್ತನ್ನು ಪತ್ನಿಯರಿಬ್ಬರಿಗೂ ಹಂಚಲು ಇಷ್ಟಪಟ್ಟನು. ಆಗ ಮೈತ್ರೇಯಿಯು ಪ್ರಶ್ನಿಸುವಳು ಹೀಗೆ,

"ಧನಪರಿಪೂರ್ಣವಾದ ಈ ಪೃಥ್ವಿ ಎಲ್ಲ ನನಗೆ ಇದ್ದರೆ ನಾನು ಅದರ ಮೂಲಕ ಅಮೃತಳಾಗುವೆನೆ?"

ಯಾಜ್ಞವಲ್ಕ್ಯನು ಧನಸಾಧ್ಯವಾದ ಅಗ್ನಿಹೋತ್ರಾದಿ ಕರ್ಮಗಳಿಂದ ಅಮೃತತ್ವದ ಆಶೆಯೇ ಇಲ್ಲವೆಂದು ಹೇಳಿ ಆಕೆಯ ಇಷ್ಟ ಪ್ರಕಾರ ಅಮೃತತ್ವ-ಪ್ರಾಪ್ತಿಗೆ ಆತ್ಮಜ್ಞಾನವು ಮುಖ್ಯ ಸಾಧಕವೆಂದು ವಿಸ್ತೃತವಾಗಿ ಉಪದೇಶಿಸುವನು.

ಎರಡನೇ ಪ್ರಸಂಗ — ಅದೇ ಬೃಹದಾರಣ್ಯಕೋಪನಿಷತ್ತಿನಲ್ಲಿ ಸೂಚಿತವಾಗಿರುವಂತೆ ಜನಕ ಮಹಾರಾಜನ ಆಸ್ಥಾನದಲ್ಲಿ ನಡೆದ ದೃಶ್ಯವಿದು. ಜನಕನಿಗೆ ಬಹು ದಕ್ಷಿಣವೆಂಬ ಯಜ್ಞವನ್ನು ಮುಗಿಸಿದ ನಂತರ ಹೆಚ್ಚು ಜ್ಞಾನಿ ಯಾರೆಂಬುದನ್ನು ಕಂಡು ಹಿಡಿಯುವ ಜಿಜ್ಞಾಸೆಯುಂಟಾಯಿತು.

ಒಂದು ಸಾವಿರ ಗೋವುಗಳ ಪ್ರತಿ ಕೊಂಬಿಗೂ ಹತ್ತು ಚಿನ್ನದ ವರಗಳನ್ನು ಕಟ್ಟಿ-ಬ್ರಹ್ಮಿಷ್ಠನಾದವನು ಆ ಗೋವುಗಳನ್ನು ಹೊಡೆದುಕೊಂಡು ಹೋಗಲು ಹೇಳಿದನು. ಬ್ರಾಹ್ಮಣರು ಧೈರ್ಯಮಾಡಲು ಸಮರ್ಥರಾಗಲಿಲ್ಲ ಆಗ ಯಾಜ್ಞವಲ್ಕ್ಯನು ತನ್ನ ಶಿಷ್ಯನಿಗೆ ಅವುಗಳನ್ನು ಹೊಡೆದುಕೊಂಡು ಹೋಗಲು ಹೇಳಿದನು. ಅನೇಕ ಬ್ರಾಹ್ಮಣರು ಈರ್ಷೆಯಿಂದ ಜಟಿಲ ಪ್ರಶ್ನೆಗಳನ್ನು ಕೇಳಿ ಸಮರ್ಥ ಉತ್ತರಗಳನ್ನು ಪಡೆದು ಸೋತರು.

ಅವರೆಲ್ಲ ಸೋತ ನಂತರ, ಗಾರ್ಗಿವಾಚಕ್ನವಿ ಎಂಬ ಬ್ರಹ್ಮವಾದಿನಿ

ಎದ್ದು ಅತಿ ಜಟಿಲವಾದ ಎರಡು ಪ್ರಶ್ನೆಗಳನ್ನು ಹಾಕುವಳು. ದ್ಯುಲೋಕ, ಪೃಥ್ವಿಮಧ್ಯದ ಭಾಗ ಆದಿ. ಇವರಿಬ್ಬರ ಸಂಭಾಷಣೆಯಲ್ಲಿ ಅತಿ ಉನ್ನತ ಮಟ್ಟದ ತತ್ವ ವ್ಯಕ್ತವಾಗುವುದನ್ನು ಕಾಣಬಹುದು.

ಉಪನಿಷತ್ತಿನಲ್ಲಿ ಗುರು-ಶಿಷ್ಯರ ಸಂಬಂಧ—ಉಪನಿಷತ್ತಿನಲ್ಲಿ ಜ್ಞಾನೋಪದೇಶ ಮಾಡಲು ಪ್ರಶ್ನೋತ್ತರ ವಿಧಾನವನ್ನು ಅನುಸರಿಸುವರು. ಶಿಷ್ಯನ ಪ್ರಶ್ನೆಗೆ ಗುರುವು ಸಮರ್ಪಕ ಉತ್ತರ ಕೊಡುವನು. ಇದು ಅನುಕೂಲ ಮಾರ್ಗ, ತತ್ವವನ್ನು ತಿಳಿಯಲಿಚ್ಛಿಸುವ ಶಿಷ್ಯನು, ಜ್ಞಾನಿಯಾದ ಗುರುವಿನ ಬಳಿ ಬಂದು ಸೇವೆಗಾಗಿ ಬಹು ಕಾಲವಿದ್ದು, ಅತ್ಯಂತ ಕಠಿಣ ಪರೀಕ್ಷೆಗಳಿಗೊಳಗಾಗಿ ಕೊನೆಗೆ ಗುರು ಕೃಪೆಯಿಂದ ಪರಿಪೂರ್ಣತ್ವವನ್ನು ಹೊಂದುವನು. ವೇದೋಪನಿಷತ್ತುಗಳಲ್ಲಿ ಗುರು-ಶಿಷ್ಯರ ಸಂಬಂಧ ಅನ್ಯೋನ್ಯ ವಾದುದು. ಗುರುವು ಶಿಷ್ಯನಿಗೆ ತನ್ನ ಕೃತಿಗಳಿಂದ, ಮಾತುಗಳಿಂದ ಕಲಿಸು ವನು. ಸತ್ಯ ಸಾಕ್ಷಾತ್ಕಾರಪಾಗಿರುವ ಗುರುವಿನಲ್ಲಿ ಒಂದು ಚೈತನ್ಯವಿದೆ. ಅದು ಶಿಷ್ಯನಿಗೆ ವೇದ್ಯವಾಗದೆ ಇರದು.

ಜನ ಬಾಹುಳ್ಯವಿಲ್ಲದ ಪ್ರಶಾಂತ ಸ್ಥಳ, ವಾತಾವರಣದಲ್ಲಿ ಗುರು-ಶಿಷ್ಯರ ಸಂಬಂಧವು ತಂದೆ-ಮಕ್ಕಳಂತೆ ಇದ್ದು ನಿಶ್ಚಿತ ಧ್ಯೇಯ-ಆದರ್ಶ ಗಳಿಗೆ ಇಬ್ಬರೂ ಭಾಗಿಯಾಗುವರು. ಗುರುವು ಆಶಿಸುವುದು ತಾನು ಕಲಿತ ವಿದ್ಯೆ ಮಾನವ ಕೋಟಿಯ ಕಲ್ಯಾಣಕ್ಕೆ ವಿನಿಯೋಗವಾಗಲಿ ಎಂಬುದೇ ತೈತ್ತೀರಿಯೋಪನಿಷತ್ತಿನಲ್ಲಿ – ಗುರು ಸ್ಥಾನದಲ್ಲಿನ ಋಷಿಗಳು ಬ್ರಹ್ಮಚಾರಿ ಗಳನ್ನು ತಮ್ಮ ಬಳಿ ಆಹ್ವಾನಿಸುತ್ತಿದ್ದರು.

ಹೀಗೆ ಭರಧ್ವಾಜನ ಮಗನಾದ ಸುಕೇಶ, ಶಿಬಿಯ ಮಗ ಸತ್ಯಕಾಮ, ಗರ್ಗಗೋತ್ರದ ಸೌರ್ಯಾಯಣಿ, ಅಶ್ವಲನ ಮಗ ಕೌಶಲ್ಯ, ವಿದರ್ಭದ ಭಾರ್ಗವ ಮತ್ತು ಕತ್ಯನ ಮಗ ಕಬಂಧಿ ಇವರು ಬ್ರಹ್ಮಪರರೂ, ಬ್ರಹ್ಮ-

ನಿಷ್ಠರೂ ಆಗಿ, ಭಗವಂತನಾದ ಪಿಪ್ಪಲಾದನ ಬಳಿ ಬಂದರು. ಇನ್ನೂ ಒಂದು ವರ್ಷ ತಪಸ್ಸಿನಿಂದ, ಬ್ರಹ್ಮನಿಷ್ಠೆಯಿಂದ ಶುದ್ಧ ಜೀವನ ನಡೆಸಿರಿ, ಆ ನಂತರ ನನಗೆ ಆಗ ಏನಾದರೂ ತಿಳಿದಿದ್ದರೆ ಹೇಳುವೆ, ಎಂದು ತಿಳಿಸಿದನು.

'ಕಠೋರವಾದ ಸತ್ಯವನ್ನು ಯಾವನು ಹೇಳಬಲ್ಲನೋ ಅವನು ನಿಜವಾಗಿಯೂ ಬ್ರಹ್ಮೋಪಾಸನೆಗೆ ಯೋಗ್ಯನಾದವನು ಎಂದು ಗುರು ನಿಷ್ಕರ್ಷಿಸುವನು. ಪ್ರಿಯವಾದ, ನಮಗೆ ಕೀರ್ತಿ ತರಬಲ್ಲ ಸತ್ಯವನ್ನು ನಾವು ಹೇಳಲು ಕಾತುರರಾಗಿರುವೆವೇ ಹೊರತು ನಮ್ಮ ಮನೆಗೇ ಅಪಕೀರ್ತಿ ಬರುವಂತಹ ಕಹಿ ಸತ್ಯವನ್ನು ಗುರುವಿನ ಬಳಿ ಹೇಳಬಲ್ಲವರಾರು?

ಉಪನಿಷತ್ತಿನಲ್ಲಿ ಗುರುವು ಶಿಷ್ಯನಿಗೆ ಬೋಧಿಸುವ ವಿಧಾನ ಅದ್ಭುತವಾದುದು. ಗುರುವು ಶಿಷ್ಯನಷ್ಟೇ ಪರಿಶ್ರಮಿಸಬೇಕು ಶ್ರದ್ಧಾಭಕ್ತಿಗಳಿಂದ, ವಿಷಯದ ಮೇಲಿನ ಹೆಚ್ಚಿನಾಸಕ್ತಿಯಿಂದ ಶಿಷ್ಯನು ಪ್ರಶ್ನೆಗಳನ್ನು ಕೇಳಿದಾಗಲೇ ಹೊಸ ಹೊಸ ಭಾವನೆಗಳು ಗುರುವಿನ ಮನಸ್ಸಿನಲ್ಲಿ ಸ್ಫುರಿಸಬಲ್ಲವು. ಇಬ್ಬರೂ ಕಲಿಯಬೇಕು, ಇಬ್ಬರೂ ತಿಳಿಯಬೇಕು. ಇದಕ್ಕಾಗಿಯೇ ಉಪನಿಷತ್ತಿನಲ್ಲಿ ಗುರು-ಶಿಷ್ಯರಿಬ್ಬರ ಶಾಂತಿ ಪಾಠದ ಅಧ್ಯಯನಕ್ಕೆ ಇಂಥಹ ಪ್ರಾರ್ಥನೆಯು ಬಂದಿತು.

ಹರಿಃ ಓಮ್

ಸಹ ನಾವವತು। ಸಹ ನೌ ಭುನಕ್ತು।
ಸಹ ವೀರ್ಯಂ ಕರವಾವಹೈ।
ತೇಜಸ್ವಿ ನಾವಧೀತಮಸ್ತು। ಮಾ ವಿದ್ವಿಷಾವಹೈ॥
ಓಂ ಶಾಂತಿಃ ಶಾಂತಿಃ ಶಾಂತಿಃ

ಹರಿಃ ಓಮ್

(ಪರಮೇಶ್ವರನು) ಗುರು ಶಿಷ್ಯರಾದ ನಮ್ಮಿಬ್ಬರನ್ನೂ ಕಾಪಾಡಲಿ ನಮ್ಮಿಬ್ಬರನ್ನೂ ಜೊತೆಯಲ್ಲಿ ಪೋಷಿಸಲಿ, (ನಾವು) ಜೊತೆಯಲ್ಲಿ ಸಾಮರ್ಥ್ಯ ವನ್ನು ಉಂಟು ಮಾಡುವಂತಾಗಲಿ, ನಮ್ಮಿಬ್ಬರ ಅಧ್ಯಯನವು ತೇಜಸ್ವಿ ಯಾಗಲಿ, (ನಾವು ಪರಸ್ಪರ) ದ್ವೇಷ ಮಾಡದೆ ಇರುವಂತಾಗಲಿ.

ಓಂ ಶಾಂತಿಃ ಶಾಂತಿಃ ಶಾಂತಿಃ

ಇವು ಎಂತಹ ಸುಂದರ ವಿಚಾರಗಳು. ಸುಂದರ ಭಾವನೆಗಳು. ದೊಡ್ಡ ಟೀಕೆಯನ್ನು ಬರೆಯಬಹುದಾದ ಅರ್ಥವು ಇದರಲ್ಲಡಗಿದೆ.

ಗುರುವು ತನ್ನ ತಪ್ಪನ್ನು ಸಂಕೋಚವಿಲ್ಲದೆ ಶಿಷ್ಯನ ಬಳಿ ಒಪ್ಪಿ ಕೊಳ್ಳುತ್ತಿದ್ದನು. ಶಿಷ್ಯನ ವಿಚಾರ ಶಕ್ತಿಯನ್ನು ಗಮನಿಸದೆ ಗುರುವು ಅದನ್ನು ಪ್ರಚೋದಿಸುತ್ತಿದ್ದನು. ಗುರುವು ಶಿಷ್ಯನ ಒಳಗಣ್ಣನ್ನು ತೆರೆಯು ವಂತೆ ಮಾಡುತ್ತಿದ್ದನು. ಕಲಿಯುವುದು ಮಾತ್ರವಲ್ಲ ಕೊಡುವುದನ್ನೂ ಕಲಿಯಬೇಕು. ಅದಕ್ಕೆ ತಪಸ್ಸುಬೇಕು. ವಿದ್ಯಾದಾನವು ಅಷ್ಟೇ ತಪಸ್ಸು ಆತ್ಮವಿದ್ಯಾ ತಪೋಮೂಲಂ ಎಂದು ಶ್ವೇತಾಶ್ವತರದಲ್ಲಿ ಹೇಳಿದೆ ಇಂತಹ ತಪಸ್ವಿಗಳ ದರ್ಶನವಾಗುವುದು ಉಪನಿಷತ್ತಿನಲ್ಲಿ.

ತತ್ವ ಮತ್ತು ಬೋಧನಾ ವೈಶಿಷ್ಟ್ಯ — ಉಪನಿಷತ್ತುಗಳಲ್ಲಿ ಎಲ್ಲರಿಗೂ ಬೇಕಾದ ಸಿದ್ಧಾಂತಗಳುಂಟು. ಉಪನಿಷತ್ತು ತತ್ವಗಳನ್ನು ದ್ವೈತವೆಂದಾಗಲಿ, ಅದ್ವೈತವೆಂದಾಗಲಿ, ವಿಶಿಷ್ಟಾದ್ವೈತವೆಂದಾಗಲಿ ಹೇಳಲು ಬರುವಂತಿಲ್ಲ. ಆಯಾ ಸಿದ್ಧಾಂತಗಳನ್ನು ಪ್ರತಿಪಾದಿಸಿದ ಆಚಾರ್ಯರು ತಮ್ಮ ತಮ್ಮ ದೃಷ್ಟಿಯಿಂದ ಭಾಷ್ಯಗಳನ್ನು ಬರೆದಿರುವರು. ಇದು ತಪ್ಪು, ಇದು ಸರಿ ಎಂದು ಹೇಳಲು ಬರುವಂತಿಲ್ಲ. ಉಪನಿಷತ್ತುಗಳಲ್ಲಿ ಸಗುಣೋ-ಪಾಸನೆಯೂ ಉಂಟು. ನಿರ್ಗುಣೋಪಾಸನೆಯೂ ಇದೆ.

ಉಪನಿಷತ್ತಿನಲ್ಲಿನ ಗಹನ ತತ್ವಗಳು ಅನುಷ್ಠಾನವಾಗಿ ಸಿದ್ಧಾಂತ, ಗಳಾದವು. ನಾವು ಬ್ರಹ್ಮದಿಂದ ಬಂದವರು, ಅವನೆಡೆಗೆ ಹೊರಟವರು. ಮಾನವರನ್ನು ಪಾಪಿಗಳೆಂದು ಕರೆಯುವುದೇ ಈಶ್ವರ-ನಿಂದೆ. ಇಲ್ಲಿ ಮಾನವ ನೆಂದರೆ, ಸೃಷ್ಟಿಯ ವಿಕಾಸದ ಏಣಿಯಲ್ಲಿ ತುತ್ತುದಿಯಲ್ಲಿ ಇರುವವನು, ಈ ಕಾರಣದಿಂದಲೇ ಶ್ವೇತಾಶ್ವತರೋಪನಿಷತ್ತು ಮಾನವನನ್ನು ಸಂಬೋಧಿಸು ವುದು ಹೀಗೆ.

ಶೃಣ್ವಂತು ವಿಶ್ವೇ ಅಮೃತಸ್ಯ ಪುತ್ರಾ

ಯಾರು ದಿವ್ಯ ಧಾಮಗಳಲ್ಲಿ ಆಳುತ್ತಿರುವರೋ ಆ ಹಿರಣ್ಯಗರ್ಭನ ಪುತ್ರರೆಲ್ಲರೂ ಈ ನನ್ನ ಸ್ತೋತ್ರ ಕೇಳಲಿ. ಅಧ್ಯಯನವನ್ನು ಪೂರೈಸಿಕೊಂಡು ಹೋಗುವ ಬ್ರಹ್ಮಚಾರಿಗಳಗೆ ಗುರು ಮಾಡುವ ಬೋಧನೆ ಇಂದಿಗೂ ಎಂದೆಂದಿಗೂ ಅನುಕರಣೀಯವಾಗಿದೆ. ಸರ್ವ ಧರ್ಮಗಳವರೂ ಒಪ್ಪುವ ಬೋಧೆ. ಸತ್ಯವನ್ನೇ ನುಡಿ. ಅದರಿಂದ ಕದಲಬೇಡ. ಧರ್ಮವನ್ನೇ ಆಚರಿಸು. ಅದರಿಂದ ಕದಲಬೇಡ. ಅಧ್ಯಯನದಲ್ಲಿ ಪ್ರಮಾದ ಬೇಡ. ವೇದ ಪಾಠದಿಂದ, ದೇವ, ಪಿತೃ, ಕಾರ್ಯಗಳಿಂದ ಕದಲಬೇಡ. ತಾಯಿ, ತಂದೆ, ಅತಿಥಿ, ನಿನ್ನ ದೇವರು. ಮಂಗಳಯುಕ್ತ ಕರ್ಮ ಮಾಡು. ಅನಿಂದಿತ ಕರ್ಮಗಳಲ್ಲಿ ತೊಡಗು. ಒಳ್ಳೆಯ ನಡತೆ ಇರಲಿ. ನಮಗಿಂತ ಉತ್ತಮರೂ, ಪಂಡಿತರೂ ಇದ್ದಲ್ಲಿ ಅವರನ್ನು ಗೌರವಿಸು. ಶ್ರದ್ಧೆ, ವಿನಯ, ಭಯ, ಮಿತ್ರ ಭಾವಗಳಿಂದ ಕೊಡು ದಾನ ಮಾಡು. ಇದು ವಿಧಿ, ಉಪದೇಶ, ವೇದ ರಹಸ್ಯ, ಈಶ್ವರಾಜ್ಞೆ ಉಪನಿಷತ್ತುಗಳ ಬೋಧನೆಯ ವೈಶಿಷ್ಟ್ಯವಿದು.

ಉಪನಿಷದ್ ಅಂತರ್ಗತ ಜಗತ್ ಸೃಷ್ಟಿಯ ಕ್ರಮ

ತೈತ್ತಿರೀಯೋಪನಿಷತ್ತಿನಲ್ಲಿ ಹೀಗೆ ಪ್ರತಿಪಾದಿತವಾಗಿದೆ.

ಏತಸ್ಮಾದಾತ್ಮನ ಆಕಾಶ ಸಂಭೂತಃ।
ಆಕಾಶಾದ್ವಾಯುಃ। ವಾಯೊರಗ್ನಿಃ।
ಅಗ್ನೇರಾಪಃ। ಆದ್ಭ್ಯಃ ಪೃಥಿವೀ।
ಪೃಥಿವ್ಯಾ ಔಷಧಯಃ। ಔಷಧೀಭ್ಯೋನ್ನಮ್
ಅನ್ನಾತ್ ಪುರುಷಃ। ಸವಾಏಷಾ
ಪುರುಷೋನ್ನ ರಸಮಯಃ।

ಹೀಗೆ ಆತ್ಮನಿಂದ ಆಕಾಶ, ಆಕಾಶದಿಂದ ವಾಯು, ವಾಯುವಿನಿಂದ ಅಗ್ನಿ, ಅಗಿಯಿಂದ ಜಲ, ಜಲದಿಂದ ಪೃಥ್ವಿ, ಪೃಥ್ವಿಯಿಂದ ಸಸ್ಯ (ಔಷಧಿ)ಸಸ್ಯದಿಂದ ಅಹಾರ–ಧಾನ್ಯ, ಧಾನ್ಯದಿಂದ ಪುರುಷನೂ ಉದ್ಭವಿಸಿರುತ್ತಾರೆ. ಇವನ್ನೇ ಪಂಚ ಭೂತಗಳೆಂದು ಕರೆಯುವರು.

ಈ ಪಂಚ ಭೂತಗಳು ಒಂದರಲ್ಲೊಂದು ಬೆರತುಕೊಳ್ಳದೆ ಇರುವಾಗ ಅಪಂಚೀಕೃತ ಎನಿಸುವವು. ಕನಸಿನಲ್ಲಿ ವಾಸನೆಗಳಿಂದ ಕೂಡಿ ಕರ್ಮ ಫಲಗಳ ಅನುಭವವನ್ನುಂಟು ಮಾಡುತ್ತವೆ.

ಈ ಪಂಚ ಭೂತಗಳಲ್ಲಿ 96 ತತ್ವಗಳಿವೆ. ಇವುಗಳನ್ನು ತಿಳಿಯಬೇಕಾದುದು ಅಗತ್ಯ. ಹಾಗೆಯೇ ಶರೀರಕ್ಕೆ ಸಂಬಂಧಿಸಿದ ಸ್ಥೂಲ, ಸೂಕ್ಷ್ಮ, ಕಾರಣ ಶರೀರ, ಪಂಚಪ್ರಾಣ, ಉಪಪ್ರಾಣಗಳನ್ನೂ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಪಂಚಭೂತ — ೯೬ ತತ್ತ್ವಗಳು.

5 ಪಂಚಭೂತ—ಭೂಮಿ, ಜಲ, ಅಗ್ನಿ, ವಾಯು, ಆಕಾಶ.

5 ಜ್ಞಾನೇಂದ್ರಿಯ— ಚರ್ಮ, ನಾಲಗೆ, ನೇತ್ರ, ಮೂಗು, ಕಿವಿ.

5 ಕರ್ಮೇಂದ್ರಿಯ— ವಾಕ್ಕು, ಪಾನಿ, ಪಾದ, ಪಾಯು, ಉಪಸ್ಥ
(Hands) ಗುದ Genital

5 ಅವಸ್ಥಾ — ಜಾಗೃತಿ, ಸ್ವಪ್ನ - ಸುಷುಪ್ತಿ - ತುರೀಯ, ಅತಿತುರೀಯ
Sleep | Deep | Lay of
| Sleep | life process

5 ಗುಣ—ದೇವ - ದಾನ - ವಿಸರ್ಗ - ಆನಂದ - ಭಯ
Divinity-Charity-Renunciation-Bliss-Fear,

5 ಕೋಶ—ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ.

5 ಆಶಯ -- Receptacles of the body.

ಅಮರ	ಪಕ್ವ	ಮಾಲಾ	ಜಾಲಾ	ಶುಕ್ಲ
Mouth	Stomach	Intestines	Kidneys	Seminal Vesicles

5 ಪುಲಜ—ಶಬ್ಧ, ಸ್ಪರ್ಶ, ರೂಪ, ರಸ, ಗಂಧ,

---

40 ತತ್ವಗಳು

40 ಹಿಂದಿನ ಪುಟದಿಂದ

4 ಕರಣ—Intellectual faculties.
1 ಮನಸ-Mind 3 ಚಿತ್ತ-Sub Conscious mind
2 ಬುದ್ಧಿ-Intellect 4 ಅಹಂಕಾರ-Ego.

3 ತ್ರಿಗುಣ—ಸತ್ವ-Purity ರಜಸ್-Activity ತಮಸ್-Inertia

3 ಮಲ—ಅನವಮ್-(Pride) ಮಾಯಾ-(Illusion) ಕಾಮ್ಯ-
(Selfish Desire)

8 ರಾಗ—ಕಾಮ, ಕ್ರೋಧ-ಲೋಭ-ಮೋಹ-ಮದ-ಮಾತ್ಸರ್ಯ-ಇಂದು
ಬೈ (Fear) ವೇಗಂ-Haste.

10 ನಾಡಿ—ಈಡಾ-ಪಿಂಗಲ, ಸುಷುಮ್ನ, ಶಂಖಿನಿ, ಪೂಷಾ, ಗಾಂಧಾರಿ,
ಅಗ್ನಿ, ಅಲಂಬುಷ, ಸಿಂಗುವಾ, ಗುಣ.

6 ಆಧಾರ—ಮೂಲಾಧಾರ, ಸ್ವಾದಿಷ್ಠಾನ, ಮನಿಪೂರ, ಅನಹತಾ.
ವಿಶುದ್ಧ, ಅಗ್ನಿ.

3 ಮಂಡಲ—ಅಗ್ನಿ. ಆದಿತ್ಯ, ಚಂದ್ರ.

3 ದೋಷ—ವಾತ-ಪಿತ್ಥ. ಶ್ಲೇಷ್ಮ

3 ಐಷಣ—ಅರ್ಥ, ಪುತ್ರ - ಲೋಕ (Wife)

10 ವಾಯು—ಪ್ರಾಣ, ಅಪಾನಾ, ವ್ಯಾನ, ಉದಾನಾ, ಸಮಾನಾ,
ನಾಗಾ, ಕೂರ್ಮ, ಕ್ರಿಕರಾ, ದೇವದತ್ತ, ಧನಂಜಯ.

2 ವಿನಯ—ನಲವಿನಯ ತೀ ವಿನಯ
Good-deeds Bad deeds

1 ಜ್ಞಾನ.

---

96 ತತ್ವಗಳು

ಸ್ಥೂಲ ಶರೀರ—ತ್ವಕ್, ಮಾಂಸ, ಕೊಬ್ಬು, ಎಲುಬು, ರಕ್ತ-ನಾಳ-ಮಲ-ಮೂತ್ರಗಳಿಂದ ಕೂಡಿದ ನಿಂದ್ಯ ಶರೀರ.

ಸೂಕ್ಷ್ಮ ಶರೀರ—ಇದು ಲಿಂಗ ಶರೀರ, ಆತ್ಮನನ್ನು ತಿಳಿಸುವ ಸಾಧನ. ಅಪಂಚೀಕೃತ ಭೂತಗಳಲ್ಲೊಂದು.

ಕಾರಣ ಶರೀರ—ತ್ರಿಗುಣಾತ್ಮಕವಾಗಿ ಅವ್ಯಕ್ತವಾಗಿದೆ. ಸಕಲೇಂದ್ರಿಯ ಮತ್ತು ಬುದ್ಧಿಯ ವೃತ್ತಿಗಳು ಲಯವಾಗುವುದಿಲ್ಲಿ. ಸುಷುಪ್ತಿಯೇ ಇದರ ಅವಸ್ಥೆ.

ಪಂಚ ಪ್ರಾಣಗಳು

1 ಪ್ರಾಣ-ಚಕ್ರವರ್ತಿಯಂತೆ ಹೃದಯವನ್ನು ಕೇಂದ್ರವಾಗಿಟ್ಟುಕೊಂಡು ಮಿಕ್ಕ 4 ಪ್ರಾಣಗಳಿಂದಲೂ ಅವುಗಳ ಕರ್ತವ್ಯವನ್ನು ನಿರ್ವಹಿಸುತ್ತ ಶಿರ, ಕಣ್ಣು, ಮೂಗಿನ ಹೊಳ್ಳೆಗಳು ಮತ್ತು ಬಾಯಿ ಇವುಗಳ ಮೂಲಕ ಸಂಚರಿಸುತ್ತದೆ.

2 ಅಪಾನ-ಗುದಸ್ಥಾನದಲ್ಲಿರುತ್ತ ಮಲ - ಮೂತ್ರ ವಿಸರ್ಜನೆ ನೆರವೇರಿಸುತ್ತದೆ.

3 ಸಮಾನ-ನಾಭಿ ದೇಶದಲ್ಲಿದ್ದು ನಾವು ತಿನ್ನುವ ಆಹಾರವನ್ನು ಆಯಾ ನಾಳಗಳಿಗೆ ಸಮನಾಗಿ ಹಂಚುತ್ತದೆ

4 ವ್ಯಾನ-ಶಿರಸ್ಸು ಮೊದಲು ಪಾದದವರೆಗೆ ನಾಡಿಗಳನ್ನು ವ್ಯಾಪಿಸಿ ಚಲಿಸುತ್ತದೆ.

5 ಉದಾನ-ಕಂಠ ದೇಶದಲ್ಲಿ ನೆಲೆಸಿ ಮನುಷ್ಯನ ಪಾಪ-ಪುಣ್ಯಗಳಿಗೆ ತಕ್ಕಂತೆ ನರಕಾದಿ ಪಾಪ ಲೋಕಗಳಿಗೋ, ಅಥವ ಪಾಪ ಪುಣ್ಯಗಳೆರಡೂ ಸಮನಾಗಿದ್ದರೆ ಮನುಷ್ಯ ಲೋಕಕ್ಕೋ ಒಯ್ಯುತ್ತದೆ.

ಉಪ ಪ್ರಾಣಗಳು

1 ನಾಗ-ವಾಗಿಂದ್ರಿಯ ದ್ವಾರದಲ್ಲಿರುತ್ತ-ಮಾತನಾಡುವ ಶಕ್ತಿಯನ್ನು ಕೊಡುತ್ತದೆ.

2 ಕೂರ್ಮ-ಕಣ್ಣು - ರೆಪ್ಪೆಗಳಲ್ಲಿ ನೆಲೆಸಿ ನಿಮೇಷೋನ್ಮೇಷಗಳನ್ನು ಮಾಡುವುದು.

3 ಕೃಕರ-ಹಸಿವೆಯನ್ನುಂಟು ಮಾಡುವುದು.

4 ದೇವದತ್ತ-ಇವರ ಮೂಲಕವಾಗಿಯೇ ಆಕಳಿಕೆ - ಬಿಕ್ಕಳಿಕೆ ಹುಟ್ಟುತ್ತವೆ.

5 ಧನಂಜಯ-ದೇಹದಲ್ಲಿ ಬಿಸಿಯನ್ನು ಹರಡುತ್ತದೆ-ಅವಸಾನ ಕಾಲದಲ್ಲಿ ಮುಖ್ಯ ಪ್ರಾಣವು ಹೋದ ಮೇಲೆಯೂ ಈ ಧನಂಜಯ ವಾಯುವು ಸ್ವಲ್ಪಕಾಲ ದೇಹದಲ್ಲಿ ಇರುತ್ತದೆ. ಈ ಕಾರಣವೇ ಸತ್ತವನ ಶರೀರ ಸ್ವಲ್ಪ ಕಾಲ ಬಿಸಿಯಿರುತ್ತೆ.

ಮನುಷ್ಯ ದೇಹದಿಂದಲೇ ಮುಕ್ತಿಯು (ಅಂದರೆ ಪುನರ್ಜನ್ಮವಿಲ್ಲದಿರುವಿಕೆ) ಲಭಿಸಬೇಕಾಗಿದೆಯಾದ ಕಾರಣ, ಪಂಚಭೂತಗಳ ಸಾಕಷ್ಟು ವಿವರಣೆ ಅಗತ್ಯವಾಯಿತು.

---

35 ನೇ ಪುಟದಿಂದ ಮುಂದುವರಿದಿದೆ.

ನಿಯತಿ--ಪುಣ್ಯ-ಪಾಪ ರೂಪವಾದ ~~[illegible]~~ ಕರ್ಮಕ್ಕೆ ನಿಯತಿ ಎಂದು ಹೆಸರು. ಕರ್ಮದ ಫಲವು ಎಂದಿಗೂ ವಿಷಮವಾದುದಲ್ಲ.

ಯದೃಚ್ಛಾ—ಎಂದರೆ ಆಕಸ್ಮಿಕ ಘಟನೆ.

ಪಂಚ ಭೂತಗಳು--ಇವು ಕೂಡ ಜಗತ್ತಿನ ಸೃಷ್ಟಿಗೆ ಕಾರಣವಲ್ಲವೆಂದು ಹೇಳಲಾಗಿದೆ.

ಜಗತ್ತಿಗೆ ಕಾರಣರ್ಯಾರು? ಯಾರಲ್ಲ

ಮಯಾಧ್ಯಕ್ಷೇಣ ಪ್ರಕೃತಿಃ
ಸೂಯತೇ ಸ ಚರಾಚರಮ್,
ಹೇತುನಾನೇನ ಕೌಂತೇಯ
ಜಗದ್ವಿಪರಿವರ್ತತೇ (ಗೀತೆ)

ಓ ಅರ್ಜುನಾ! ಅಧ್ಯಕ್ಷನಾಗಿ (ಸಾಕ್ಷಿ ಮಾತ್ರನಾಗಿ)ರುವ ನನ್ನಿಂದ ಪ್ರಕೃತಿ, ಚರಾಚರಾ ಪ್ರಪಂಚವೆಲ್ಲ ಸೃಷ್ಟಿಯಾಯಿತು, ಈ ಕಾರಣದಿಂದಲೇ ಜಗತ್ತು ನಡೆಯುತ್ತದೆ.

ಕಾಲಃ ಸ್ವಭಾವೋ ನಿಯತಿರ್ಯದೃಚ್ಛಾ
ಭೂತಾನಿ ಯೋನಿಃ ಪುರುಷ ಇತಿ ಚಿಂತ್ಯಾ (ಶ್ವೇ)

ಕಾಲ-ಸ್ವಭಾವ ಮೊದಲಾದವು ಯಾವುವೂ ಜಗತ್ತಿಗೆ ಕಾರಣವಲ್ಲ.

ಕಾಲ—ಸರ್ವ ಭೂತಗಳ ಪರಿಣಾಮಕ್ಕೆ ಯಾವುದು ಕಾರಣವೋ ಅದಕ್ಕೆ ಕಾಲವೆಂದು ಹೆಸರು.

ಸ್ವಭಾವ—ಪದಾರ್ಥಗಳ ನಿಯತ ಶಕ್ತಿಗೆ ಸ್ವಭಾವವೆಂದು ಹೆಸರು.

ಉದಾಹರಣೆಗೆ:—ಅಗ್ನಿಯ ಸ್ವಭಾವ ಉಷ್ಣ. ಯಾವ ಶಕ್ತಿಯಿಂದ ಜಗತ್ತಿನ ಸೃಷ್ಟಿಯಾಗುವುದೋ ಅದಕ್ಕೆ ಮಾಯೆ ಎಂದು ಹೆಸರು. ಇದು ಜಗತ್ತಿನ ಸೃಷ್ಟಿಗೆ ಕಾರಣವಾಗಿರುವುದರಿಂದ ಇದನ್ನು ಈಶ್ವರನ ಶಕ್ತಿ ಎಂದೂ ಪ್ರಕೃತಿ ಎಂದೂ ಕರೆಯುತ್ತಾರೆ. ಪ್ರಕೃತಿಯು ಬ್ರಹ್ಮನ ಅಧೀನ

ಮಾಯಾಂತು ಪ್ರಕೃತಿಂ ವಿದ್ಯಾನ್ಮಾಯಿನಂ ತು ಮಹೇಶ್ವರಂ।

ಮಾಯೆಯನ್ನು ಪ್ರಕೃತಿಯೆಂದೂ, ಮಹೇಶ್ವರನನ್ನು ಮಾಯಾವಿಯೆಂದೂ-ತಿಳಿಯಬೇಕೆಂದು ಇದೇ ಉಪನಿಷತ್ತಿನ ಇನ್ನೊಂದು ಕಡೆ ಶ್ವೇತಾಶ್ವತರೋಪನಿಶತ್ತಿನಲ್ಲಿ ಹೇಳಿದೆ.

ತ್ರಯಂ ಯದಾ ವಿಂದತೇ ಬ್ರಹ್ಮ ಮೇತತ್

ಅಂದರೆ ಭೋಕ್ತೃ, ಭೋಗ, ಭೋಗ್ಯ ಅಥವಾ ಜೀವ-ಈಶ್ವರ-ಪ್ರಕೃತಿ- ಈ ಮೂರನ್ನೂ ಯಾವಾಗ ಬ್ರಹ್ಮ ರೂಪವೆಂದು ಸಾಕ್ಷಾತ್ಕರಿಸುತ್ತಾನೆಯೋ ಆವನು ಕೃತ ಕೃತ್ಯನಾಗುವನು. ಏಕೆಂದರೆ ಇವು ಬ್ರಹ್ಮದಲ್ಲಿ ಕಲ್ಪಿತವಾಗಿ ಅಧಿಷ್ಠಾನಕ್ಕಿಂತ ಬೇರೆಯಲ್ಲ. ಶ್ರೀ ಶಂಕರ ಸೂತ್ರದಲ್ಲಿ ಮಾಯಾ-ಶಕ್ತಿ-ಪ್ರಕೃತಿಗಳನ್ನು ಪರಮಾತ್ಮನೆಂದಾಗಲಿ, ಅವನಿಗಿಂತ ಬೇರೆ ಎಂದಾಗಲಿ ನಿರ್ಣಯಮಾಡಿ ಹೇಳಲು ಸಾಧ್ಯವಿಲ್ಲವಾದ ಕಾರಣ ಅನಿರ್ವಚನೀಯ ಎಂದು ಕರೆಯಲಾಗಿದೆ.

ಈ ಪ್ರಕೃತಿಯೇ ಅಜಾ, ಮಾಯಾ, ಪರಾಕೃತಿ ಮೊದಲಾದ ಹೆಸರುಗಳಿಂದ ಶೃತಿಸ್ಮೃತಿಗಳಲ್ಲಿ ಪ್ರಸಿದ್ಧವಾಗಿದೆ. ಇದೇ ವಿಶ್ವಜನನಿಯಾದ ದೇವಾತ್ಮಶಕ್ತಿ. ಇದರ ದೆಸೆಯಿಂದಲೇ ಪರಮೇಶ್ವರನಿಗೆ ಮಾಯಿತ್ವ ಪ್ರಸಿದ್ಧಿಸುತ್ತದೆ ಆದರೆ ಇದು ಅನಿರ್ವಾಚ್ಯವಾದುದರಿಂದ ಪರಮಾತ್ಮನ ಅದ್ವೈತಕ್ಕಾಗಲಿ ವ್ಯಾವಹಾರಿಕ ದ್ವೈತಕ್ಕಾಗಲಿ ಯಾವ ಹಾನಿಯೂ ಉಂಟಾಗುವುದಿಲ್ಲ.

—ಅ ವಿ ದ್ಯೆ—

ಅವಿದ್ಯೆ ಎಂದರೆ ತಪ್ಪು ತಿಳುವಳಿಕೆ, ಸಂಶಯರೂಪವಾದದ್ದು, ಅಗ್ರಹಣರೂಪವಾದದ್ದು. ತಿಳುವಳಿಕೆ ಇಲ್ಲದ್ದು. ಈ ಮಿಥ್ಯಾಜ್ಞಾನರೂಪವಾದ ಅವಿದ್ಯೆಯು ಅನಾದಿ ಮತ್ತು ಅನಂತ ಎಂದು ಹೇಳಲಾಗಿದೆ. ಇದು ಜ್ಞಾನಾಭಾವದಿಂದ ಸಂಭವಿಸಿದ್ದು. ವಿಪರೀತ - ಜ್ಞಾನ - ಯಾ-ಮಿಥ್ಯಾ ಬುದ್ಧಿ-ಇದು ಕಲ್ಪಿತವಾದದ್ದೂ ಸಹ.

ಅವಿದ್ಯೆಯೂ ಮಾಯೆಯೂ ಒಂದೇ ಅಲ್ಲ. ಅಧ್ಯಾಸವೂ ತಪ್ಪು ತಿಳುವಳಿಕೆಯೇ.

(ಶ್ರೀ ಶಂಕರರ ಗೀತೆ ಮತ್ತು ಬೃಹದಾರಣ್ಯಕ ಭಾಷ್ಯಗಳಿಂದ)

ಚ ತು ರ್ಯೋ ಗ ಗ ಳು

ಜೀವಾತ್ಮನನ್ನು ಪರಮಾತ್ಮನೊಂದಿಗೆ ಸೇರಿಸುವ ಅನೇಕ ಸಾಧನಾ ಮಾರ್ಗಗಳ ವೈವಿಧ್ಯತೆಯನ್ನು ಗಮನಿಸಿ ಹಿಂದೂ ಧರ್ಮ ಗ್ರಂಥಗಳು, ಸಾಧಕರ ರುಚಿಯನ್ನು ಗಮನಿಸಿ ಚತುರ್ಯೋಗಗಳನ್ನು ಮಾಡಿವೆ.

ಮುಖ್ಯವಾಗಿ ಚತುರ್ವೇದಗಳು ನಾಲ್ಕು.

1) ಕರ್ಮಯೋಗ 2) ಭಕ್ತಿಯೋಗ 3) ರಾಜಯೋಗ 4) ಜ್ಞಾನಯೋಗ.

1 ವಿರಾಮವಿಲ್ಲದೆ ಸದಾ ಯಾವುದಾದರೊಂದು ಕಾರ್ಯದಲ್ಲಿ ನಿರತರಾದವರಿಗಾಗಿ ಕರ್ಮಯೋಗ.

2 ಸದಾ ಭಾವನಾ ಲಹರಿಗಳಲ್ಲಿ ಮುಳುಗಿ ತೇಲುತ್ತ ರವಿ ಕಾಣದ್ದನ್ನು ಕಾಣ ಬಯಸುವ ಕವಿ ಹೃದಯರು ಭಕ್ತಿಯೋಗಾಧಿಕಾರಿಗಳು.

3 ಮೂಗು ಹಿಡಿದು ಮನವನ್ನು ನಿಗ್ರಹಿಸಬೇಕೆನ್ನುವವರಿಗೆ ರಾಜಯೋಗ.

4 'ರಂಗವಲ್ಲಿಯು ಕೆಳಗೂ ತೂರಬಲ್ಲ' ಸೂಕ್ಷ್ಮ ಬುದ್ಧಿಯುವರಿಗಾಗಿ ಜ್ಞಾನಯೋಗ.

ಎಲ್ಲರಲ್ಲೂ ಕ್ರಿಯಾ ಪಟುತ್ವ, ರಸ ಭಾವ, ಏಕಾಗ್ರತೆ ಮತ್ತು ಬುದ್ಧಿ ಶಕ್ತಿ ಈ ನಾಲ್ಕು ಗುಣಗಳು ಹೆಚ್ಚು ಕಡಿಮೆ ಇರುತ್ತವೆ.

ಪಾಲಿಗೆ ಬಂದ ಕರ್ತವ್ಯಗಳನ್ನು ಫಲಾಪೇಕ್ಷೆ ಇಲ್ಲದೆ ನೆರವೇರಿಸುವುದು ಕರ್ಮಯೋಗದ ತಿರುಳು.

ಭಕ್ತಿ, ಜ್ಞಾನ, ವೈರಾಗ್ಯಗಳು ಮುಕ್ತಿಗೆ ಸೋಪಾನಗಳೆಂದು ಪರಿಗಣಿಸಲ್ಪಟ್ಟಿವೆ. ಭಕ್ತಿಯೋಗದಲ್ಲಿ ನವವಿಧ ಭಕ್ತಿಗಳಾದ ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ, ಆತ್ಮ ನಿವೇದನಗಳ ಮುಖ್ಯತೆಯನ್ನು ಕುರಿತು ಸಮರ್ಥ ರಾಮದಾಸ ಮಹಾರಾಜರು ಬಹಳ ಆಕರ್ಷಕವಾಗಿ, ಸುಂದರವಾಗಿ ವರ್ಣಿಸಿರುವರು.

ಭಗವಂತನನ್ನು ಸಂಪೂರ್ಣವಾಗಿ ಪ್ರೀತಿಸಿ ನಿಕಟ ಸಂಬಂಧವನ್ನು ಅವನೊಡನಿಟ್ಟು, ಸಂಪೂರ್ಣ ಸಮರ್ಪಣಾ ಭಾವದಿಂದ ಭಜಿಸುತ್ತಿರುವುದು ಭಕ್ತಿಯೋಗದ ಸಾರ.

ರಾಜಯೋಗವು ಮನೋನಿಗ್ರಹದ ಮಾರ್ಗ. ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ ಮತ್ತು ಸಮಾಧಿ. ಇವೇ ರಾಜಯೋಗಕ್ಕೆ ಬೇಕಾದ ಅಷ್ಟಾಂಗ ನಿಯಮಗಳು.

ಎಲ್ಲ ನೈತಿಕ ನಿಯಮಗಳ ಸಾರ ಸರ್ವಸ್ವವನ್ನು ವೇದ ಧರ್ಮವು ಕೇವಲ ಎರಡು ಸಣ್ಣ ಪದಗಳಾದ ಯಮ – ನಿಯಮಗಳಿಂದ ನಿರ್ವಚನ ಮಾಡಿದೆ.

ಯಮದ ಅಂಗಗಳು:—ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹ.

ಕಾಯಾ, ವಾಚ, ಮನದಿಂದ ಯಾರಿಗಾಗಲಿ ತೊಂದರೆ ಮಾಡದಿರುವುದು ಅಹಿಂಸೆ.

ಸರ್ವ ಪ್ರಾಣಿಗಳ ಹಿತಾರ್ಥಕ್ಕಾಗಿ, ಮನ, ಮಾತು, ಕೃತಿಗಳಲ್ಲಿ ಒಂದೇ(ಐಕ್ಯತೆ) ಇರುವುದು ಸತ್ಯ.

ಪರರ ವಸ್ತುವಿಗೆ ಆಶೆ ಮಾಡದಿರುವುದು, ಕದಿಯದಿರುವುದು ಅಸ್ತೇಯ.

ಲೈಂಗಿಕ ಪ್ರವೃತ್ತಿಯನ್ನು ಪೂರ್ಣವಾಗಿ ಸ್ವಾಧೀನದಲ್ಲಿರಿಸುವುದು ಬ್ರಹ್ಮಚರ್ಯ.

ಅವಶ್ಯಕತೆಗಿಂತ ಹೆಚ್ಚಾಗಿ ವಸ್ತುಗಳನ್ನು ಸ್ವೀಕರಿಸದಿರುವುದು, ಸಂಗ್ರಹಿಸದಿರುವುದು ಅಪರಿಗ್ರಹ.

ನಿಯಮದ ಅಂಗಗಳು — ಶೌಚ, ಸಂತೋಷ, ತಪಸ್ಸು, ಸ್ವಾಧ್ಯಾಯ ಮತ್ತು ಈಶ್ವರ ಪ್ರಣಿಧಾನ.

ದೇಹ ಪರಿಶುದ್ಧಿಯೇ ಶೌಚ

ತೃಪ್ತಿ, ಆಶಾರಾಹಿತ್ಯ, ಪ್ರಸನ್ನಮುಖತ್ವ-ಇವು ಸಂತೋಷ.

ಗುರು-ಹಿರಿಯರ ಸೇವೆ, ದೇವತಾ ಪೂಜೆ, ಮಾತಿನ ನಿಯಂತ್ರಣ ಇವು ತಪಸ್ಸು.

ಶಾಸ್ತ್ರಾಧ್ಯಯನ ಮತ್ತು ಮಂತ್ರ-ಜಪ-ಇವು ಸ್ವಾಧ್ಯಾಯ.

ಸರ್ವ ಕರ್ಮಗಳು, ಫಲಗಳು ಕೊನೆಗೆ ತನ್ನನ್ನು ಭಗವಂತನಲ್ಲಿ ಅರ್ಪಿಸಿಕೊಳ್ಳುವುದು ಈಶ್ವರ ಪ್ರಣಿಧಾನ.

ಸ್ಥಿರವಾಗಿ ಧ್ಯಾನಕ್ಕಾಗಿ ಕುಳಿತುಕೊಳ್ಳುವ ಕ್ರಮವೇ ಆಸನ.

ಉಸಿರನ್ನು ನಿಯಂತ್ರಿಸಿ, ತನ್ಮೂಲಕ ಪ್ರಾಣಶಕ್ತಿ ಮತ್ತು ಮನಸ್ಸನ್ನು ನಿಗ್ರಹಿಸುವ ಉಪಾಯವೇ ಪ್ರಾಣಾಯಾಮ.

ಹೊರ ಮುಖವಾಗಿ **ಓಡುತ್ತಿರುವ** ಇಂದ್ರಿಯಗಳನ್ನು ತಡೆದು ನಿಲ್ಲಿಸುವುದೇ **ಪ್ರತ್ಯಾಹಾರ.**

ಧ್ಯೇಯ ವಸ್ತುವಿನಲ್ಲಿ ಮನಸ್ಸನ್ನು ಬಂಧಿಸುವುದೇ **ಧಾರಣ.**

ತೈಲಧಾರೆಯಂತೆ ಮನಸ್ಸು ಧ್ಯೇಯ ವಸ್ತುವಿನೆಡೆಗೆ ಹರಿಯುವುದು **ಧ್ಯಾನ.**

ತನ್ನನ್ನು ಮರೆತು ಧ್ಯೇಯ ವಸ್ತುವಿನಲ್ಲಿ ಪೂರ್ಣವಾಗಿ ಮಗ್ನವಾಗುವುದು **ಸಮಾಧಿ.**

ಜೀವಿ ಹಿಡಿದು ಬಂದಿರುವುದು ಬ್ರಹ್ಮನಿಂದ. ಹೋಗುವುದು ಬ್ರಹ್ಮನಲ್ಲಿಗೆ. ಇರುವಾಗಲೂ ಅವನು ಬ್ರಹ್ಮದಲ್ಲಿಯೇ ಇದ್ದರೂ, ನಾಮರೂಪಗಳ ಗೋಜಿನಲ್ಲಿ ಸಿಕ್ಕಿರುವ ಕಾರಣ, ತನ್ನ ನೈಜ ಸ್ವರೂಪವನ್ನು ಮರೆತಿರುವನು. ಪರಿಪೂರ್ಣತೆ, ಜ್ಞಾನ, ಇವೆಲ್ಲ ಜೀವಿಯಲ್ಲಿ ಸುಪ್ತಾವಸ್ಥೆಯಲ್ಲಿವೆ. ಸುಪ್ತಾವಸ್ಥೆಯಲ್ಲಿರುವುದನ್ನು, ವ್ಯಕ್ತಾವಸ್ಥೆಗೆ ತರುವುದೇ ಜ್ಞಾನಯೋಗದ ಮಹತ್ಸಾಧನೆ

ಸತ್ಯವಾವುದು, ಮಿಥ್ಯೆಯಾವುದು ಎಂಬುದನ್ನು ಕುರಿತು ಸತತವಾಗಿ ವಿಚಾರ ಮಾಡಿ. ಮಿಥ್ಯೆಯಾದ, ಕೇವಲ ತೋರಿಕೆಯಾದ ಈ ಜಗತ್ತನ್ನು ನಿರ್ದಾಕ್ಷಿಣ್ಯವಾಗಿ ತ್ಯಜಿಸಿ, ನಿತ್ಯ, ಅಮೃತ, ಆತ್ಮನೇ ನಾನು ಎಂಬುದನ್ನು ನಿರ್ಧರಿಸಿ ಅದನ್ನೇ ಮನನ ಮಾಡಿ, ಅವನನ್ನೇ ಧ್ಯಾನಿಸಿ. ಅದರೊಡನೆ ಒಂದಾಗಿ! ಇದು ಜ್ಞಾನಯೋಗ.

ಯೋಗಾನುಷ್ಠಾನದಲ್ಲಿ ನಾಲ್ಕು ಅಡಚಣೆಗಳು.

ಯೋಗ ಶಾಸ್ತ್ರದ ಗ್ರಂಥಗಳಿಗೆ ಅನುಸಾರವಾಗಿ ಯೋಗದಲ್ಲಿ ನಾಲ್ಕು ಭಾಗಗಳಿವೆ.

1 ಮಂತ್ರಯೋಗ 2 ಲಯಯೋಗ ಅಥವ ಕುಂಡಲಿನೀ ಶಕ್ತಿಯೋಗ 3 ಹಠಯೋಗ 4 ರಾಜಯೋಗ.

ಮೂಲಾಧಾರ ಚಕ್ರದಲ್ಲಿ ಸುಪ್ತವಾಗಿರುವ ಕುಂಡಲಿನೀ ಶಕ್ತಿಯನ್ನು ಎಚ್ಚರಗೊಳಿಸಿ ಸಹಸ್ರಾರ ಚಕ್ರಕ್ಕೆ, ಸುಷುಮ್ನಾ ನಾಡಿಯಲ್ಲಿ ಮೇಲೇರಿಸುವ ಸಾಧನೆಯನ್ನೇ ಪ್ರಧಾನವಾಗಿ ಬಹಳ ಮಟ್ಟಿಗೆ ಈ ಎಲ್ಲಾ ಯೋಗಗಳಲ್ಲಿ ಯೂ ಹೇಳಿದೆ.

ಯೋಗಾನುಷ್ಠಾನದಲ್ಲಿ 4 ಅಡಚಣೆಗಳುಂಟು 1 ಲಯ 2 ವಿಕ್ಷೇಪ 3 ಕಷಾಯ 4 ರಸಾಸ್ವಾದ. ಈ ನಾಲ್ಕು ಅಡಚಣೆಗಳಿಂದ ಮನಸ್ಸು ಆತ್ಮನಲ್ಲಿ ನಿಲ್ಲುವುದಿಲ್ಲ.

ಲಯ – ಮನಸ್ಸು ನಿದ್ರೆಯಲ್ಲಿ ಲೀನವಾಗುವುದೇ ಲಯವೆನಿಸುತ್ತೆ.

ವಿಕ್ಷೇಪ—ಮನಸ್ಸು ವಿಷಯಗಳ ಕಡೆ ಪ್ರಾವೀಣ್ಯತೆ ಹೊಂದು ವುದೇ ವಿಕ್ಷೇಪವೆಂದೆನಿಸುತ್ತೆ

ಕಷಾಯ– ಲಯದಿಂದ ಮನಸ್ಸನ್ನೆಚ್ಚರಿಸಿ ವಿಷಯಗಳಿಂದ ಹಿಂದಿರುಗಿಸಿ ಇನ್ನು ಸಾಮ್ಯ ಹೊಂದದಿದ್ದರೆ ಆ ನಡುವಣ ಅವಸ್ಥೆ ಕಷಾಯ ದಿಂದ ಕೂಡಿರುತ್ತದೆ. ಅಂದರೆ ಕಾಮ ಭೋಗದ ಬಯಕೆ ಬೀಜಾವಸ್ಥೆಯಲ್ಲಿ ಇರುವುದು.

ರಸಾಸ್ವಾದ– ಸಮಾಧಿಯಿಂದುಂಟಾಗುವ ಸುಖದಲ್ಲಿ ಯೋಗಿಯ ಮನಸ್ಸು ಆಸಕ್ತವಾಗುವುದು, ರಸಾಸ್ವಾದವೆನಿಸುವುದು.

ಷ ಡ್ದ ರ್ಶ ನ ಗ ಳು.

ದರ್ಶನವೆಂದರೆ ಸತ್ಯದ ಸಾಕ್ಷಾತ್ಕಾರ. ಸಾಧನೆಯ ಮೂಲಕ ಮನಸ್ಸನ್ನು ಶುದ್ಧಿಗೊಳಿಸಿ, ಏಕಾಗ್ರವಾಗಿಸಿ, ತನ್ಮೂಲಕ ಸತ್ಯವನ್ನು ಕಂಡು, ಅನಂತರ ಅವನ್ನು ವಿವರಿಸಿರುವ ಗ್ರಂಥಗಳಾದುದರಿಂದಲೇ ಇವು ದರ್ಶನ ಗಳೆನಿಸಿವೆ.

ಹಿಂದೂ ಧರ್ಮದಲ್ಲಿ ಸತ್ಯದ ಅನುಭೂತಿಯೇ ಪ್ರಧಾನ. ಪ್ರಾಚೀನ ಋಷಿಗಳು ಹುಚ್ಚು ಹೊಳೆಯಂತೆ ಹರಿಯುತ್ತಿದ್ದ ಮನಸ್ಸನ್ನು ತಡೆದು ನಿಲ್ಲಿಸಿ, ಅಂತರ್ಮುಖವಾಗಿ ಮಾಡಿ, ಧ್ಯಾನದಿಂದಲೂ ಆಧ್ಯಾತ್ಮ ಯೋಗ ದಿಂದಲೂ ಈ ಸಮಸ್ಯೆಗಳಿಗೆಲ್ಲ ತಮ್ಮದೇ ಆದ ಪರಿಹಾರಗಳನ್ನು ಕಂಡು ಕೊಂಡರು. ತತ್ಫಲವಾಗಿ ದರ್ಶನಗಳ ಜನ್ಮವಾಯಿತು.

ಷಡ್ದರ್ಶನಗಳು:—

1 ನ್ಯಾಯ 2 ವೈಶೇಷಿಕ 3 ಸಾಂಖ್ಯ 4 ಯೋಗ (ಈ ನಾಲ್ಕು ದರ್ಶನಗಳು ದ್ವಿಭಾಗಯುಕ್ತವಾಗಿವೆ.) 5 ಮೀಮಾಂಸ 6 ಬ್ರಹ್ಮಸೂತ್ರಗಳು (ವೇದಾಂತ) ನಾವು ಈ ದರ್ಶನಗಳ ಕರ್ತೃ ಗಳಲ್ಲವೆಂದು ಹೇಳಿ, ದರ್ಶನಗಳಿಗೆ ಸೂತ್ರಗಳನ್ನು ಬರೆದವರಿವರು.

1 ಗೌತಮನ: ನ್ಯಾಯ ಸೂತ್ರಗಳು 2 ಕಾಂಡನ: ವೈಶೇಷಿಕ ಸೂತ್ರಗಳು 3 ಕಪಿಲನ; ಸಾಂಖ್ಯ ಸೂತ್ರಗಳು 3 ಪತಂಜಲಿಯ; ಯೋಗ ಸೂತ್ರಗಳು 5 ಜೈಮಿನಿಯ: ಮೀಮಾಂಸ ಸೂ ತ್ರ ಗ ಳು 6 ಬಾದರಾಯಣನ; ಬ್ರಹ್ಮ ಸೂತ್ರಗಳು.

ಜಗತ್ಸೃಷ್ಟಿಯು ಅಣುಗಳಿಂದಾಗಿದೆ ಎಂಬ ವಾದವನ್ನು ನ್ಯಾಯ-ವೈಶೇಷಿಕ ದರ್ಶನಗಳು ಘೋಷಿಸುತ್ತವೆ. ಜಡ, ಪ್ರಕೃತಿ, ಚೇತನ, ಪುರುಷರು

ವೇ ಸೃಷ್ಟಿಯ ಮೂಲ ವಸ್ತುಗಳೆಂಬುದು ಸಾಂಖ್ಯರ ವಾದ. ಯೋಗವು ಮುಖ್ಯವಾಗಿ ಚಿತ್ತೈಕಾಗ್ರತೆಯ ಕ್ರಮವನ್ನು ವಿವರಿಸುತ್ತದೆ. ವೈದಿಕ ಯಜ್ಞ-ಯಾಗಾದಿಗಳ ಪ್ರಾಧಾನ್ಯವನ್ನು ಮೀಮಾಂಸೆಯು ಉಪದೇಶಿಸುತ್ತದೆ.

ವಿವಿಧ ಉಪನಿಷತ್ತುಗಳಲ್ಲಿ ಬರುವ ತಾತ್ವಿಕ ಭಾವನಾ ಲಹರಿಗಳು ಏಕಮುಖವಾಗಿ ಹರಿಯುತ್ತಿವೆ. ಏಕ ರೀತಿಯ ತತ್ವವನ್ನೇ ಪ್ರತಿಪಾದಿಸುತ್ತವೆ ಎಂಬುದನ್ನು ಬಾದರಾಯಣನು ತನ್ನ ವೇದಾಂತ ಸೂತ್ರಗಳಲ್ಲಿ ಯಶಸ್ವಿಯಾಗಿ ಸಾಧಿಸಿರುವನು. ವೇದಗಳ ಅಂತದಲ್ಲಿ ಚರ್ಚಿಸಲ್ಪಟ್ಟಿರುವುದಾದರೂ, ಅದು ದರ್ಶನ ಶಾಸ್ತ್ರಗಳ ಉತ್ತುಂಗ ಶಿಖರವೇ ಆಗಿದೆ.

—ಬ್ರಹ್ಮ ವಿಚಾರ—

ನಾನು ಯಾರು? ನಾನು ಜೀವನೆ?

—ಜೀವಾತ್ಮ - ಪರಮಾತ್ಮ—

ಈ ಪಂಚ ಭೂತಾತ್ಮಕ ಶರೀರ ನಾನಲ್ಲ. ಇಂದ್ರಿಯಗಳಿಗೆ ಗೋಚರವಾಗುವ ಸ್ತ್ರೀ, ಪುತ್ರ - ಪುತ್ರಿ - ಮನೆ, ಮಾರು, ಧನ, ಧಾನ್ಯ, ಅಧಿಕಾರ, ಲೌಕಿಕ-ಸುಖಗಳಲ್ಲೇ, ನನ್ನದೆಂಬ ಭಾವನೆಯು ಪ್ರಾರಂಭವಾಗಿ ಕೊನೆಗೆ ನಿತ್ಯ ಸುಖದ ದಾರಿಗಾಗಿ ಹುಡುಕುವನು.

ನಿತ್ಯ ಸುಖ ನನ್ನಲ್ಲೇ ಇದೆ. ಅದನ್ನು ಕಂಡುಕೊಳ್ಳುವುದೇ ನನ್ನನ್ನು ಅರಿಯುವ ನಿತ್ಯ ಸುಖ ಪ್ರಾಪ್ತಗೊಳಿಸುವ ದಾರಿ.

ನಾನು ಜೀವನೆ? ದೇಹೇಂದ್ರಿಯ, ಮನ ಬುದ್ಧಿಗಳನ್ನು ಬಿಟ್ಟು ಜೀವನೆಂಬ ಮಾತಿಗೆ ಅರ್ಥವೇನು? ಮನಸ್ಸನ್ನು ಹೊರತಾಗಿ ಜೀವನನ್ನು ಕಾಣಲು ಸಾಧ್ಯವಿದೆಯೇ? ಗಾಢ ನಿದ್ರೆಯ ಅನುಭವವೇ ಇದಕ್ಕೆ ಸಾಕ್ಷಿ.

ಮನಸ್ಸಿಲ್ಲದಿದ್ದರೆ ಜೀವನೂ ಇಲ್ಲ, ಮನಸ್ಸು ನಾನಲ್ಲವಾದರೆ ಜೀವನೂ ನಾನಲ್ಲ. ದೇಹ, ಮನ, ಜೀವಗಳು ನಾನಲ್ಲ. ಜಗತ್ತೂ ನಾನಲ್ಲ, ನಾನಳಿದು, ನಾನುಳಿದು ನೋಡಬೇಕು.

Be still and know that I am God ಎಂಬ ಬೈಬಲ್ ಉಕ್ತಿಯಂತೆ ಸ್ತಬ್ಧನಾಗಿ ಧ್ಯಾನ ಮಗ್ನನಾದರೆ ನಾನೇ ದೇವರು-ಪ್ರತ್ಯಗಾತ್ಮನೆಂಬ ಅರಿವಾಗುವುದು-ಅವಿದ್ಯಾ-ಕಾಮ-ಕರ್ಮ ವಾಸನೆಗಳಿಗೆ ಆಶ್ರಯವಾಗಿರುವ ಲಿಂಗ ಶರೀರವನ್ನೇ ಉಪಾಧಿಯಾಗುಳ್ಳ ಜೀವಾತ್ಮನನ್ನು ಕೆಲವರು ನಾನೆಂದು ತಪ್ಪಾಗಿ ಭಾವಿಸುವರು.

ಸರ್ವಾಜೀವೇ ಸರ್ವಸಂಸ್ಥೇ ಬೃಹಂತೇ
ಅಸ್ಮಿನ್ ಹಂಸೋ ಭ್ರಾಮ್ಯತೇ ಬ್ರಹ್ಮ ಚಕ್ರೇ ।
ಪೃಥಗಾತ್ಮಾನಂ ಪ್ರೇರಿತಾರಂ ಚ ಮತ್ವಾ
ಜುಷ್ಟಸ್ತತಸ್ತೇ ನಾಮೃತತ್ವಮೇತಿ ॥ (ಶ್ವೇ. 1-6)

ಯಾವುದರಲ್ಲಿ ಸರ್ವ ಪ್ರಾಣಿಗಳೂ ಜೀವಿಸುತ್ತವೆಯೋ ಮತ್ತು ಲಯವಾಗುತ್ತವೆಯೋ ಆ ಬೃಹತ್ತಾದ ಬ್ರಹ್ಮಚಕ್ರದಲ್ಲಿ ಜೀವನು ತಾನು ಬೇರೆ ಈಶ್ವರನು ಬೇರೆ ಎಂದು ತಿಳಿದು ಸುತ್ತುತ್ತಿರುವನು. ಯಾವಾಗ ಅವನು ಈಶ್ವರನಿಂದ ಅನುಗ್ರಹಿಸಲ್ಪಡುವನೋ ಆಗ ಅಮೃತತ್ವವನ್ನು ಹೊಂದುವನು.

ಕಾರ್ಯ – ಕಾರಣಾತ್ಮಕವಾದ ಈ ಬ್ರಹ್ಮ ಚಕ್ರದಲ್ಲಿ ಯಾವ ಕಾರಣದಿಂದ ಜೀವನಿಗೆ ಸಂಸಾರವುಂಟಾಗಿದೆ- ಯಾವ ಸಾಧನದಿಂದ ಮೋಕ್ಷ ಉಂಟಾಗುತ್ತದೆ, ಎಂಬುದನ್ನೇ ಶೃತಿಯು ಹೇಳುವುದು. 'ನಾನು ಬೇರೆ, ಇವನು ಬೇರೆ' ಎಂಬ ಭೇದ-ದರ್ಶನವೇ ಸಂಸಾರಕ್ಕೆ ಕಾರಣ. 'ನಾನೇ ಬ್ರಹ್ಮನಾಗಿದ್ದೇನೆ' ಎಂಬರಿಯುವುದೇ ಮೋಕ್ಷಕ್ಕೆ ಕಾರಣ

ಋತಂ ಪಿಬಂತೌ ಸುಕೃತಸ್ಯ ಲೋಕೇ
ಗುಹಾಂ ಪ್ರವಿಷ್ಟೌ ಪರಮೇ ಪರಾರ್ಧೇ।
ಛಾಯಾತಪೌ ಬ್ರಹ್ಮವಿದೋ ವದಂತಿ
ಪಂಚಾಗ್ನಯೋ ಯೇ ಚ ತ್ರಿಣಾಚಿಕೇತಾಃ

(ಕಠೋಪನಿಷತ್ 3-1)

(ಈ) ಶರೀರದಲ್ಲಿನ ಪರಮವಾದ ಹೃದಯಾಕಾಶದಲ್ಲಿರುವ ಬುದ್ಧಿಯಲ್ಲಿ ಸುಕೃತದ ಕರ್ಮ ಫಲವನ್ನು ಪಾನ ಮಾಡುತ್ತಿರುವ ಇಬ್ಬರು ಪ್ರವೇಶಿಸಿರುತ್ತಾರೆ. ಇವರನ್ನು ನೆರಳು-ಬಿಸಿಲುಗಳೆಂದು ಬ್ರಹ್ಮಜ್ಞಾನಿಗಳೂ ಮೂರು ಸಲ ನಾಚಿಕೇತಾಗ್ನಿಯನ್ನು ಚಯನ ಮಾಡಿರುವ ಪಂಚಾಗ್ನಿಗಳೂ ಹೇಳುತ್ತಾರೆ.

ಪರಾರ್ಧ—ಹೃದಯಾಕಾಶದಲ್ಲಿ ಬ್ರಹ್ಮನು ಲಭ್ಯವಾಗುವುದರಿಂದ ಅದಕ್ಕೆ ಪರಾರ್ಧವೆನ್ನುತ್ತಾರೆ. ಅಥವ ಬ್ರಹ್ಮಸ್ಥಾನವೆಂದೂ ಹೇಳಬಹುದು. ಪಂಚಾಗ್ನಿಗಳು ಎಂದರೆ ಗೃಹಸ್ಥರೆಂದರ್ಥ.

ಜೀವಾತ್ಮ ಪರಮಾತ್ಮರಿಬ್ಬರೂ ಹೃದಯಾಕಾಶದಲ್ಲಿ ಹೊಕ್ಕಿರುತ್ತಾರೆ. ಜೀವಾತ್ಮನು ಕರ್ಮವನ್ನನುಭವಿಸುತ್ತಿರುವನು. ಪರಮಾತ್ಮನಿಗೆ ಈ ಅನುಭವವಿಲ್ಲ. ಆದರೂ ಅನುಭವಿಸುತ್ತಿರುವವನ ಸಂಬಂಧವು ಪರಮಾತ್ಮನಿಗೂ ಇರುವ ಕಾರಣ ಛತ್ರಿ ನ್ಯಾಯದಿಂದ ಇಬ್ಬರೂ ಅನುಭವಿಸುತ್ತಿರುವರೆಂದು ಹೇಳಿದೆ- ಜೀವಾತ್ಮನು ಸಂಸಾರಿ. ಪರಮಾತ್ಮನು ಅಸಂಸಾರಿ. ಆದುದರಿಂದ ಇವರಿಬ್ಬರು ನೆರಳು-ಬಿಸಿಲುಗಳಂತೆ ವಿಲಕ್ಷಣರಾದವರು ಎಂದರ್ಥ.

ಈ ಜೀವನು ಮರಣ ಕಾಲದಲ್ಲಿ ಯಾವ ಚಿತ್ತವುಳ್ಳವನಾಗಿರುವನೋ ಆ ಸಂಕಲ್ಪದಿಂದ ಇಂದ್ರಿಯಗಳೊಂದಿಗೆ ಮುಖ್ಯ ಪ್ರಾಣ ವೃತ್ತಿಯನ್ನು ಹೊಂದುತ್ತಾನೆ.

ಪ್ರಾಣನು ಉದಾರ ವೃತ್ತಿಯಿಂದ ಕೂಡಿ ಆತ್ಮನೊಂದಿಗೆ ಅವನ ಸಂಕಲ್ಪಕ್ಕೆ ಅನುಸಾರವಾದ ಅಂದರೆ ಪುಣ್ಯ ಪಾಪ ಕರ್ಮಗಳಿಗನುಸಾರವಾದ ಲೋಕಕ್ಕೆ ಒಯ್ಯುತ್ತಾನೆ.

ಎಲ್ಲ ಜೀವಾತ್ಮರೂ ಲಿಂಗಾತ್ಮನಾದ ಅವನಲ್ಲಿ ಕೂಡಿರುವುದರಿಂದ ಅವನಿಗೆ ಜೀವಘನನೆಂದು ಹೆಸರು.

ಅಂಗುಷ್ಠ ಮಾತ್ರೋ ರವಿತುಲ್ಯರೂಪಃ
ಸಂಕಲ್ಪಾಹಂಕಾರ ಸಮನ್ವಿತೋ ಯಃ
ಬುದ್ಧೇರ್ಗುಣೇನಾತ್ಮಗುಣೇನ ಚೈವ
ಆರಾಗ್ರಮಾತ್ರೋ ಹ್ಯಪರೋಽಪಿ ದೃಷ್ಟಃ ॥

(ಶ್ವೇ-5-8)

ಅಂಗುಷ್ಠದಷ್ಟು ಪರಿಣಾಮವುಳ್ಳ ರವಿಗೆ ಸಮಾನವಾದ ಕಾಂತಿಯುಳ್ಳ, ಸಂಕಲ್ಪಾಹಂಕಾರಗಳಿಂದಲೂ ಬುದ್ಧಿಯ ಮತ್ತು ಶರೀರದ ಗುಣಗಳಿಂದಲೂ ಕೂಡಿರುವ ಇನ್ನೊಬ್ಬನಾದ ಜೀವಾತ್ಮನು ಅಂಕುಶದ ಮೊನೆಯಂತೆ ಕಂಡು ಬರುತ್ತಾನೆ

ವಾಲಾಗ್ರ ಶತಭಾಗಸ್ಯ ಶತಧಾ ಕಲ್ಪಿತಸ್ಯ ಚ ।
ಭಾಗೋ ಜೀವಃ ಸ ವಿಜ್ಞೇಯಃ ಸ ಚಾನಂತ್ಯಾಯ ಕಲ್ಪತೇ॥

(ಶ್ವೇ-5-9)

ಕೂದಲೆಳೆಯ ತುದಿಯನ್ನು ನೂರಾಗಿ ಭಾಗಿಸಿ ಅದರ ಒಂದು ಭಾಗವನ್ನು ಪುನಃ ನೂರಾಗಿ ಭಾಗಿಸಿದರೆ ಎಷ್ಟು ಅಣು ಪರಿಣಾಮವುಂಟಾಗುವುದೋ ಅಷ್ಟು ಅಣು ಪರಿಣಾಮವುಳ್ಳವನು ಜೀವಾತ್ಮನು-ಎಂದು ತಿಳಿಯಬೇಕು. ಆದರೂ ಅವನು ಅನಂತನೇ !

(ಲಿಂಗ ಶರೀರವು ಅತಿ ಸೂಕ್ಷ್ಮವಾದುದರಿಂದ ಅದರ ಪರಿಣಾಮವನ್ನನುಸರಿಸಿ ಜೀವಾತ್ಮನಿಗೂ ಹೀಗೆ ಪರಿಣಾಮವನ್ನು ಕಲ್ಪಿಸಿದೆ ಉಪಾಧಿ ವಂಶದಿಂದ ಜೀವನು ಅಣುತ್ವವನ್ನು ಪಡೆದಿದ್ದರೂ ಸ್ವರೂಪತಃ ಅವನು ವಿಭುವು.) ಬ್ರಹ್ಮಸೂತ್ರ-2-3-29.

ಪರಾಕ್ ದೃಷ್ಟಿ-ಪ್ರತ್ಯಗ್ ದೃಷ್ಟಿ

ಕಠೋಪನಿಷತ್ತಿನ ನಾಲ್ಕನೆಯ ವಲ್ಲಿಯ ಪ್ರಥಮ ಶ್ಲೋಕದ ಪ್ರಕಾರ, ಪರಮೇಶ್ವರನು ಬಹಿರ್ಮುಖವಾದ ಇಂದ್ರಿಯಗಳನ್ನು ಹೊರಗೇ ಹೋಗುವಂತೆ ಮಾಡಿರುತ್ತಾನೆ. ಆದುದರಿಂದ ಮನುಷ್ಯ ಮಾತ್ರದವರು ಹೊರಗಡೆ ನೋಡುತ್ತಾರೆ. ಅಂತರಾತ್ಮನನ್ನು ನೋಡುವುದಿಲ್ಲ. (ಮನುಷ್ಯರಲ್ಲಿ ಬದ್ಧ, ಮುಮುಕ್ಷು, ಸಾಧಕ, ಸಿದ್ಧ ಎಂದು ನಾಲ್ಕು ಬಗೆಯವರುಂಟೆಂಬುದನ್ನು ಇಲ್ಲಿ ತಿಳಿಯಬೇಕಾಗಿದೆ.) ಪಕ್ವಕ್ಕೆ ಬಂದ ಸಾಧಕರು ಅಮೃತತ್ವವನ್ನು ಬಯಸುತ್ತ ಚಕ್ಷುಸ್ (ಇಂದ್ರಿಯಗಳನ್ನು) ಹಿಂದಿರುಗಿಸಿ ಪ್ರತ್ಯಗಾತ್ಮನನ್ನು ನೋಡುತ್ತಾರೆ.

ಹೀಗೆ ಹೊರಗೆ ಹರಿಯುವ ದೃಷ್ಟಿಗೆ ಪರಾಗ್ ದೃಷ್ಟಿ ಎಂದೂ, ಒಳಗೆ ತಿರುಗಿರುವ ದೃಷ್ಟಿಗೆ ಪ್ರತ್ಯಗ್ ದೃಷ್ಟಿ ಎಂದೂ ಕರೆದಿರುವರು. ಕೂಟಸ್ಥ ನಿತ್ಯನಾದ ಸಾಕ್ಷಿಯೇ ಪ್ರತ್ಯಗಾತ್ಮನಾಗಿರುವ ಕಾರಣ ಸಾಕ್ಷಿ ದೃಷ್ಟಿಯೇ ಪ್ರತ್ಯಗ್ ದೃಷ್ಟಿ ಇದನ್ನೇ ಅಧ್ಯಾತ್ಮ ದೃಷ್ಟಿಯೆಂದೂ ಯೋಗ ದೃಷ್ಟಿಯೆಂದೂ ಕರೆಯಬಹುದು. ಈ ದೃಷ್ಟಿಯುಳ್ಳ ಸಾಧಕರಿಗೆ ಶ್ರವಣ, ಮನನ, ನಿಧಿಧ್ಯಾಸಗಳಿಂದ ಪರಮಾತ್ಮನ ಸಂದರ್ಶನವಾಗುತ್ತದೆ.

ಸರ್ವಾತ್ಮ ಬ್ರಹ್ಮ ಸ್ವರೂಪ-ಲಕ್ಷಣ

ಸರ್ವಾತ್ಮ ಬ್ರಹ್ಮ ಸ್ವರೂಪವನ್ನು ಶ್ವೇತಾಶ್ವತರೋಪನಿಷತ್ತಿನಲ್ಲಿ ಚಕ್ರರೂಪದಲ್ಲಿ ಹೀಗೆ ವರ್ಣಿಸಲಾಗಿದೆ.

ತಮೇಕನೇಮಿಂ ತ್ರಿವೃತಂ ಷೋಡಶಾಂತಂ
ಶತಾರ್ಧಾರಂ ವಿಂಶತಿ ಪ್ರತ್ಯರಾಭಿಃ ।
ಅಷ್ಟಕೈಃ ಷಡ್ಭಿರ್ವಿಶ್ವರೂಪೈಕಪಾಶಂ
ತ್ರಿಮಾರ್ಗಭೇದಂ ದ್ವಿನಿಮಿತ್ತೈಕಮೋಹಮ್

॥1-4॥

ಒಂದೇ ನೇಮಿಯುಳ್ಳ ಮೂರು ಪಟ್ಟಿಗಳುಳ್ಳ, ಹದಿನಾರು ಅಂಶಗಳುಳ್ಳ, ಐವತ್ತು ಅರೆ ಕಾಲುಗಳುಳ್ಳ, ಇಪ್ಪತ್ತು ಪ್ರತಿ ಅರೆ ಕಾಲುಗಳುಳ್ಳ, ಆರು ಅಷ್ಟಕಗಳುಳ್ಳ, ವಿಶ್ವರೂಪವಾದ ಒಂದೇ ಪಾಶವುಳ್ಳ, ಮೂರು ಭಿನ್ನ ಮಾರ್ಗಗಳಲ್ಲಿ ಹೋಗುತ್ತಿರುವ, (ಪಾಪ-ಪುಣ್ಯಗಳೆಂಬ) ಎರಡಕ್ಕೆ ನಿಮಿತ್ತವಾಗಿರುವ – ಒಂದೇ ಮೋಹವುಳ್ಳ (ಚಕ್ರದಂತಿರುವ) ಆವನನ್ನು ಧ್ಯಾನಿಸುತ್ತೇವೆ.

ಏಕನೇಮಿ—ಸಮಸ್ತ ಕಾರಣಗಳನ್ನು ತಾನೊಂದೇ ನಿಯಮಿಸುವುದರಿಂದ ಬ್ರಹ್ಮವು ಏಕನೇಮಿ ಎನ್ನಿಸಿದೆ. ಇದೇ ಯೋನಿ, ಕಾರಣ, ಅವ್ಯಾಕೃತ-ಆಕಾಶ-ಪರಮ ವ್ಯೋಮ, ಮಾಯೆ, ಪ್ರಕೃತಿ, ಶಕ್ತಿ, ತಮಸ್ಸು, ಅವಿದ್ಯೆ, ಛಾಯೆ, ಅಜ್ಞಾನ – ಅನೃತ – ಅವ್ಯಕ್ತ – ಇವೇ ಮೊದಲಾದ ಶಬ್ದಗಳಿಂದ ಹೇಳಲ್ಪಟ್ಟ ಕಾರಣಾವಸ್ಥೆ. ಇದು ಕಾರ್ಯ ವರ್ಗಕ್ಕೆ ಆಧಾರವಾಗಿದೆ.

ತ್ರಿವೃತಂ—ಪ್ರಕೃತಿಯ ಗುಣಗಳಾದ ಸತ್ವ-ರಜಸ್ಸು-ತಮಸ್ಸು.
ಷೋಡಶಾಂತಂ—

5	ಪಂಚ ಭೂತಗಳು
5	ಜ್ಞಾನೇಂದ್ರಿಯ
5	ಕರ್ಮೇಂದ್ರಿಯ
1	ಮನಸ್ಸು
16	

ಅಥವಾ ಪ್ರಶ್ನೋಪನಿಷತ್ತಿನಲ್ಲಿ ಹೇಳಿರುವ 16 ಕಲೆಗಳು.

ಶತಾಧಾರಂ-50	5 ವಿಪರ್ಯಗಳು
5 ವಿಪರ್ಯಗಳು 28 ಅಶಕ್ತಿಗಳು 9 ತುಷ್ಟಿಗಳು 8 ಸಿದ್ಧಿಗಳು —— 50	ತಮಸ್ಸು - ಮೋಹ - ಮಹಾ ಮೋಹ- ತಾಮಿಸ್ರ, ಅಂಧತಾಮಿಸ್ರ (ಸಾಂಖ್ಯ ಸೂತ್ರ). ಅವಿದ್ಯೆ - ಅಸ್ಮಿತೇ, ರಾಗ - ದ್ವೇಷ- ಅಭಿನಿವೇಶ. (ಯೋಗಸೂತ್ರ)

28 ಅಶಕ್ತಿಗಳು—ಮೂಕತ್ವ - ಕಿವುಡು, ಕುರುಡು ಇವೇ ಮೊದಲಾದ 11 ಬಾಹ್ಯ ಅಶಕ್ತಿಗಳು ಇಂದ್ರಿಯಗಳದ್ದಾಗಿವೆ. 9 ಅಂತಃಕರಣದ ಅಶಕ್ತಿಗಳು. 8 ಅಶಕ್ತಿಗಳು ಸಿದ್ಧಿಗಳ ವಿಪರ್ಯಯವಾಗಿವೆ.

9 ತುಷ್ಟಿಗಳು—ಅಧ್ಯಾತ್ಮಿಕಗಳಾದ ಪ್ರಕೃತಿ, ಉಪಾದಾನ, ಕಾಲ, ಭಾಗ್ಯ:-ವಿಷಯಗಳಿಂದ ಹಿಂದಿರುಗುವುದರಿಂದ ಉಂಟಾಗುವ ಐದು ಹೊರಗಿನ ತುಷ್ಟಿಗಳು.

8 ಸಿದ್ಧಿಗಳು—ಊಹೆ, ಶಬ್ದ, ಅಧ್ಯಯನ ಮೂರು ದುಃಖ ವಿಘಾತಗಳು ಸುಹೃತ್‌ಪ್ರಾಪ್ತಿ, ದಾನ (ಸಾಂಖ್ಯ ಸೂತ್ರ). 10 ಇಂದ್ರಿಯಗಳು-ಮತ್ತು ಅವುಗಳ ವಿಷಯಗಳು. ಇವು ಹಿಂದೆ ಹೇಳಿದ ಅರೆ ಕಾಲುಗಳನ್ನು ಧೃಡ ಪಡಿಸುವ ಶಲಾಕೆಗಳಾಗಿವೆ.

ಆರು ಅಷ್ಟಕಗಳು;—

1 ಪ್ರಕೃತ್ಯಷ್ಟಕ—ಪಂಚ ಭೂತಗಳು-ಮನಸ್ಸು-ಬುದ್ಧಿ-ಅಹಂಕಾರ

2 ಧಾತ್ವಷ್ಟಕ—ತ್ವಕ್ಕು, ಚರ್ಮ, ಮಾಂಸ, ರಕ್ತ, ಮೇದಸ್ಸು, ಅಸ್ಥಿ, ಮಜ್ಜೆ-ಶುಕ್ರ.

3 ಐಶ್ವರ್ಯಾಷ್ಟಕ— ಅಣಿಮ - ಮಹಿಮ ಮೊದಲಾದುವು.

4 ಭಾವಾಷ್ಟಕ— ಧರ್ಮ, ಅಧರ್ಮ, ಜ್ಞಾನ - ಅಜ್ಞಾನ - ವೈರಾಗ್ಯ-ಅವೈರಾಗ್ಯ-ಐಶ್ವರ್ಯ-ಅನೈಶ್ವರ್ಯ

5 ದೇವಾಷ್ಟಕ— ಬ್ರಹ್ಮ, ಪ್ರಜಾಪತಿ ದೇವತೆಗಳು- ಗಂಧರ್ವರು-ಯಕ್ಷರು-ರಾಕ್ಷಸರು-ಪಿತೃಗಳು-ಪಿಶಾಚರುಗಳು.

6 ಗುಣಾಷ್ಟಕ—ದಯೆ- ಕ್ಷಮೆ, ಅನಸೂಯೆ, ಶೌಚ, ಅನಾಯಾಸ, ಮಂಗಲ, ಅಕಾರ್ಪಣ್ಯ, ಅಸ್ಪೃಹೆ.

ವಿಶ್ವರೂಪೈಕ ಪಾಶಂ:—ಕಾಮ ವಿಷಯಗಳು ಬಹು ರೂಪವಾಗಿರುವುದರಿಂದ ಕಾಮವನ್ನು ವಿಶ್ವರೂಪವೆಂದು ಕರೆದಿದೆ.

ತ್ರಿಮಾರ್ಗ:—ಧರ್ಮ, ಅಧರ್ಮ, ಜ್ಞಾನ.

ದ್ವಿನಿಮಿತ್ತೈಕ ಮೋಹಂ:—ದೇಹ, ಇಂದ್ರಿಯ, ಮನಸ್ಸು, ಬುದ್ಧಿ ಜಾತಿ-ಇವೇ ಮೊದಲಾದ ಅನಾತ್ಮ ವಸ್ತುಗಳಲ್ಲಿರುವ ಆತ್ಮಾಭಿಮಾನಕ್ಕೆ ಮೋಹವೆಂದು ಹೆಸರು-ಎರಡಕ್ಕೆ ನಿಮಿತ್ತವಾಗಿ ಒಂದೇ ಮೋಹವುಳ್ಳ ಚಕ್ರದಂತಿರುವ ಅವನನ್ನು ಧ್ಯಾನಿಸುತ್ತೇವೆ.

ಬ್ರಹ್ಮನು ಎಲ್ಲಿ, ಹೇಗೆ ಅಡಗಿದ್ದಾನೆ?

ತಿಲೇಷು ತೈಲಂ ದಧನೀವ ಸರ್ಪಿ-
ರಾಪಃ ಸ್ರೋತಃಸ್ವರಣೀಷು ಚಾಗ್ನಿಃ ।
ಏವಮಾತ್ಮಾಽಽತ್ಮನಿ ಗೃಹ್ಯತೇಽಸೌ
ಸತ್ಯೇನೈನಂ ತಪಸಾ ಯೋಽನುಪಶ್ಯತಿ
(ಶ್ವೇ-1-15)

ಎಳ್ಳಿನಲ್ಲಿರುವ ಎಣ್ಣೆಯಂತೆ, ಮೊಸರಿನಲ್ಲಿರುವ ತುಪ್ಪದಂತೆ (ಒಣಗಿದ) ನದೀ ತಳದ ನೀರಿನಂತೆ, ಅರಣಿಯಲ್ಲಿರುವ ಅಗ್ನಿಯಂತೆ, ಯಾರು ಈತನನ್ನು ಸತ್ಯದಿಂದ, ತಪಸ್ಸಿನಿಂದ ಪುನಃ ಪುನಃ ನೋಡುತ್ತಾನೋ (ಅವನಿಂದ) ಈ ಆತ್ಮನು ತನ್ನಲ್ಲಿಯೇ ಗ್ರಹಿಸಲ್ಪಡುತ್ತಾನೆ.

ಸರ್ವವ್ಯಾಪಿನಮಾತ್ಮಾನಂ ಕ್ಷೀರೇ ಸರ್ಪಿರಿವಾರ್ಪಿತಂ।
ಬ್ರಹ್ಮವಿದ್ಯಾತಪೋಮೂಲಂ ತದ್ಬ್ರಹ್ಮೋಪನಿಷತ್ಪರಂ॥

ಸರ್ವವ್ಯಾಪಿಯಾದ, ಹಾಲಿನಲ್ಲಿ ತುಪ್ಪದಂತಿರುವ ಆತ್ಮವಿದ್ಯೆ ತಪಸ್ಸು ಇವುಗಳಿಗೆ ಕಾರಣನಾಗಿರುವ ಆತ್ಮನನ್ನು ಆತ್ಮನಲ್ಲೇ ಸಾಕ್ಷಾತ್ಕರಿಸಬೇಕು. ಈ ಆತ್ಮನೇ ಪರಮ ಶ್ರೇಯಸ್ಸಿಗಾಶ್ರಯವಾದ ಬ್ರಹ್ಮ.

ಯೋ ದೇವೋ ಅಗ್ನೌ ಯೋ ಅಪ್ಸು
ಯೋ ವಿಶ್ವಂ ಭುವನ ಮಾವಿವೇಶಂ।
ಯ ಔಷಧೀಷು ಯೋ ವನಸ್ಪತಿಷು
ತಸ್ಮೈ ದೇವಾಯ ನಮೋ ನಮಃ

(ಶ್ವೇ-2-17)

ಯಾವ ದೇವನು ಅಗ್ನಿಯಲ್ಲೂ, ನೀರಲ್ಲೂ. ಔಷಧಿಗಳಲ್ಲೂ, ವನಸ್ಪತಿಗಳಲ್ಲೂ ಇರುವನೋ, ಯಾವನು ಸಂಸಾರ ಮಂಡಲವನ್ನೆಲ್ಲಾ ವ್ಯಾಪಿಸಿರುವನೋ ಅಂಥ ದೇವನಿಗೆ ಪುನಃ ಪುನಃ ನಮಸ್ಕಾರಗಳು

ಸರ್ವತಃ ಪಾಣಿಪಾದಂ ತತ್ ಸರ್ವತೋಽಕ್ಷಿ ಶಿರೋಮುಖಂ।
ಸರ್ವತಃ ಶ್ರುತಿಮಲ್ಲೋಕೇ ಸರ್ವಮಾವೃತ್ಯ ತಿಷ್ಠತಿ॥

(ಶ್ವೇ-3-76)

ಅದು ಎಲ್ಲೆಲ್ಲಿಯೂ ಕೈಕಾಲುಗಳುಳ್ಳದ್ದು. ಎಲ್ಲೆಲ್ಲಿಯೂ ಕಣ್ಣು-ತಲೆ-ಬಾಯಿಗಳುಳ್ಳದ್ದು. ಎಲ್ಲೆಲ್ಲಿಯೂ ಕಿವಿಗಳುಳ್ಳದ್ದು. ಲೋಕದಲ್ಲಿ ಎಲ್ಲವನ್ನೂ ಆವರಿಸಿರುವುದು.

ಅಣೋರಣೀಯಾನ್ಮಹತೋ ಮಹೀಯಾ-
ನಾತ್ಮಾ ಗುಹಾಯಾಂ ನಿಹಿತೋಽಸ್ಯ ಜಂತೋಃ ।
ತಮಕ್ರತುಂ ಪಶ್ಯತಿ ವೀತಶೋಕೋ
ಧಾತು ಪ್ರಸಾದಾನ್ಮಹಿಮಾನಮೀಶಮ್ ॥

(ಶ್ವೇ-3-20)

ಅಣುಗಿಂತ ಅಣುತರನಾದ, ಮಹತ್ತಿಗಿಂತ ಮಹತ್ತರನಾದ ಆತ್ಮನು ಈ ಪ್ರಾಣಿ ಸಮೂಹದ ಹೃದಯದಲ್ಲಿ ಸ್ಥಿತನಾಗಿರುವನು. (ಯಾವನು) ಧಾತುವಿನ ಪ್ರಸಾದದಿಂದ ವಿಷಯ - ಭೋಗ - ಸಂಕಲ್ಪರಹಿತನೂ ಮಹಿಮೆಯುಳ್ಳವನೂ ಆದ ಆ ಈಶ್ವರನನ್ನು ನೋಡುತ್ತಾನೆಯೋ (ಅವನು) ಶೋಕರಹಿತನಾಗುವನು. (ಧಾತು ಪ್ರಸಾದ-ಈಶ್ವರ ಕೃಪೆ).

ತ್ವಂ ಸ್ತ್ರೀ ತ್ವಂ ಪುಮಾನಸಿ ತ್ವಂ ಕುಮಾರ ಉತವಾ ಕುಮಾರೀ ।
ತ್ವಂ ಜೀರ್ಣೋ ದಂಡೇನ ವಂಚಸಿ ತ್ವಂ ಜಾತೋ ಭವಸಿ
ವಿಶ್ವತೋಮುಖಃ

(ಶ್ವೇ-4-3)

ನೀನು ಸ್ತ್ರೀ, ಪುರುಷ, ಕುಮಾರ ಮತ್ತು ಕುಮಾರಿ. ಮುಪ್ಪನ್ನು ಪಡೆದು ಕೋಲಿನಿಂದ ತತ್ತರಿಸುತ್ತಿರುವ ಮುದುಕನೂ ನೀನೇ (ಪ್ರಪಂಚ ರೂಪದಿಂದ) ಉತ್ಪನ್ನವಾಗಿ ವಿಶ್ವತೋಮುಖನಾಗಿರುವವನೂ ನೀನೇ !

ನಿತ್ಯೋ ನಿತ್ಯಾನಾಂ ಚೇತನಶ್ಚೇತನಾನಾಂ
ಮೇಕೋ ಬಹೂನಾಂ ಯೋ ವಿದಧಾತಿ ಕಾಮಾನ್

(ಶ್ವೇ-6-13)

ಪರಮಾತ್ಮನು ನಿತ್ಯ ವಸ್ತುಗಳಲ್ಲಿ ನಿತ್ಯನು. ಚೇತನರಲ್ಲಿ ಚೇತನನು. ಒಬ್ಬನೇ ಆಗಿದ್ದರೂ ಬಹು ಜೀವರಿಗೆ ಭೋಗಗಳನ್ನು ಕೊಡುತ್ತಾನೆ.

ನ ತತ್ರ ಸೂರ್ಯೋ ಭಾತಿ ನ ಚಂದ್ರತಾರಕಂ
ನೇಮಾ ವಿದ್ಯುತೋ ಭಾಂತಿ ಕುತೋಽಯಮಗ್ನಿಃ ।
ತಮೇವ ಭಾಂತಮನುಭಾಂತಿ ಸರ್ವಂ
ತಸ್ಯಭಾಸಾ ಸರ್ವಮಿದಂ ವಿಭಾತಿ ॥

(ಶ್ವೇ-6-14)

ಆ ಪರಮಾತ್ಮನಲ್ಲಿ ಸೂರ್ಯನಾಗಲಿ, ಚಂದ್ರನಾಗಲಿ, ನಕ್ಷತ್ರಗಳಾಗಲಿ ಪ್ರಕಾಶಿಸುವುದಿಲ್ಲ. ಈ ಮಿಂಚುಗಳೂ ಪ್ರಕಾಶಿಸುವುದಿಲ್ಲ. (ನಮ್ಮ ಕಣ್ಣಿಗೆ ಕಾಣುವ) ಈ ಅಗ್ನಿಯು ಪ್ರಕಾಶಿಸುವುದೆಲ್ಲಿ? ಪ್ರಕಾಶಿಸುವ ಅವನನ್ನೇ ಅನುಸರಿಸಿ ಎಲ್ಲವೂ ಪ್ರಕಾಶಿಸುವುದು. ಅವನ ಪ್ರಕಾಶದಿಂದಲೇ ಇದೆಲ್ಲ ಬೆಳಗುತ್ತೆ.

ಆತ್ಮ - ಪರಬ್ರಹ್ಮ ಸ್ವರೂಪ ಲಕ್ಷಣ.

'ಓಂ'ಕಾರದಿಂದ ಸೂಚಿಸಲ್ಪಡುವವನೂ, ಪರಾಪರ ಬ್ರಹ್ಮರೂಪನೂ ಆದ ಈ ಆತ್ಮನಿಗೆ 4 ಪಾದಗಳು.

೧ನೆಯ ಮಾತ್ರೆ ಜಾಗ್ರದವಸ್ಥೆ 'ಅ'

ವೈಶ್ವಾನರ–ಈ ವಿಶ್ವನು ಬಲಗಣ್ಣಿನಿಂದ ನೋಡುತ್ತಾನೆ. ಲೌಕಿಕ ವಸ್ತುಗಳ ಅನುಭವದಿಂದ ಕೂಡಿದೆ.

೨ನೆಯ ಮಾತ್ರೆ ಸ್ವಪ್ನಾವಸ್ಥೆ 'ಉ'

ತೈಜಸನು ಮನಸ್ಸಿನಿಂದ ಅರಿಯುತ್ತಾನೆ. ಶುದ್ಧ ಲೌಕಿಕ, ಬಾಹ್ಯ ವಸ್ತುಗಳಿಲ್ಲದಿದ್ದರೂ ಅನುಭವವಾಗುತ್ತೆ.

೩ನೆಯ ಮಾತ್ರೆ ಸುಷುಪ್ತಿ 'ಮ'

ಹೃದಯಾಕಾಶದಲ್ಲಿ ವಿಹರಿಸುತ್ತಾನೆ. ಈ ಪ್ರಾಜ್ಞನು, ಲೋಕೋತ್ತರ ಎಂದರೆ ಗ್ರಹಣ ಗ್ರಾಹ್ಯಗಳಿಲ್ಲದುದು.

೪ ತುರೀಯ

ಮಾತ್ರೆಯಿಲ್ಲದ ಓಂಕಾರ – ಇದೇ ಬ್ರಹ್ಮ. ವ್ಯವಹಾರಾತೀತ, ಅದ್ವೈತವಾದ ತುರೀಯವೆಂದರೆ, ಪಾರಮಾರ್ಥಿಕವಾದ ಆತ್ಮ ಸ್ವರೂಪ. ಮೂರು ಅವಸ್ಥೆಗಳ ಅನುಭವವು ಜಾಗ್ರದಾವಸ್ಥೆಯಲ್ಲಾಗಿ ಒಬ್ಬನೇ ಆತ್ಮ, ಶರೀರದಲ್ಲಿ ಮೂರು ಬಗೆಯಿಂದ ತೋರುವನು. ಶ್ರೀ ಶಂಕರಾಚಾರ್ಯರ ಗುರುಗಳಾದ ಶ್ರೀ ಗೌಡಪಾದರು 'ಅಲಾತ ಶಾಂತಿ ಪ್ರಕರಣ'ದಲ್ಲಿ ಹೀಗೆ ಉಪಸಂಹರಿಸಿರುತ್ತಾರೆ.

—ತುರೀಯ—

ಅದ್ವಯವಾದ ತುರೀಯ ವ್ಯವಹಾರಾತೀತ, ಪ್ರಪಂಚೋಪಶಮ, ಮತ್ತು ಮಂಗಳವಾಗಿದೆ. ಜಾತಿ-ಗುಣ ಸಾಮಾನ್ಯ.

ತುರೀಯವು

ಹೌದು	ಅಲ್ಲ
ಅದೃಶ್ಯನು	
ಅವ್ಯವಹಾರ್ಯನು	ಅಂತಃ ಪ್ರಜ್ಞನಲ್ಲ.
ಅಗ್ರಾಹ್ಯನು	ಬಹಿಃ ,,
ಲಕ್ಷಣರಹಿತನು	ಉಭಯ ,,
ಅಚಿಂತ್ಯನು	ಪ್ರಜ್ಞಾನ ಘನನಲ್ಲ
ಅವ್ಯಪದೇಶನು	ಅಪ್ರಜ್ಞನಲ್ಲ
ಏಕಾತ್ಮಪ್ರತ್ಯಯಸಾರನು	ಕರ್ತೃತ್ವ-ಭೋಕ್ತೃತ್ವಗಳಿಲ್ಲ
ಶಿವನು ಮತ್ತು ಅದ್ವೈತನು	ಬೀಜ ನಿದ್ರೆ ಇಲ್ಲ ಕಾರಣ ಸಂಬಂಧ ಇರುವುದಿಲ್ಲ.
ಸರ್ವದೃಕ್ ಸ್ವಭಾವದವನು	ಬಯಕೆ-ಸ್ವಪ್ನಗಳಿಲ್ಲ.

—ಬ್ರಹ್ಮ ವಿಚಾರ—

(ಮುಂದುವರಿದುದು)

ಅವಸ್ಥಾತ್ರಯ ಸಾಕ್ಷಿಯೇ ಬ್ರಹ್ಮವೆಂದು ಶ್ರೀ ಶಂಕರ ಭಗವತ್ಪಾದಾಚಾರ್ಯರು ತಾವು ರಚಿಸಿರುವ 'ಪ್ರಾತಸ್ಮರಣ ಸ್ತೋತ್ರ'ದಲ್ಲಿ ಸ್ಪಷ್ಟಪಡಿಸಿರುವರು.

—೧—

ಪ್ರಾತಃ ಸ್ಮರಾಮಿ ಹೃದಿ ಸಂಸ್ಫುರದಾತ್ಮತತ್ವಂ
ಸಚ್ಚಿತ್ಸುಖಂ ಪರಮ ಹಂಸಗತಿಂ ತುರೀಯಮ್ ।
ಯತ್ಸ್ವಪ್ನ ಜಾಗರ ಸುಷುಪ್ತಮವೈತಿ ನಿತ್ಯಮ್
ತದ್ಬ್ರಹ್ಮ ನಿಷ್ಕಲಮಹಂ ನ ಚ ಭೂತ ಸಂಘಃ॥

ಅರ್ಥ–ಯಾವದು ಯಾವಾಗಲೂ ಕನಸ್ಸು, ಎಚ್ಚರ, ನಿದ್ರೆ ಎಂಬ ಮೂರು ಅವಸ್ಥೆಗಳನ್ನು ಅನುಭವಿಸುತ್ತಾ–ಇವುಗಳಿಗೆ ನಾಲ್ಕನೆಯದಾಗಿರುವುದೋ, ಆ ಹೃದಯದಲ್ಲಿ ಬೆಳಗುತ್ತಿರುವ ಸಚ್ಚಿದಾನಂದ ಸ್ವರೂಪವಾದ, ಪರಮಹಂಸರಿಗೆ ಮಾತ್ರ ಲಭ್ಯವಾಗಬಲ್ಲ, ಆ ಆತ್ಮ ತತ್ವವನ್ನು ನಾನು ಪ್ರಾತಃಕಾಲದಲ್ಲಿ ಸ್ಮರಿಸುತ್ತೇನೆ. ನಾನು ಆ ಅವಯವಗಳಿಲ್ಲದ ಬ್ರಹ್ಮನೇ ಹೊರತು ಭೂತಗಳ ಸಮೂಹವಲ್ಲ.

ಅವಸ್ಥಾತ್ರಗಳೆಂದರೆ-ಕನಸು-ಎಚ್ಚರ, ಗಾಢನಿದ್ರೆ.

ಕನಸು — ಸುಳ್ಳು ಏಕೆಂದರೆ-ಕನಸು–ಯಾ ಸ್ವಪ್ನದಲ್ಲಿ ತೋರುವ ವಿಚಾರಗಳು ಎಚ್ಚೆತ್ತ ಕೂಡಲೇ ಸುಳ್ಳೆಂದು ತೋರುವವು. ಕನಸೆಂಬುದು ಭ್ರಮೆ. ಸ್ವಪ್ನದಲ್ಲಿ ಇಂದ್ರಿಯಗಳಿಲ್ಲದೆ ಬರಿಯ ಮನಸ್ಸಿಗೆ ವಿಷಯಗಳನ್ನು ಅರಿತಂತೆ ತೋರುವುದು.

ಜಾಗ್ರತಾವಸ್ಥೆ-ಎಚ್ಚರ-ಹೊರಗಿನ ವಿಷಯಗಳನ್ನು ಇಂದ್ರಿಯಗಳಿಂದ ಅರಿಯುವುದೇ ಎಚ್ಚರ - ಯಾ - ಜಾಗ್ರದವಸ್ಥೆ. ಎಚ್ಚರವನ್ನು ಅನುಭವಿಸುವವರಿಗೆಲ್ಲ ಎಚ್ಚರವಾಗುತ್ತದೆ.

ಗಾ ಢ ನಿ ದ್ರೆ—ಗಾಢನಿದ್ರೆಯಲ್ಲಿ ಏನೂ ತೋರುವದಿಲ್ಲೆಂಬುದು ಎಲ್ಲರ ಅನುಭವದಲ್ಲಿರುವ ವಿಷಯ. ಹೀಗೆ ತೋರದಿರಲು ಆತ್ಮನಿಗೆ 'ಮೂಲಾವಿದ್ಯೆ' ಯೆಂಬ ಮುಸುಕು ಇರುವುದೇ ಕಾರಣವೆಂದು ಕೆಲ

ವೇದಾಂತಿಗಳ ಅಭಿಪ್ರಾಯ-ಈ ಮೂರು ಅವಸ್ಥೆಗಳನ್ನೂ ನಿತ್ಯ ಪಡೆಯುತ್ತಿರುವುದಾಗಿ ಜನರು ನಂಬಿರುವರು ಆದರೆ ನಿಜವಾಗಿ ವಿಚಾರ ಮಾಡಿದರೆ ಆತ್ಮನ ನಿಜ ರೂಪದ ದೃಷ್ಟಿಯಿಂದ-ಈ ಮೂರವಸ್ಥೆಗಳೂ ನಿಜವಾಗಿ ಇಲ್ಲವೆಂಬುದು ವ್ಯಕ್ತಪಡುವುದು.

ಬ್ರಹ್ಮನು (ಆತ್ಮನು) ತುರೀಯನು

ಮೂರೇ ಅವಸ್ಥೆಗಳಿರಬೇಕಾದರೆ ನಾಲ್ಕನೆಯದೆಲ್ಲಿಂದ ಬಂತೆಂದು ಕೆಲವರು ಪ್ರಶ್ನಿಸುವರು. ಈ ಅವಸ್ಥಾತ್ರಯಗಳಿಗಿಂತ ತುರೀಯನು ಬೇರೇ ಆದರೆ ಇದು ಇಲ್ಲವೆಂಬ ಕಾಲವೇ ಇಲ್ಲ. ಸದಾ ಇದರ ಅಸ್ತಿತ್ವವುಂಟು.

ಆತ್ಮನು ಹೃದಯದಲ್ಲಿ ಪ್ರಕಾಶಿಸುತ್ತಿರುವನು.

(ಹೃದಿ ಸಂಸ್ಫುರದಾತ್ಮ ತತ್ವಂ)

ಬ್ರಹ್ಮ ಸ್ವರೂಪನಾದ ಆತ್ಮ ತತ್ವವು ಮನಸ್ಸಿನಲ್ಲಿ ತೋರುವುದೇ ಹೃದಯದಲ್ಲಿ ಬೆಳಗುವುದೆಂದರ್ಥ. ಅಂದರೆ ಮನಸ್ಸು ಇದನ್ನರಿಯುವುದಲ್ಲ. ಮನಸ್ಸು ಆತ್ಮನನ್ನು ನೋಡಲಾರದು. ಆದುದರಿಂದ ಬ್ರಹ್ಮನು-ಯಾ-ಆತ್ಮನು ಮನಸ್ಸಿಗೆ ವಿಷಯನಲ್ಲ.

ಆತ್ಮನು ಸತ್ಯಜ್ಞಾನಾನಂದ ರೂಪನು

(ಸಚ್ಚಿತ್ಸುಖಂ)

ಸತ್ ಎಂದರೆ ಯಾವಾಗಲೂ ಇರುವುದು. ಇರವಿನ ಸ್ವರೂಪವೇ ಆತ್ಮ. ಚಿತ್ ಎಂದರೆ ಜ್ಞಾನ. ಜ್ಞಾನ ಸ್ವರೂಪವೂ ಆತ್ಮ, ಸುಖವೆಂದರೆ ಆನಂದ, ಆನಂದ ಸ್ವರೂಪವೂ ಆತ್ಮ. ನಮ್ಮ ಒಂದೇ ಸ್ವರೂಪವು ಒಂದು ದೃಷ್ಟಿಯಿಂದ ಸತ್ಯ, ಮತ್ತೊಂದು ದೃಷ್ಟಿಯಿಂದ ಜ್ಞಾನ, ಇನ್ನೊಂದರಿಂದ ಆನಂದ ಸ್ವರೂಪವಾಗಿಯೂ ಕಾಣುತ್ತದೆ.

ಆತ್ಮನು ಪರಮಹಂಸರಿಗೇ ಲಭ್ಯ
(ಪರಮಹಂಸಗತಿಂ–ತುರೀಯಂ)

ಜಗತ್ತಿನಲ್ಲಿ ಆತ್ಮ–ಅನಾತ್ಮಗಳ ವಿಚಾರ ಮಾಡಿ ನಿಸ್ಸಾರವಾದುದನ್ನು ಬಿಟ್ಟು-ಸಾರ ರೂಪವನ್ನು 'ಹಂಸಕ್ಷೀರ' ನ್ಯಾಯದಂತೆ ಗ್ರಹಿಸುವರೋ, ಅಂಥವರಿಗೆ ಪರಮಹಂಸರೆಂದು ಹೆಸರು.

ಆ ಬ್ರಹ್ಮನೇ ನಾನು. ನಾನು ಭೂತ ಸಂಘುವಲ್ಲ.
(ತದ್ಬ್ರಹ್ಮ ನಿಷ್ಕಲಮಹಂ ನ ಚ ಭೂತಸಂಘಃ)

ಜ್ಞಾನಿಗಳು ಅರಿತುಕೊಂಡಿರುವ ಆತ್ಮ ತತ್ವವೇ ಈ ಬ್ರಹ್ಮವು. ಯಾವ ಅವಯವಗಳೂ ಇಲ್ಲದ ಬ್ರಹ್ಮವೇ ನಾನು. ಶುದ್ಧವಾದ, ಜ್ಞಾನಸ್ವರೂಪವಾದ–ಯಾವ ಬಂಧನಕ್ಕೂ ಒಳಪಡದೆ ಇರುವ ಸುಸ್ವರೂಪವೇ ಬ್ರಹ್ಮ. ಇದಕ್ಕೂ ಪಂಚಭೂತಗಳಿಗೂ ಯಾವ ಸಂಬಂಧವೂ ಇಲ್ಲ ಪ್ರಾತಃಕಾಲ ಎದ್ದು ಸತ್ಯ-ಜ್ಞಾನಾನಂದ ಸ್ವರೂಪನಾದ ಬ್ರಹ್ಮವೇ ನಾನು. ಎಂಬುದನ್ನು ಸ್ಮರಿಸುತ್ತಾ ಹೋದರೆ ಅದು ನಿಜವಾದ ಜ್ಞಾನ-ಸಾಧನೆಗೆ ಅನುಕೂಲವಾಗುತ್ತೆ.

—೨—

ಪ್ರಾತರ್ಭಜಾಮಿ ಮನಸೋ ವಚಸಾಮಗಮ್ಯಂ
ವಾಚೋ ವಿಭಾಂತಿ ನಿಖಿಲಾ ಯದನುಗ್ರಹೇಣ ।
ಯಂ ನೇತಿ ನೇತಿ ವಚನೈರ್ನಿಗಮಾ ಅವೋಚು
ಸ್ತಂ ದೇವದೇವಮಜಮಚ್ಯುತ ಮಾಹುರಗ್ರ್ಯಂ ॥

ಯಾವನ ಅನುಗ್ರಹದಿಂದ ಎಲ್ಲ ಮಾತುಗಳೂ ಪ್ರಕಾಶಿಸುತ್ತಿರುವವೋ, ಯಾವನನ್ನು ವೇದ ನಿಗಮಾದಿಗಳು ಇದಲ್ಲ, ಇದಲ್ಲ, ಎಂಬ ಮಾತುಗಳಿಂದ ಸಾರುತ್ತಿರುವವೋ, ವಚನಕ್ಕಾಗಲಿ, ಮನಸ್ಸಿಗಾಗಲಿ

ಸಿಕ್ಕದಿರುವಂಥ ಬ್ರಹ್ಮ ತತ್ವವನ್ನು ಪ್ರಾತಃಕಾಲದಲ್ಲಿ ಭಜಿಸುತ್ತೇನೆ. ಅವನೇ ಎಲ್ಲ ದೇವನಗಳಿಗೂ ದೇವ, ಜನ್ಮರಹಿತ, ಅವಿನಾಶಿ ಎಂದು ತಿಳಿದವರು ಹೇಳುತ್ತಾರೆ.

'ಯಂ ನೇತಿ,ನೇತಿ ವಚನೈರ್ನಿಗಮಾ ಅವೋಚುಃ' ಎಂದರೆ, ವೇದ ಭಾಗಗಳಾದ ಉಪನಿಷತ್ತುಗಳು ಆತ್ಮ ಸ್ವರೂಪದ ಮುಖ್ಯ ಸಾಧನಗಳು ಆತ್ಮ ತತ್ವದ ರಹಸ್ಯವನ್ನರಿಯಲು ಉಪನಿಷತ್ತುಗಳಲ್ಲದೆ, ಬೇರೆ ಮಾರ್ಗ ದರ್ಶಿ ಗ್ರಂಥಗಳಿಲ್ಲ.

'ಮನಸೋ ವಚಸಾಮಗಮ್ಯಂ ವಾಚೋ ವಿಭಾನ್ತಿ ನಿಖಿಲಾ ಯದನುಗ್ರಹೇಣ' ಎಂಬಂತೆ ಪರಬ್ರಹ್ಮ ಸ್ವರೂಪನು ಮನಸ್ಸಿಗಾಗಲಿ ಮಾತಿಗಾಗಲಿ ವಿಷಯನಲ್ಲ. ಮನಸ್ಸು ಮತ್ತು ಮಾತೂ ಅವನಿಂದಲೇ ಪ್ರಕಾಶಿಸುತ್ತವೆ. ಆತ್ಮನೇ ಅವುಗಳನ್ನು ಬೆಳಗಿಸುವವನು. ಆತ್ಮನ ಅನುಗ್ರಹವಿಲ್ಲದೆ ಮನಸ್ಸು-ಮಾತು ಕಾರ್ಯತತ್ಪರಲಾಗಲಾರವು. ಈ ಕಾರಣ ಮಾತಿನಿಂದ, ಮನಸ್ಸಿನಿಂದ ಆತ್ಮ ಸ್ವರೂಪ ತಿಳಿಯುವುದಸಾಧ್ಯ. ವೇದಾಂತ ವಾಣಿಯಿಂದ ಆತ್ಮ ತತ್ವದ ಸ್ವರೂಪವು ಗೊತ್ತಾಗುತ್ತದೆ. ಈ ಕಾರಣ ವೇದಾಂತದ ವಾಕ್ಯಗಳೇ ಪ್ರಮಾಣ. ಅವುಗಳಿಂದಲೇ 'ಪ್ರಮೆ' ಎಂದರೆ ಯಥಾರ್ಥವಾದ ತಿಳುವಳಿಕೆ ಬರುತ್ತದೆ.

'ತಂ ದೇವದೇವ ಮಜಮಚ್ಯುತ ಮಾಹುರಗ್ರ್ಯಂ' ನಮ್ಮ ನಿಜ ಸ್ವರೂಪವಾದ ಆತ್ಮವು ಚಿದ್ರೂಪವಾಗಿರುವ ಕಾರಣ ಸ್ವಯಂ ಪ್ರಕಾಶ ವಾಗಿರುತ್ತದೆ. ದೇವ ಎಂದರೆ ಪ್ರಕಾಶಿಸುವ ವಸ್ತು. ಆದಕಾರಣ ಇದನ್ನು ದೇವದೇವನೆಂದು ಕರೆಯುತ್ತಾರೆ ಇಂದ್ರಿಯಗಳೂ ಸಹ ಆತ್ಮನಿಂದ ಬೆಳಗುತ್ತವೆ. ಆತ್ಮನಿಗೆ ಹುಟ್ಟು-ಸಾವುಗಳಿಲ್ಲ. ಇದು ಅಜವಾಗಿರುವ ಕಾರಣ ಹುಟ್ಟನ್ನೇ ಅರಿಯದು. ಹುಟ್ಟಿಲ್ಲದ ಕಾರಣ ಸಾವೂ ಇಲ್ಲ.

ಈ ಕಾರಣ ಪ್ರಾತಃಕಾಲ ನಾವು ಆತ್ಮ ತತ್ವವನ್ನೇ ಸ್ಮರಿಸಿ ಭಜಿಸಬೇಕು.

—೩—

ಪ್ರಾತರ್ನಮಾಮಿ ತಮಸಃ ಪರಮರ್ಕವರ್ಣಂ
ಪೂರ್ಣಂ ಸನಾತನ ಪದಂ ಪುರುಷೋತ್ತಮಾಖ್ಯಂ
ಯಸ್ಮಿನ್ನಿದಂ ಜಗದಶೇಷ ಮಶೇಷಮೂರ್ತೌ
ರಜ್ಜ್ವಾಂ ಭುಜಂಗಮ ಇವ ಪ್ರತಿಭಾತಿ ತಂ ವೈಃ

ಸರ್ವ ರೂಪನಾದ ಯಾರಲ್ಲಿ ಈ ಜಗತ್ತು ಹಾವಿನಂತೆ ಭಾಸವಾಗುತ್ತಿರುವುದೋ, ಕತ್ತಲಿಗೆ ದೂರವಾಗಿ ಸೂರ್ಯವರ್ಣದಂತೆ ಪೂರ್ಣ ಸನಾತನ ಪದವೆಂದು ಪ್ರಸಿದ್ಧನಾಗಿರುವ ಪುರುಷೋತ್ತಮನೆಂದು ಹೆಸರುಳ್ಳ ಆತ್ಮವನ್ನು ಪ್ರಾತಃಕಾಲದಲ್ಲಿ ನಮಸ್ಕರಿಸುವೆನು.

'ಅಶೇಷ ಮೂರ್ತೌ' ಎಂದರೆ ಆತ್ಮ ತತ್ವವನ್ನು ಬಿಟ್ಟರೆ ಉಳಿದೆಲ್ಲ ಅನಾತ್ಮವೆಂದು ಭಾವಿಸಬಾರದು. ಇದೂ ಆತ್ಮನಿಗೇ ಸೇರಿದ್ದು. ಇದನ್ನು ವಿಚಾರಮಾಡಿ ಅರಿಯಬೇಕು. ಕಾಣುವ, ಕೇಳುವ ಜಗದ್ರೂಪವೆಲ್ಲ ನಿಜವಾಗಿ ಆತ್ಮನೆಂದೇ ತಿಳಿಯಬೇಕು.

ಯಸ್ಮಿನ್ನಿದಂ ಜಗತ್ ರಜ್ಜ್ವಾಂ ಭುಜಂಗಮ ಇವ ಪ್ರತಿಭಾತಿ ಹಗ್ಗದಲ್ಲಿ ಹಾವೆಂಬುದು ನಿಜವಾಗಿ ಎಂದಿಗೂ ಇರುವುದಿಲ್ಲ. ಆದರೆ ನಸುಗತ್ತಲಲ್ಲಿ ಅದು ಹಾವಿನಂತೆ ಕಾಣಬರುತ್ತೆ. ಹಗ್ಗವಿಲ್ಲದಿದ್ದರೆ ಹಾವೂ ಇಲ್ಲ. ಅಜ್ಞಾನಿಗಳು ಆತ್ಮನಲ್ಲಿ ಅನಾತ್ಮವನ್ನು ನೋಡುವುದೂ ಹೀಗೆಯೆ? ಅಜ ಇದನ್ನು ಅವಸ್ಥಾತ್ರಯ ದೃಷ್ಟಿಯಿಂದ ವಿಚಾರ ಮಾಡಿ ನಿರ್ಣಯಿಸಿಕೊಳ್ಳಬೇಕು.

ತಮಸಃ ಪರಮರ್ಕ ವರ್ಣಂ—ಸೂರ್ಯನಿಗೆ ಕತ್ತಲೆಯ ಸಂಪರ್ಕವಾಗುವ ಸಂಭವವೇ ಇಲ್ಲ. ಹಾಗೆಯೇ ಆತ್ಮನಿಗೆ ಅಜ್ಞಾನದ ಸಂಪರ್ಕವೂ ಇಲ್ಲ. ತಮಸ್ಸು, ಅವಿದ್ಯೆ, ಮೋಹ, ಭ್ರಮೆಗಳೇ ಅಜ್ಞಾನದ ಮೂಲ-ಸ್ವಯಂ ಪ್ರಕಾಶ ಆತ್ಮನೆಂಬ ಸೂರ್ಯನಿಗೆ ಅಜ್ಞಾನವೆಂಬ ತಮಸ್ಸಿನ ಸಂಬಂಧವಿಲ್ಲ.

ಪೂರ್ಣಂ ಸನಾತನ ಪದಂ ಪುರುಷೋತ್ತಮಾಖ್ಯಂ—ಆತ್ಮನು ಪೂರ್ಣನು, ಸನಾತನನು, ಪುರುಷೋತ್ತಮನು-ಸನಾತನ ಎಂದರೆ ಶಾಶ್ವತ ವಾದದ್ದು. ಯಾವಾಗಲೂ ಎಲ್ಲೆಲ್ಲಿಯೂ ಇರುವ ಒಂದೇ ರೂಪಕ್ಕೆ ಪುರುಷೋತ್ತಮನೆಂದು ಹೆಸರು. ಮೂರವಸ್ಥೆಗಳಲ್ಲಿ ತೋರುವುದೆಲ್ಲ ಕ್ಷರ. ವ್ಯವಹಾರದಲ್ಲಿ ನಾಶವಿಲ್ಲೆಂದು ಕಲ್ಪಿಸಿರುವ ಸಂಸಾರ ಬೀಜಕ್ಕೆ ಅಕ್ಷರವೆಂದು ಹೆಸರು. ಆತ್ಮನು ಕ್ಷರವೂ ಅಲ್ಲ. ಅಕ್ಷರವೂ ಅಲ್ಲ. ಈ ಕಾರಣದಿಂದಲೇ ಆತ್ಮನಿಗೆ ಪುರುಷೋತ್ತಮನೆಂಬ ಹೆಸರು ಬಂದಿದೆ. ಸುಷುಪ್ತಿ ಪ್ರಲಯಗಳಲ್ಲಿ ಜಗತ್ತು ಬೀಜರೂಪವಾಗಿರಬೇಕು. ಈ ಕಾರಣ ಆತ್ಮನನ್ನು ಅರಿತವನು ಪ್ರಾತಃಕಾಲದಲ್ಲಿ ಆತ್ಮನನ್ನು ಭಜಿಸುತ್ತ, ಅದರಲ್ಲೇ ತನ್ಮಯನಾಗಿ ಆನಂದ ವನ್ನನುಭವಿಸಬೇಕು.

ಶ್ಲೋಕತ್ರಯ ಮಿದಂ ಪುಣ್ಯಂ
ಲೋಕತ್ರಯ ವಿಭೂಷಣಂ ।
ಪ್ರಾತಃಕಾಲೇ ಪಠೇದ್ಯಸ್ತು
ಸ ಗಚ್ಛೇತ್ಪರಮಂ ಪದಂ ॥

ಪುಣ್ಯಕರವಾದ ಈ ಮೂರು ಶ್ಲೋಕಗಳೂ ಮೂರು ಲೋಕಕ್ಕೂ ಭೂಷಣಪ್ರದವಾಗಿವೆ. ಯಾರು ಪ್ರಾತಃಕಾಲದಲ್ಲಿ ಪಠಿಸುವರೊ ಅವರು ಪರಮ ಪದವನ್ನು ಹೊಂದುವರು. ಈ ಸ್ತೋತ್ರ ಪಾಠದಿಂದ, ಬ್ರಹ್ಮ ವಸ್ತುವಿನ ವಿಚಾರದಿಂದ ಪುಣ್ಯವು ಲಭಿಸುವುದು, (ಮೂರು ಲೋಕಗಳೆಂದರೆ

ಸ್ವರ್ಗ, ಮರ್ತ್ಯ, ಪಾತಾಳ)- ಚಿತ್ತಶುದ್ಧಿಯಾಗುವುದು. ಶ್ರವಣ-ಮನನ ನಿಧಿ ಧ್ಯಾಸಗಳಿಂದ ಮನಸ್ಸಿನ ಗ್ರಹಣ ಶಕ್ತಿಯು ಅಧಿಕವಾಗಿ ಆತ್ಮ ತತ್ವದ ಪೂರ್ಣ ಜ್ಞಾನವಾಗುವುದು. ಮುಮುಕ್ಷುಗಳಿಗೆ ಪರಮ ಮಂಗಲವಾಗುವುದು.

(ಆದಿಶಂಕರರ ಪ್ರಾತಃಸ್ಮರಣ ಸ್ತೋತ್ರದ ಟೀಕೆ ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮಿಗಳಿಂದ)

ಬ್ರಹ್ಮ ವಿಚಾರಕ್ಕೆ ಅಧಿಕಾರಿ

ಬ್ರಹ್ಮ ವಿಚಾರವನ್ನು ಅರಿಯಲು ಜನ್ಮ ಜನ್ಮಗಳ ಸಂಸ್ಕಾರಬೇಕು. ವೇದಾಂತಕ್ಕೆ ಸಾರ್ವತ್ರಿಕ ಅನುಭವವೇ ತಳಹದಿ. ವಿವೇಕ ಚಿಂತಾಮಣಿ ಯಲ್ಲಿ ಶ್ರೀ ಶಂಕರರು ಪ್ರಪ್ರಥಮವಾಗಿ ಸೂಚಿಸಿರುವಂತೆ —

ಆತ್ಮಾನಾತ್ಮ ವಿವೇಚನಂ ಸ್ವನುಭವೋ ಬ್ರಹ್ಮಾತ್ಮನಾ ಸಂಸ್ಥಿತಿಃ ।

ಆತ್ಮ-ಅನಾತ್ಮದ ವಿವೇಚನೆಯಿಂದ ಬ್ರಹ್ಮ ಸ್ವರೂಪವು ಅನುಭವ ದಿಂದಲೇ ವೇದ್ಯವಾಗುವುದು. ವೇದಾಂತವಾದರೂ ನಮಗೆ ಅನುಭವಕ್ಕೆ ಬರುವಂಥ ವಿಷಯಗಳನ್ನೇ ಬೋಧಿಸುವುದು. ವಿಷಯಗಳನ್ನು ತಿಳಿಸುವುದು ಸಂಶಯವಾಗಿಡುವುದು ಅಥವಾ ಬಾಧಿತವಾಗಿ ತಿಳಿಸುವುದು ಅಪ್ರಮಾಣ ವೆನಿಸುತ್ತದೆ. ರಹಸ್ಯವಾದುದನ್ನು ಅನುಭವಕ್ಕೆ ಬರುವಂತೆ ತಿಳಿಸುವುದು ಪ್ರಮಾಣ ಎನಿಸುವುದು. ಈ ಪ್ರಮಾಣದಲ್ಲಿ ದೇಶ ಕಾಲಗಳ ನಿಯಮ ವಿಲ್ಲದೆ ಸಾರ್ವತ್ರಿಕವಾದ ಅನುಭವವನ್ನು ಅವಲಂಬಿಸಿರುವ ಪರಮಾರ್ಥದ ಸತ್ಯವಿರುವುದು.

ಈ ಕೆಳಗೆ ಕಾಣಿಸಿರುವ

ಸಾಧನ ಚತುಷ್ಟಯ ಸಂಪತ್ತಿ ಉಳ್ಳವನೇ ಬ್ರಹ್ಮ ವಿಚಾರ ಮಾಡಲು ಯೋಗ್ಯನೆಂದು ನಿರ್ಣಯಿಸಿರುವರು.

1 ನಿತ್ಯಾನಿತ್ಯ ವಸ್ತು ವಿವೇಕ ಜ್ಞಾನ—ಅಂದರೆ ನಿತ್ಯವೂ ಸನಾತನವೂ ಆದದ್ದು ಬ್ರಹ್ಮ ಸ್ವರೂಪವು. ಅದನ್ನು ಹೊರತಾಗಿ ಉಳಿದು ದೆಲ್ಲ ಅನಿತ್ಯ ಅಂದರೆ ಅಶಾಶ್ವತವಾದದ್ದು ಎಂಬ ಅರಿವು. ಅದ್ವೈತಿಗಳು ಬ್ರಹ್ಮ ಸತ್ಯ-ಜಗತ್ತು ಮಿಥ್ಯ ಎಂದು ನಂಬಿದ್ದಾರೆ.

2 ಇಹಾಮುಂತ್ರ ಫಲ ಭೋಗ ವಿರಾಗ— ದರ್ಶನ ಶ್ರವಣಾದಿ ಗಳಿಂದ ಅನಿತ್ಯ ಮತ್ತು ಅಶಾಶ್ವತವಾದ ಭೋಗ ವಸ್ತುಗಳನ್ನು ಅರಿತು ಮನ ದಲ್ಲಿ ಉದ್ಭವವಾಗುವ ತುಚ್ಛ ಬುದ್ಧಿ.

3 ಶಮಾದಿಷಟ್ಕ ಸಂಪತ್ತಿ:—

೧ ಶಮ—ಮನಸ್ಸನ್ನು ಲಕ್ಷ್ಯದಲ್ಲಿಟ್ಟುಕೊಳ್ಳುವುದು.

೨ ದಮ—ಕರ್ಮೇಂದ್ರಿಯ ಜ್ಞಾನೇಂದ್ರಿಯಗಳನ್ನು ವಿಷಯ-ವಾಸನೆಯಿಂದ ದೂರಮಾಡಿ ವಶದಲ್ಲಿ ಇರಿಸುವುದು.

೩ ಉಪರತಿ—ವೃತ್ತಿಯು ಹೊರಗಿನ ವಸ್ತುವನ್ನು ಆಶ್ರಯಿ ಸದಿರುವುದು.

೪ ತಿತಿಕ್ಷ—ವ್ಯಸನ ಶೋಕರಹಿತನಾಗಿ ಯಾವ ಪ್ರತೀಕಾರವೂ ಇಲ್ಲದೆ ಸಮಸ್ತ ದುಃಖಗಳನ್ನು ಸಹಿಸುವುದು.

೫ ಶ್ರದ್ಧ—ಶಾಸ್ತ್ರ, ಗುರು-ವಾಕ್ಯ, ಸತ್ಯವೆಂಬ ನಿಶ್ಚಯಾತ್ಮಕ ಬುದ್ಧಿ.

೬ ಸಮಾಧಾನ— ಯಾವಾಗಲೂ ಶುದ್ಧ ಬ್ರಹ್ಮನಲ್ಲಿ ಬುದ್ಧಿಯಿಂದ ಆಸಕ್ತಿ.

4 ಮುಮುಕ್ಷತ್ವ—ಅಹಂಕಾರ ಮೊದಲಾದ ನಾಶಕಾರೀ ದೇಹ

ಸಂಬಂಧದ ಅಜ್ಞಾನ ಕಲ್ಪಿತ ಬಂಧನಗಳನ್ನು ಸ್ವಸ್ವರೂಪ ಜ್ಞಾನದಿಂದ ಬಿಡಿಸಿಕೊಳ್ಳುವ ಬಯಕೆ.

೩ ಮೂರನೆಯ–ಭಾಗ

Vedantic Concepts in Hinduism

ಹಿಂದೂ ಧರ್ಮದಲ್ಲಿನ ಮುಖ್ಯ ವೇದಾಂತ ತತ್ವಗಳ ಸಾರ.

ದ್ವೈತ—ಶ್ರೀಹರಿಯು ಸರ್ವೋತ್ತಮನು, ಪರತರನು. ತತ್ವತಃ ಜಗತ್ತು ಸತ್ಯವು. ಜೀವರೆಲ್ಲರು ತತ್ವತಃ ಸತ್ಯ ಭೇದವುಳ್ಳವರು. ಜೀವ–ಗಣರೆಲ್ಲ ಭಗವಂತನ ಅನುಚರರಾಗಿ ನೀಚೋಚ್ಚ ಭಾವವುಳ್ಳವರು (ತಾರತಮ್ಯ) ಜೀವರ ನೈಜ ಸುಖಾನುಭವವೇ ಮುಕ್ತಿಯು. ನವ ವಿಧ ದ್ವೇಷರಹಿತ ಅಮಲಾ ಭಕ್ತಿಯೇ ಮುಕ್ತಿಯನ್ನು ಪಡೆಯಲು ಮುಖ್ಯ ಸಾಧನ ಪ್ರತ್ಯಕ್ಷ, ಅನುಮಾನ, ಆಗಮಗಳು ಮೂರು ಪ್ರಮಾಣಗಳು. ಸಕಲ ಪೌರುಷೇಯ ಮತ್ತು ಅಪೌರುಷೇಯ ಸದಾಗಮಗಳಿಂದ ವೇದ್ಯನಾದವನು ಈ ಬ್ರಹ್ಮ. ಶಬ್ದ ವಾಚ್ಯನಾದ ಶ್ರೀ ಹರಿಯು ಎನ್ನುವ ಈ ನವ ವಿಧ ಪ್ರಮೇಯಗಳೇ ಸಕಲ ಶಾಸ್ತ್ರ ಸಾರವು.

ಸರ್ವ ವೇದ, ಉಪನಿಷತ್ತು, ಪುರಾಣ, ಮೂಲ ರಾಮಾಯಣ. ಸಮೀಚೀನ ಶೃತಿ, ಸ್ಮೃತ್ಯಾದಿ ಪ್ರಮಾಣಗಳು, ಮಹಾ ಭಾರತ-ಭಾಗವತ ಪಾಂಚರಾತ್ರ–ಪುರುಷ ಸೂಕ್ತಾದಿ ಸಂಹಿತೆಗಳು ವಿಷ್ಣು ಸರ್ವೋತ್ತಮತ್ವವನ್ನೇ ಆದಿ, ಮಧ್ಯ, ಅಂತ್ಯದಲ್ಲಿ ಪ್ರತಿಪಾದಿಸುತ್ತವೆ.

ಭಗವದನುಗ್ರಹದಿಂದಲೇ, ಅವನ ಅನುಗ್ರಹ ಪಡೆದ ಮಾನವರೇ ಮುಕ್ತಿಗೆ ಅರ್ಹರಾಗುವರು ಬ್ರಹ್ಮ ಅಥವಾ ಆತ್ಮ ಶಬ್ದವು ಗುಣ ಪರಿ-

ಪೂರ್ಣತ್ವವನ್ನು ಸೂಚಿಸುತ್ತದೆ. ಪೂರ್ಣತ್ವ ವಾಚ್ಯಾತ್ಮ ಶಬ್ದಃ ಆತ್ಮಾ ಪೂರ್ಣತ್ವ ಕೋ ಹರಿಃ ಎಂಬಂತೆ ಶ್ರೀ ಹರಿಯೇ ಗುಣ ಪರಿಪೂರ್ಣನಾಗಿ ರುವ ಕಾರಣ ಆತ್ಮಾ ಎನ್ನಿಸುತ್ತಾನೆ

ನಾನು ಈಶ್ವರನಾಗಿರುತ್ತೇನೆಂದು ತಿಳಿಯುವುದು ಸರ್ವಥಾ ಯೋಗ್ಯವಲ್ಲ. ಜೀವತ್ವ-ಈಶತ್ವ ಜಾತಿಗಳು ಬೇರೆ ಬೇರೆ. 'ದ್ವಾಸುಪರ್ಣ' ಎಂಬ ಮೊದಲಾದ ವಾಣಿಗಳು ಜೀವರಿಗೆ ಅಶನ. ಈಶ್ವರನಿಗೆ ಅನಶನ ಧರ್ಮ ಗಳನ್ನು ಬೇರೆ ಬೇರೆ ಹೇಳಿದೆ. ಜೀವರಿಗೆ ಪ್ರಯೋಜನವಿದೆ. ಈಶ್ವರನಿಗೆ ಪ್ರಯೋಜನವಿಲ್ಲ ಎಂದು ವ್ಯಕ್ತಪಟ್ಟದೆ. ಶ್ರೀ ಹರಿಯು ಬೇರೆ, ನಾನು ಬೇರೆ ಎಂಬ ಜ್ಞಾನವೂ, ಅವನು ಸರ್ವೋತ್ತಮನೆಂಬ ಜ್ಞಾನವು ಜ್ಞಾನಿ ಗಳಿಗೆ ಮಾತ್ರ ಉಂಟು. ಅನಿತ್ಯತ್ವ. ದೇಹ ಹಾನಿ, ದುಃಖಪ್ರಾಪ್ತಿ, ಅಪೂರ್ಣತೆಗಳಿಂದ ಪಾರಾಗಲು ವಿವಿಧ ಭಕ್ತ್ಯಾದಿಗಳಿಂದ ಭಗವದನುಗ್ರಹ ಬ್ರಹ್ಮಭಾವ-ಯಾ-ಪೂರ್ಣತ್ವವನ್ನು ಹೊಂದಿ ತನ್ನ ಯೋಗ್ಯತೆಗನುಗುಣ ವಾದ ಸ್ಥಾನದಲ್ಲಿ ವಿಹರಿಸುತ್ತ 'ವಿಮುಕ್ತಶ್ಚ ವಿಮುಚ್ಯತೇ' ಎಂಬಂತೆ ಇರಬಹುದು.

(ಶ್ರೀ ಕೆ. ರಘುನಾಥಾಚಾರ್ಯ)

ಅದ್ವೈತ—ಎಂದರೆ ಎರಡಿಲ್ಲದ್ದು. ಎಲ್ಲ ತತ್ವಗಳ ಮತ್ತು ಧರ್ಮ ಗಳ ಚರಮಸೀಮೆ ಎಂದು ಸ್ವಾಮಿ ವಿವೇಕಾನಂದರು ಅಭಿಪ್ರಾಯ ಪಟ್ಟಿರುವರು. ವೇದಾಂತ ಶಾಸ್ತ್ರದಲ್ಲಿ ತಿಳಿದುಕೊಳ್ಳಬೇಕಾದ 1) ನಾನು ಯಾರು? 2) ಈ ಜಗತ್ತೆಂದರೆ ಏನು? 3) ಬ್ರಹ್ಮ ಅಥವ ದೇವರೆಂದರೆ ಯಾವುದು? ಈ ಮೂರು ಮುಖ್ಯ ಅಂಶಗಳಲ್ಲಿ-ಆಳವಾಗಿ ವಿಚಾರಿಸಿ-ಈ ಮೂರರ ಹಿಂದಿರುವುದೂ ಒಂದೇ ಪರಬ್ರಹ್ಮ-ಯಾ-ಆತ್ಮ ವಸ್ತುವೆಂಬ ನಿರ್ಣಯಕ್ಕೆ (ವಿಜ್ಞಾನಿಗಳ ಸಂಶೋಧನೆಯ ಕೊನೆಯ ಪರಿಣಾಮದಂತೆ) ಬಂದಿರುವರು. ಅಹಂ ಬ್ರಹ್ಮಾಸ್ಮಿ – 'ತತ್ವಮಸಿ' (ತತ್ ತ್ವಂ ಅಸಿ)

ಬ್ರಹ್ಮ ಸತ್ಯ-ಜಗನ್ಮಿಥ್ಯೆ ಎಂಬುವು ಅದ್ವೈತ ಧರ್ಮದ ಸಾರ. ನನ್ನೊಳಗೇ ಸಕಲ ಬ್ರಹ್ಮಾಂಡವೂ ಅಡಗಿದೆ. ಅಂತರ್ಮುಖಿಯಾಗಿ ನೋಡಬೇಕು. ಹಗ್ಗವೆಂದು ಗೊತ್ತಾಗುವವರೆಗೂ ಅದು ಹಾವಾಗಿಯೇ ತೋರುವುದು. ನೈಜ ವಸ್ತು – ಸತ್ಯವನ್ನರಿಯುವುದಷ್ಟೇ ಅಲ್ಲ. ಅದರ ಅನುಭವ ಜ್ಞಾನ ಹೊಂದಿರಬೇಕು. ಮೂರು ಅವಸ್ಥೆ (ಎಚ್ಚರ, ಸ್ವಪ್ನ, ನಿದ್ರೆ)ಗಳಲ್ಲಿ ಕಾಣುವುದೆಲ್ಲ ಮಿಥ್ಯೆ – ನಾನು ಮಾತ್ರ ಸತ್ಯವೆಂಬ ಅರಿವಾಗಬೇಕು. ಈಶನು ಜಗತ್ತಿನ ಅಣು-ರೇಣು, ತೃಣ, ಕಾಷ್ಠಾದಿಗಳಲ್ಲಿ ವ್ಯಾಪ್ತನಿರುವ ಕಾರಣ ಎಲ್ಲವೂ ಪರಬ್ರಹ್ಮ ಸ್ವರೂಪವೇ. ಏಕ ಏವ ಪರಮೇಶ್ವರಃ ಕೂಟಸ್ಥ ನಿತ್ಯಃ-ಎಂದು ಒಂದೇ ಅರ್ಥದಲ್ಲಿ ಪ್ರಯೋಗವಾಗಿದೆ

ಶೃತಿ-ಸ್ಮೃತಿಗಳ ಅರ್ಥ ಪ್ರಮಾಣಕ್ಕೆ ಶ್ರೀ ಶಂಕರರ ಭಾಷ್ಯವೇ ಅದ್ವೈತ ತತ್ವಕ್ಕೆ ಮೂಲಾಧಾರ.

—ವಿ ಶಿ ಷ್ಟಾ ದ್ವೈ ತ—

ಪ್ರಾಪ್ಯಸ್ಯ ಬ್ರಹ್ಮಣೋ ರೂಪಂ, ಪ್ರಾಪ್ತುಶ್ಚ ಪ್ರತ್ಯಗಾತ್ಮನಃ |
ಪ್ರಾಪ್ತ್ಯುಪಾಯಂ ಫಲಂ ಪ್ರಾಪ್ತೇಃ ತಥಾ ಪ್ರಾಪ್ತಿ ವಿರೋಧಿಚ||
ವದಂತಿ ಸಕಲಾ ವೇದಾಃ ಸೇತಿಹಾಸ ಪುರಾಣಕಾಃ |
ಮುನಯಶ್ಚ ಮಹಾತ್ಮಾನೋ ವೇದ ವೇದಾಂತ ವೇದಿನಃ ||

ವಿಶಿಷ್ಟಾದ್ವೈತ—ಈ ತತ್ವಗಳ ಸಾರವೆಲ್ಲ ಅರ್ಥ-ಪಂಚಕದಲ್ಲಿ ಅಡಗಿದೆ.

1) ಪರಮ ವ್ಯಾಪ್ತನಾದ ಪರಮಾತ್ಮ ಸ್ವರೂಪ-ಪರ, ವ್ಯೂಹ, ವಿಭವ, ಅಂತರ್ಯಾಮಿ, ಅರ್ಚಾ.

2) ಪರಮಾತ್ಮನಿಗೆ ಶೇಷಭೂತನಾದ ಜೀವ ಸ್ವರೂಪ-ಬದ್ಧ, ಮುಕ್ತ, ನಿತ್ಯ, ಎಂದು ಮೂರು ವಿಧ.

3) ಪರಮಾತ್ಮ-ಪ್ರಾಪ್ತಿಗೆ ಉಪಾಯ ಸ್ವರೂಪ (ಸಾಧನ)-ಕರ್ಮ-ಯೋಗ, ಭಕ್ತಿಯೋಗ, ಜ್ಞಾನಯೋಗ, ಪ್ರಪತ್ತಿ ಎಂದು ನಾಲ್ಕು ವಿಧ.

4) ಪುರುಷಾರ್ಥ ಸ್ವರೂಪ-(ಧರ್ಮ, ಅರ್ಥ, ಕಾಮ, ಮೋಕ್ಷ ಎಂದು ನಾಲ್ಕು ವಿಧ.

5) ಪರಬ್ರಹ್ಮ ಪ್ರಾಪ್ತಿಗೆ ವಿರೋಧ ಸ್ವರೂಪ-ಪರತ್ವ ವಿರೋಧಿ ಪ್ರಾಪ್ತ ಸ್ವರೂಪ ವಿರೋಧಿ, ಉಪಾಯ ವಿರೋಧಿ, ಫಲ ವಿರೋಧಿ, ಪ್ರಾಪ್ತಿ-ವಿರೋಧಿ ಎಂದು ಐದು ವಿಧ.

ಇವುಗಳ ಸಂಕ್ಷಿಪ್ತ ವಿವರಣೆ ಈ ಕೆಳಗೆ ಕೊಡಲಾಗಿದೆ.

ಪ ರ ಮಾ ತ್ಮ ಸ್ವ ರೂ ಪ

ದಿವ್ಯ ರಂಗನಗರಿಯಲ್ಲಿ ನಿತ್ಯ ಮುಕ್ತ ಚೇತನರಿಂದ ಸೇವಿಸಲ್ಪಡುವ ಶ್ರೀ ಪರ ವಾಸುದೇವರೇ ಪರರೂಪರಾಗಿ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಎಂಬ ನಾಲ್ಕು ವ್ಯೂಹಗಳಿಂದ, ಎಲ್ಲರ ಹೃದಯ ದಲ್ಲಿ ಅಂತರ್ಯಾಮಿಯಾಗಿ ನೆಲೆಸಿರುವನು. ಅಪ್ರಾಕೃತ ದಿವ್ಯ ಶರೀರಿ ಯಾದ ಪರಮಾತ್ಮನು ಹಯಗ್ರೀವ, ಹಂಸ, ಮತ್ಸ್ಯಾದಿ ದಶಾವತಾರ ಗಳನ್ನು ಪಡೆದು ಧರ್ಮ ರಕ್ಷಣೆಗಾಗಿ ಪ್ರಾಕೃತ್ವ ಸಜಾತೀಯ ಸ್ವರೂಪದಿಂದ ಕಂಡು ಬರುತ್ತಾ, ವಿಭವನಾಗಿ ರಂಗ, ವೆಂಕಟಾದ್ರಿ-ಇತ್ಯಾದಿ ದಿವ್ಯ ದೇಶ ಗಳಲ್ಲಿ ವ್ಯಕ್ತ ಸ್ವರೂಪನಾಗಿ, ಗೃಹಗಳಲ್ಲಿ ಅರಾಧ್ಯ ಮೂರ್ತಿಯಾಗಿ ಆಶ್ರಿತ ರಿಂದ ಸೇವಿಸಲ್ಪಡುತ್ತಿರುವ 'ಅರ್ಚಾ' ದಿವ್ಯ ಮಂಗಲ ಮೂರ್ತಿ.

—ಜೀವ ಸ್ವರೂಪ—

ಕರ್ಮ ಫಲಕ್ಕೆ ಸಿಕ್ಕಿ ಸಂಸಾರದಲ್ಲಿ ತೊಳಲಿ ಬಳಲುವ ಅನೇಕ ಜೀವರಾಶಿಗಳಿಗೆ ಬದ್ಧರೆನ್ನುವರು. ಸಂಸಾರಿಗಳಿದ್ದರೂ ಚೇತನರಾಗಿ-ಬಂಧ ಬಿಡಿಸಿಕೊಂಡು, ಜ್ಞಾನಿಗಳಾಗಿ-ಶಾಸ್ತ್ರ ವಿಧಿವತ್ತಾಗಿ ನಿರಂತರ ಭಗವಂತನ ನಿತ್ಯ ಕೈಂಕರ್ಯ ಮಾಡುತ್ತಾ - ನಿತ್ಯಾನಂದವನ್ನನುಭವಿಸುವವರಿಗೆ ಮುಕ್ತರು ಎನ್ನುವರು.

ಸರ್ವೇಶ್ವರನಾದ ಭಗವಂತನಂತೆ, ಅನಾದಿ ಜ್ಞಾನ ಸಂಕೋಚ ವಿಲ್ಲದೆ, ಯಾವಾಗಲೂ ಸಂಸಾರವನ್ನೇ ಅರಿಯದೆ (ನಿರ್ಲಕ್ಷಿಸಿ) ಭಗವಂತನ ನಿತ್ಯ ಕೈಂಕರ್ಯದಲ್ಲಿ ಸಾಮ್ರಾಜ್ಯನಿರತರಾದ-ಅನಂತ, ಗರುಡ, ವಿಷ್ವಕ್ಸೇನಾದಿ ನಿತ್ಯಸೂರಿಗಳಂತೆ - ನಿತ್ಯರು. ಮೇಲಿನ ತ್ರಿವಿಧ ಚೇತನರು ಪರಮಾತ್ಮನಿಗೆ ಶೇಷಭೂತರು, ಶರೀರ ಭೂತರು, ನಿಯಾಮ್ಯರು, ಪ್ರಾಪ್ಯ ಭೂತರು.

ಪರಮಾತ್ಮ ಪ್ರಾಪ್ತಿಯ ಸಾಧನೆಗಳು

ನಾನು ಮಾಡುವೆ. ಫಲ ನನ್ನದೆಂಬಭಿಮಾನ ತ್ಯಜಿಸಿ ಶ್ರುತಿ ಸ್ಮೃತಿ ಬೋಧಿತ ದೇವತಾರ್ಚನೆ, ತಪ, ತೀರ್ಥಯಾತ್ರೆ, ಯಜ್ಞ-ದಾನ ರೂಪ ವಾದ ನಿತ್ಯ ನೈಮಿತ್ತಿಕ ಕರ್ಮಾನುಷ್ಠಾನವೇ ಆತ್ಮಾವ ಲೋಕನಕ್ಕೆ ಸಾಧನ. ಈ ಕರ್ಮಾನುಷ್ಠಾನದಿಂದ-ಇಂದ್ರಿಯ ನಿಗ್ರಹಗೈದು. ಅಂತಃಕರಣ ಶುದ್ಧರಾಗಿ - ತನಗು, ಪರಮಾತ್ಮನಿಗೂ ಇರುವ ಸಂಬಂಧದ ನಿರಂತರ ಚಿಂತನೆಯೇ ಜ್ಞಾನಯೋಗ.

ತೈಲ ಧಾರೆಯಂತೆ ಅವಿಚ್ಛಿನ್ನವಾಗಿ ಅಂತ್ಯ ಕಾಲದವರೆಗೆ-ವರ್ಣಾಶ್ರಮ ಧರ್ಮಕ್ಕನುಗುಣವಾಗಿ ಭಕ್ತಿಯನ್ನು (ಪರಮಾತ್ಮನ ಜಪ, ಧ್ಯಾನ) ಸಾಧಿಸುವುದು-ಸರ್ವವನ್ನು ಭಗವಂತನಿಗರ್ಪಿಸಿ (ಷಡಂಗ ಯುಕ್ತ ವಾಗಿ ಶರಣು ಹೊಂದುವಿಕೆ.

ಪುರುಷಾರ್ಥ ಸ್ವರೂಪ

ಶೃತಿ ಸ್ಮೃತಿ ಪ್ರಕಾರ ವರ್ಣಾಶ್ರಮ ಧರ್ಮಕ್ಕನುಗುಣ ಸತ್ಕಾರ್ಯ ಮತ್ತು ಸತ್ಕರ್ಮವೇ ಧರ್ಮ. ದೇವ, ಪಿತೃ, ಭಾಗವತ ಆರಾಧನೆಗಳಿಗೆ ಧನ-ದಾನವೇ ಅರ್ಥ. ಗೃಹಸ್ಥಾಶ್ರಮದಲ್ಲಿ ಧರ್ಮಪತ್ನಿ ಯೊಡಗೂಡಿ ಪಿತೃ ಋಣ ತೀರಿಸುವುದೇ ಕಾಮ. ಸರ್ವ ಕಲ್ಯಾಣ ಗುಣ ನಿಧಿಯಾದ, ಸರ್ವಾಂತರ್ಯಾಮಿಯಾದ, ಜೀವಾತ್ಮನ ಅವಿದ್ಯೆ ಕಳೆದು ನಿತ್ಯ ಕೈಂಕರ್ಯಾನಂದದ ಪರಮಾತ್ಮನ ಅನುಭವವೇ ಮೋಕ್ಷ ಸ್ವರೂಪ.

ಪರಬ್ರಹ್ಮ ಪ್ರಾಪ್ತಿಗೆ ವಿರೋಧ ಸ್ವರೂಪ

ಶ್ರೀಮನ್ನಾರಾಯಣನಲ್ಲದೆ ಬೇರೆ ದೇವತೆಗಳಲ್ಲಿ ಪರತ್ವಜ್ಞಾನ, ದಿವ್ಯ ಅವತಾರಗಳನ್ನರಿಯಲು ಅಸಮರ್ಥತೆಯೇ ಪರತ್ವ ವಿರೋಧಿ.

ದೇಹಾತ್ಮಾಭಿಮಾನದಿಂದ, ಭಗವಂತನಿಗೆ ತಾನು ದಾಸನಲ್ಲವೆಂಬ ಅಹಂಕಾರವೇ ಪ್ರಾಪ್ತೃ ಸ್ವರೂಪ ವಿರೋಧಿ.

ಸಂಪೂರ್ಣ ಬ್ರಹ್ಮಾನುಭವ ಮೋಕ್ಷಕ್ಕಿಂತ ಲೌಕಿಕ ಪುರುಷಾರ್ಥ ಗಳಲ್ಲಿನ ಆಶೆಯೇ ಪುರುಷಾರ್ಥ ವಿರೋಧಿ.

ಭಗವಂತನಲ್ಲಿ, ಭಾಗವತರಲ್ಲಿ, ಅಪಚಾರವೆಸಗಿ ಅಸಹ್ಯ ವರ್ತನೆ ಯೇ ಪ್ರಾಪ್ತಿ ವಿರೋಧಿ.

(ವೇದಾಂತ ದೇಶಿಕರು ಶ್ರೀ ಡಿ. ಕೃಷ್ಣಯ್ಯಂಗಾರ್)

—ಶಕ್ತಿ ವಿಶಿಷ್ಟಾದ್ವೈತ—

ವೀರಶೈವ ಧರ್ಮ - ವಿಶ್ವ ಧರ್ಮ

(ಡಾ॥ ಆರ್. ಸಿ ಹಿರೇಮಠ, ಧಾರವಾಡ.)

ಶರಣ ಧರ್ಮ, ಜಗದಗಲ ಮುಗಿಲುಗಳನ್ನು ವ್ಯಾಪಿಸಿ, ಕಾಲವನ್ನು ಭೇದಿಸಿ ಚಿರಕಾಲ ಸ್ಥಿರ ಸಂಜೀವಿಯಾದ ಧರ್ಮ. ಅದಕ್ಕೆ ದೇಶ ಕಾಲಗಳ ಎಲ್ಲೆಯಿಲ್ಲ. ಮತ ವಿಷಯಗಳ ಹೋರಾಟವಿಲ್ಲ. ಮಾನವರಷ್ಟೇ ಏಕೆ, ಸಕಲ ಜೀವಾತ್ಮರ ಲೇಸನ್ನು ಸಾಧಿಸಲು ಈ ಧರ್ಮ ಹೆಣಗಿತು. ದಯೆಯೇ ಧರ್ಮವಾಯಿತು. ನುಡಿಯೇ ನಡೆಯಾಯಿತು. ಸೃಷ್ಟಿ ಸತ್ಯವಾಯಿತು. ದೃಷ್ಟಿ ಲಿಂಗವಾಯಿತು. ವೃಷ್ಟಿ ಸಮಷ್ಟಿಯಾಯಿತು. ಈ ಉದಾತ್ತ ಅನುಭಾವದ ಆಗರವಾದ ಶಿವಾನುಭವ ಮಂಟಪ ಮಾನವನ ಕಲ್ಯಾಣ ಮಂಟಪವಾಯಿತು. ಎಲ್ಲೆಲ್ಲೂ ಮಂಗಲ ವ್ಯವಸ್ಥೆ ನಿಂತಿತು. ಹಳೆಯ ಕೊಳೆ ತೊಳೆದು ಹೋಗಿ ಹೊಸ ಸೃಷ್ಟಿ ಉದಯವಾಯಿತು. ಇಲ್ಲಿ ಸಲ್ಲಿ ಅಲ್ಲಿ ಸಲ್ಲಬೇಕೆಂಬ ಶರಣ – ಧರ್ಮ ಮಾನವ ಜೀವನದ ನೆಲೆ-ಬೆಲೆಗಳ ಇತ್ಯರ್ಥ ಮಾಡಲು ಹೆಣಗಿ ಸಂಕುಚಿತ ಭಾವನೆಗಳ ಏರಾಟಕ್ಕೆ ಎರಗಲಿಲ್ಲ.

ಗಂಡು–ಹೆಣ್ಣು, ಮೇಲು-ಕೀಳು ಎಂಬ ಭಾವನೆಗಳನ್ನು ತೊಡೆದು, ಬೇಕು-ಬೇಡಗಳ ರತಿ-ವಿರತಿ ರಹಿತವಾದ ಧರ್ಮವನ್ನು ಎತ್ತಿ ಹಿಡಿಯಿತು. 'ಬಯಕೆ' ಯೆಂಡಲೇ ಮಾನವನ ಸಂಕಷ್ಟ ಮತ್ತು ಬಂಧನವೆಂದು ಅನೇಕ ಧರ್ಮಗಳು ಸಾರಿದಂತೆ ವೀರಶೈವ ಧರ್ಮವೂ ಸಾರಿತು.

ಶರಣ ಧರ್ಮ ಕ್ರಿಯಾ ಜ್ಞಾನಗಳ ಸಾಮರಸ್ಯವನ್ನು ಪ್ರತಿಷ್ಠಾಪಿಸಿತು. ಅಜ್ಞಾನದಿಂದ ಮಾಡುವ ಕ್ರಿಯೆ ಕರ್ಮವಾಗಿ ಧರ್ಮಕ್ಕೆ ಬಾಹಿರವಾಯಿತು. ಬಂಧನಕ್ಕೆ ಕಾರಣವಾಯಿತು. ಬೇಕು-ಬೇಡಗಳನ್ನು ತೊರೆದು ಪ್ರತಿ-ವ್ಯಕ್ತಿ ತನ್ನ ತಾನರಿದು ಸ್ವಲೀಲಾನಂದದಲ್ಲಿ ಇರುವ ಪರಮಾನಂದ ಗುರಿಯನ್ನು ಎತ್ತಿ ಹಿಡಿಯಿತು. ಭಕ್ತಿಯೆಂಬುದು ಕೇವಲ ಪರಮಾತ್ಮನನ್ನು

ಸಾಧಿಸುವ ಸಾಧನವಾಗದೆ ಪಂಚಮ ಪುರುಷಾರ್ಥವಾಯಿತು. ಆ ವಿಶ್ವ ಪ್ರೇಮದಲ್ಲಿಯೇ ಚರಾಚರ ಸೃಷ್ಟಿಯ ಬುದ್ಬುದಗಳು ಅವತರಿಸಿ ಲಯವಾಗುವವು. ಈ ಹಿನ್ನೆಲೆಯಲ್ಲಿ ಬಸವಣ್ಣನವರ ವಿಶ್ವಪ್ರೇಮ, ವಿಶ್ವ ಧರ್ಮ ಉದಯವಾಯಿತು. ಅದಕ್ಕೆ ಎಲ್ಲೆ - ಕಟ್ಟುಗಳಿಲ್ಲ ಸುಜ್ಞಾನದ ಸುಪ್ರಭಾತದಲ್ಲಿ ಕಾಯಕದ ಕರಗಳು ಚೈತನ್ಯಮಯವಾಗಿ ಮುನ್ನಡೆದು ಸಮತೆ, ಸತ್ಯ, ದಯೆ ಇಂತಹ ಉದಾತ್ತ ತತ್ವಗಳನ್ನು ಸಾಧನೆ ಮಾಡಿದವು. ಆ ಧರ್ಮದೆದುರು ವಿಜ್ಞಾನವೇನು? ಅಜ್ಞಾನವೇನು? ಎಲ್ಲ ಜ್ಞಾನಗಳು ಮಣಿದು ಮೈಗೂಡಬಲ್ಲವು.

ಬಸವಣ್ಣನ ಧರ್ಮ-ನಿಜ ಧರ್ಮ, ಅದು ವಿಶ್ವ ಧರ್ಮ.

(ಕೃಪೆ-ತರಳ ಬಾಳು ರಜತೋತ್ಸವ ಸಂಚಿಕೆ.)

....ಗ್ರಂಥ ಋಣ....

1) ಶ್ರೀ ರಾಮಕೃಷ್ಣಾಶ್ರಮ ಮೈಸೂರು, ಇವರಿಂದ ಪ್ರಕಟಿತ ಮತ್ತು ಶ್ರೀ ಆದಿ ದೇವಾನಂದ ವಿರಚಿತ ಉಪನಿಷತ್ತುಗಳು.

2) ಮೈಸೂರು ವಿಶ್ವ ವಿದ್ಯಾನಿಲಯದ ಪ್ರಚಾರ ಪುಸ್ತಕ ಮಾಲೆ- 1) ಋಗ್ವೇದ 2) ಉಪನಿಷತ್ ಪರಿಚಯ.

3) 'ಪರಿವ್ರಾಜಕರ' ಹಿಂದೂ ಧರ್ಮ ಮತ್ತು ಹಿಂದೂ ಸಮಾಜ.

4) ಶ್ರೀ ಕೃಷ್ಣದತ್ತ ಭಟ್ಟರ 'ವೇದ ಧರ್ಮ'.

5) ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳ ದೈನಂದಿನ ಪ್ರವಚನಗಳು.

ಶಾಂತಿ ಪಾಠ

ಓಂ ಭದ್ರಂ ಕರ್ಣೇಭಿಃ ಶೃಣುಯಾಮ ದೇವಾ।
ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ॥
ಸ್ಥಿರೈರಂಗೈಸ್ತುಷ್ಟುವಾಂ ಸಸ್ತನೂಭಿ ।
ವ್ಯಶೇಮ ದೇವಹಿತಂ ಯದಾಯುಃ॥

ಹೇ ದೇವತೆಗಳೇ! ಮಂಗಳವಾದುದನ್ನು ಕಿವಿಗಳಿಂದ ಕೇಳೋಣ: ಪವಿತ್ರವಾದುದನ್ನು ಕಣ್ಣುಗಳಿಂದ ನೋಡೋಣ, ದೃಢವಾದ ಅವಯವಗಳಿಂದಲೂ ಶರೀರಗಳಿಂದಲೂ ಕೂಡಿ (ನಿಮ್ಮನ್ನು) ಸ್ತುತಿಸುವರಾಗಿ ದೇವನಿಂದ ವಿಧಿಸಲ್ಪಟ್ಟ (ಪೂರ್ಣವಾದ) ಆಯುಸ್ಸನ್ನು ಪಡೆಯೋಣ.

ಉತ್ತಿಷ್ಠತ ಜಾಗ್ರತ ಪ್ರಾಪ್ಯ ವರಾನ್ನಿಬೋಧತ

ಏಳಿರಿ, ಎಚ್ಚರಗೊಳ್ಳಿರಿ, ಶ್ರೇಷ್ಠರಾದ ಆಚಾರ್ಯರನ್ನು ಹೊಂದಿ ಉಪದೇಶ ಪಡೆಯಿರಿ.

ಇಲ್ಲಿ ಏಳಿರೆಂದರೆ, ಎಲೈ ಜೀವರೇ! ಆತ್ಮಜ್ಞಾನ ಹೊಂದಲು, ಅದನ್ನು ದರ್ಶಿಸಲು, ಎಚ್ಚರಗೊಳ್ಳಿರಿ ಎಂದರೆ ಅಜ್ಞಾನ ನಿದ್ರೆಯಿಂದ, ಆಚಾರ್ಯರ ಉಪದೇಶವೆಂದರೆ-ಆತ್ಮನೇ 'ಅಹಮಸ್ಮಿ' ಎಂಬುದು.)

ಓಂ ಶಾಂತಿಃ ಶಾಂತಿಃ ಶಾಂತಿಃ

ARISE, AWAKE, STOP NOT
TILL THE GOAL IS REACHED.

(Swamy Vivekananda)

ಸರ್ವವ್ಯಾಪೀ-ಪರಮಾತ್ಮ

ಸರ್ವತಃ ಪಾಣಿಪಾದಂ ತತ್ಸರ್ವತೋಽಕ್ಷಿ ಶಿರೋಮುಖಂ ।
ಸರ್ವತಃ ಶ್ರುತಿಮಲ್ಲೋಕೇ ಸರ್ವಮಾವೃತ್ಯ ತಿಷ್ಠತಿ॥

ಭಗವದ್ಗೀತಾ ॥೧೩-೧೩॥

ಅದು (ಪರಮಾತ್ಮ ವಸ್ತು) ಎಲ್ಲೆಲ್ಲಿಯೂ ಕೈ-ಕಾಲುಗಳುಳ್ಳದ್ದು; ಎಲ್ಲೆಲ್ಲಿಯೂ ಕಣ್ಣು-ತಲೆ-ಬಾಯಿಗಳುಳ್ಳದ್ದು, ಎಲ್ಲೆಲ್ಲಿಯೂ ಕಿವಿಗಳುಳ್ಳದ್ದು, ಲೋಕದಲ್ಲಿ ಎಲ್ಲವನ್ನೂ ಆವರಿಸಿಕೊಂಡು ಇರುತ್ತದೆ.

ಈಶಾ ವಾಸ್ಯಮಿದಂ ಸರ್ವಂ
ಯತ್ಕಿಂಚ ಜಗತ್ಯಾಂ ಜಗತ್

ಈಶಾವಾಸ್ಯೋಪನಿಷತ್-೧

ಜಗತ್ತಿನಲ್ಲಿ ಎಲ್ಲೆಡೆಯೂ ಈಶನಿಂದ ಮುಚ್ಚಲ್ಪಟ್ಟಿದೆ.

... ... ಸ ಭೂಮಿಂ ವಿಶ್ವತೋ ವೃತ್ವಾ ಅತ್ಯತಿಷ್ಠದ್ದಶಾಂಗುಲಂ

(ಪುರುಷ ಸೂಕ್ತ)

ಆತನು ಈ ಭೂಮಂಡಲದ ಎಲ್ಲಾ ಕಡೆಗೂ ಆವರಿಸಿ ಹತ್ತು ಅಂಗುಲದಷ್ಟು ಇನ್ನೂ ಹೆಚ್ಚಾಗಿದ್ದಾನೆ.

ಎತ್ತೆತ್ತ ನೋಡಿದತ್ತತ್ತ ನೀನೇ ದೇವಾ!
ಸಕಲ ವಿಸ್ತಾರದ ರೂಹು ನೀನೇ, ದೇವಾ;
ವಿಶ್ವತಸ್ ಚಕ್ಷು ನೀನೇ, ದೇವಾ,
ವಿಶ್ವತೋಮುಖ ನೀನೇ ದೇವಾ,
ವಿಶ್ವತೋಬಾಹು ನೀನೇ ದೇವಾ,
ವಿಶ್ವತಃ ಪಾದ ನೀನೇ ದೇವಾ,
ಕೂಡಲ ಸಂಗಮ ದೇವಾ

(ಬಸವಣ್ಣನವರ ವಚನಗಳು-೫೩೫)

ಮುದ್ರಕರು : ಶ್ರೀ ಬಾಲಾಜಿ ಪ್ರಿಂಟಿಂಗ್ ಪ್ರೆಸ್, ಬಳ್ಳಾರಿ.



ಪ್ರಕಾಶಕರು : ಅಧ್ಯಾತ್ಮ ಕಾರ್ಯಾಲಯ, ಬಳ್ಳಾರಿ-೫೮೩೧೦೧.